TIGHT BINDING BOOK

UNIVERSAL
LIBRARY
OU_198178
UNIVERSAL
LIBRARY

# ತಾವರೆಕೆರೆ

ಕೈಲಾಸಂ

ಪ್ರಕಾಶಕರು:

ಮಾಧವ ಸನ್ಸ್,

ಬೆಂಗಳೂರು.

ಮೊದಲು ಮುದ್ರಿಸಿದ್ದು :
**ಕತೆಗಾರ ಮಾಸಪತ್ರಿಕೆ.**

ಎರಡನೆಯ ಪ್ರಕಟಣೆ
೧೯೩೫

ತಿದ್ದಿದ ಮೂರನೆಯ ಹೊಸ ಮುದ್ರಣ
ಆಶ್ವಯುಜ ಶುದ್ಧ ದ್ವಿತೀಯ ಸ್ವಭಾನುಸಂವತ್ಸರ
1st October 1943

ತಿದ್ದಿದ ನಾಲ್ಕನೆಯ ಹೊಸಮುದ್ರಣ
೧೯೪೫.

COPY RIGHT

Staging, Translating filming & all other rights reserved
For permission to stage, apply to the Publishers
with royalty of
Rupees Twenty
for each performance

**ಬೆಲೆ ಎಂಟಾಣೆ**

# ತಾವರೆಕೆರೆ

## ೧

ನಮ್ಮೂರು ತಾವರೆಕೆರೆ. "ಹೆಸರು ರಂಗಣ್ಣ, ಮುಸುಡಿ ಮಂಗಣ್ಣ" ಅಂದ್ಹಾಗಲ್ಲ ನಮ್ಮೂರು ; ಕೆರೆಯಿಧೆ. ಮೆಟ್ಲುಗ್ಳು ಮುರ್ದೂ ಕಟ್ಟೆಗಳು ಕುಸಿದಿದ್ರೂನೂವೆ, ಕೆರೆಯಿಧೆ. ಇಸ್ನೀರೋ! ಕಮಲಕ್ಕೆ "ಪಂಕೇರುಹ" ಅಂತ ಹೆಸರಿಟ್ಟ ಪ್ರಾಣಿ, ನಮ್ಮ ಕೆರೆ ನೀರ್ನ ನೋಡ್ದೇ ಇಟ್ಟಿರಬೇಕು. ಬಿಳೀ ಘೋತ್ರಾನ ಕೆರೇಲಿ ಅದ್ದಿದ ಗೃಹಸ್ಥ, ಒಗೆದ ಘೋತ್ರಾನ ನೋಡಿ ವಾನ ಪ್ರಸ್ಥಕ್ಕೆ ಸೂಚನೇಂತ ಕಂಡ್ಕೊಳ್ಳೋ ಅಷ್ಟು ಕೆಂಪೇರುತ್ತೆ ಬಗ್ಗಡದ ಬಣ್ಣ, ಬಟ್ಟೇಗೆ!

ಇನ್ನು--"ತಾವ್ರೇ"ನೂ ಸುಕ್ಕಿಲ್ಲ....ದಡದಿಂದ ದಡದವರಿಗೂ ಧಂಡ್ಯಾಗಿ ಹರಡಿವೆ, ದಂಟುಗ್ಳು....ತಾವ್ರೆ ದಂಟುಗ್ಳು. ಈಜೋಕೇಂತ ಇಳ್ದ ಇಸುಮುಗಳು....ಈಜೋದ್ಮರ್ತು....ಮುಳುಗೋದ್ ಥಟ್ಟನೆ ಕಲ್ತು....ಇನ್ನೂ ಈಚೆಗೆ ಬರ್ತಿಧಾರೆ!

ಹಾಸನದ ಡಿಸ್ಟ್ರಿಕ್ಟ್ ಯೇಳ್ಬೇಕೇ ನಾನು, ಕೇಳ್ಬೇಕೇ ನೀವು! ಯಥಾ ಪ್ರಕಾರ ಕೆರೆಕಟ್ಟೆ ಮೇಲೆ ಗುಡಿ, ಜಕಣಾಚಾರಿನೋ ಡಕಣಾಚಾರಿನೋ ಕಡದದ್ದು, ಹೊರ್ಗೂ .ಒಳ್ಗೂ, ಗೋಪ್ರ ಧ್ವಜಸ್ಥಂಭದಿಂದ ಗರ್ಭಗುಡಿ ಪ್ರತಿಮೆ ಸಹಿತ. ಮತ್ಯಥಾಪ್ರಕಾರ ದೇವ್ರು, ಶ್ರೀಕೃಷ್ಣ....ಕಡೆದವನ ಧ್ಯೇಯ. ಇನ್ನೂ ಯಥಾಪ್ರಕಾರ ವೇಣುಗೋಪಾಲಮೂರ್ತಿ. ಮತ್ತಿನ್ನೂ ಯಥಾಪ್ರಕಾರ ಮೈಸೂರು ಚರಿತ್ರೆಯ ಆರ್ಭಟದ ಭರಾಟೆ ಗಲಾಟೇಲಿ ಭಿನ್ನಮೂರ್ತಿ ಭೀಭತ್ಸವಿನ ಸಾರಥಿ....ಮೂಗಿಲ್ಲದ ಮೂರ್ತಿ. ಆದ್ರೇನು....ಮುಕುಂದನ ಭಕ್ತರು....ಮುರಳೀಧರ ಬಾರ್ಸೋದು ಮೂಂಗಿಂದಲ್ಲ 'ಬಾಯಿಂದ'

ಅಂಬೋದ್ದ ನಂತರ್ ಏಸೋ ಕಾಣೆ::::ನಿಜ್ಜ ಪ್ರೋಜೆಯಿಲ್ಲ, ಪ್ರನಸನ್ನಾ ನಿರ್ಲಜ್ಜ ಸಲವನಾತ್ಮನಿಗೆ: ಈ ಗುಡಿ, ಕೆರೆಯು ಈಜೆ ಕಜ್ಜೆನೆಂತೆ:

ಬದುರ್ ಕಜ್ಜೆನೆಂತೆ ಇನ್ನೊಂದ್ದು ಡಿ, ಕಾಳವ್ವಂದು! ಜಾಣೆ ಜಾವುಂಡಿ! ಕೃಷ್ಣ ರಾಮ ಇತ್ಯಾದಿಗಳಿಗಿಂತ ಮುಂಚೆನೇನೋ ಇದ್ದ ಆದಿ ಶಕ್ತಿಯಾದ್ರೂನೂನೆ, ಈ ಗಂಡ್ಸು ದೇವರುಗಳ ಜೊತೆಯ ನನ್ನೊಳ್ಳಿ ನಿಗ್ರಹನಾಗಿ ಹುಟ್ಟ್ ನಾಗು ನಿತ್ಯಯು ಕೈಕಾಲು ಮುರಿಸ್ಕೊಳ್ಳ ಅಪಾಯಾನ ಅರ್ತ ಮಾಡ್ರಯು ಇಲ್ಲಾವೆ ಏಪಾರ್ಡಾದ ನಂತರನೇ ಉದ್ಭವಿಸಿದ್ದು: ಜಂಗಸಿನ ಬುದ್ಧಿನೇ ಬುದ್ಧಿ: ಆಸ್ತೇನು;::::::::ಗಂಡಸರು ತುಂಬಿದರು: ಈಕೇಗೂ ಪ್ರೂಜೇ ಇಲ್ಲ!

ಊರಲ್ಲಿ ಸ್ನೇಗೋ ಕಾಲ್ರಾನೋ ಸಿಡುಬೋ::::ಇಲ್ಲ ಏಲ್ಲಾನೂ ಪ್ರೋ ಏದ್ದು::::ಬೀದಿ ಬೀದಿಗೂ ಹತ್ತಿಸ್ಕತ್ತು ಹೆಣಗಳು ಹೊರಳ್ತಾಇದ್ದ ಪಜ್ಜತ್ತೇ ನೇನೇಯೇ::::ಅಭಿಷೇಕ, ಅಲಂಕಾರ, ಅರ್ಚನೆ, ಆರಾಧ್ನೆ, ಆವ್ಯನ್ನೆ! ಭಕ್ತರ ದರ್ಶನ ಆಕೇಗೆ! ಅದುವರಿಗೂ ಬೆಳಿಗ್ಗೆಲ್ಲಾ ದನ ಕುರಿ ಕಾಯೋ ಹುಡುಗರಿಗೆ ಬೀಡಿ ಸೇದೋಕೂ, ಮಧ್ಯಾಹ್ನವೆಲ್ಲಾ ಸಲೀಲ ರಂಗ್ ಆಡೋ ಊರಿನ್ನ ಟಂಗರಿಗೂ, ಸಾಯಂಕಾಲವೆಲ್ಲಾ ಬಿಟ್ಟರ ಪುರಾತನ ಚರಿತ್ರೆ ಬಿಟ್ಟಗರ್ ಬೀರ್ಸ್ಕೊಳ್ತಾ ಸಲಸ್ಪರ ಪ್ರಶಂಸೇಂಬೊಸಂದೀಲಿ ಸ್ವಯಂ ಪ್ರೂಜೇಂಬೊ ಸವಿಾ ರಾಷ್ಟ್ರೇನ ಸಲ್ಲಿಸ್ಕೊಳ್ಳೋ ಊರಿನ ಮುದಿಗೂಬ್ಬಗಳಿಗೂ ಸ್ಥಾನ-ಆಸ್ಥಾನ:::: ಆಸ್ತಾನು::::ರಿಕಾಣಿ::::ಕಾಳವ್ವನ್ನ ಡಿ: ಮುದಿಗೂಬ್ಬಗಳೂಂತ ಮುಯ್ಯಾರ್ಜೆ ಯುಲ್ಲ ಹೇಳಿದ್ದು ನನ್ನ ಮಾತಿ ನಿತ್ಯ ಮಾರತ ತಪ್ಪು: ಇಲ್ಲಿ ಸಂಧ್ಯಾಕಾಲ ಸೇರೂ ಇಸಮುಗಳು ಏದೇ ಆದ್ರೂನೂನೆ, ಸಂಚಸ್ರಾಣಗಳು ತಾಸ್ರೇಕೆರಗೆ: ಸಂಚಾಯಿತಿದಾರರು! ಶಾನುಭೋಗ ಮುಖ್ಯಾಭಟ್ಟರು, ಶೇಕ್ದಾರ್ ಶಾನುಣ್ಣ, ಬಿಲ್ಲದ ಕಂಟ್ರಾಕ್ಟ ಗಡ್ಡ್ ಖಾನ್, ಬಿತ್ರ ಅಂಗ್ಡಿ ಆದಿಮೂರ್ತಿಶೆಟ್ಟ್ರು, ಗ್ರಾಮದಗೌಡ ದೊಡ್ಡಬಿಟ್ಟ ಬೋರೇಗೌಡ:

ಮಧ್ಯಾಹ್ನ ಭಟ್ಟ್ರ ಮನೇನೇತೆ ಪ್ರಜ್ಞಲಿಸಿ, ಶಾನುಭೋಗರ ಹೊಲ ಕಾಸಿ, ಖಾನ್ ಸಾಹೇಬ್ರ ಕಣ್ಣಿನ ಅತಿ ಮಿರಾರಿ, ಶೆಟ್ರು ಬೀಳೆ ಬಳ್ಳಿಗಳ್ಳ::::

ಬೆಳಗಿ.... ಗೌಡನ ಗದ್ದೆಯ ಅಂಚಿನಲ್ಲಿ ಮುಳುಗಬೇಕೆಂದಿದ್ದ ಸೂರ್ಯನಿಗೆ ಜ್ಞಾಪಿಸೋಕೆ.... ದಿನ ತಪ್ಪದೆ.... ಒಂದೊಂದು ಸಾಯಂಕಾಲವೂ ಸೇರೋದು ಸಂಪ್ರದಾಯ.... ಈ ಪಂಚಪ್ರಚಂಡರು ಕಾಳಪ್ಪನ ಗುಡಿ!—ಭಟ್ರು! ಕಾಮುಯೋಗ ಸುಬ್ಬಾಭಟ್ರು, ದೊಡ್ಡ ಮುನಿತನ ಹಿಂದಿನವರಲ್ಲಿ! ಸದ್ಯ "ಮುನಿ" "ಪಾರ್ವತೀಶ" ಶೆಟ್ರಿಗೆ, ಆದಿಮೂರ್ತಿ ಶೆಟ್ರಿಗೆ! "ತನ" ಬಡತನ! ಅದ್ರೇನೂ.... ರಕ್ತ.... ರಕ್ತಾನೇನೇಯೇ!.... ಜನಿಸಾರ ಜನಿಸಾರ ನೇನೇಯೇ! ಈತ್ನ ಹಿರಿಯರ ಕಾಲ್ದಲ್ಲಿ ಮುನಿಬಾಗಿಲು ದನ ಧನ ಧಾನ್ಯ ಇತ್ಯಾದಿ ಸಂಪತ್ತಿನಿಂದ ಊರನ್ನೆಲ್ಲಾ ಕಿರುಬಿಟ್ಟನ್ನೇತೆ ಬಂಗರದ ಹಾಗೆ ಯೋಚನೇತ್ಯಾ ತಿರುಗಿಸ್ತಿದ್ರೇ—ಹಿರಿಯರ ಯೋಗ ಬಾಬ್ತು ಇಲ್ದಿದ್ರೂನೂ—ಆವರಿಂದ ಪೆತ್ತೆಯ್ಯಲ್ಲಾ ತುಳುಕ್ತೆತೂ ರಕ್ತದ ಪ್ರಭಾವದಿಂದ್ಲೂ.... ತನ್ನ ಉಪಾಧಿ ಪ್ರಯೋಗದಿಂದ್ಲೂ.... ತನ್ನಾಳಿಗೆ ತುಡೀಲಿ ಊರು ಊರನ್ನೇ. ತತ್ತ್ವದೇವರೇತ್ಯಾ ತಿಪ್ಪಂತ ತಿರುಗಿಸೂ ಅಪರೂಪವಸ್ತು ಭಟ್ರು, ಸುಬ್ಬಾಭಟ್ರು! ಯೋರೇನು ಹೇಳಿದ್ರೂ ಕೊನೇಮಾತು ಈತನದೆ: ಉದಾಹರಣೆಗೆ ಹೇಳ್ಬೇಕೆ, ಒಂದು ಕಥೆ....

ಒಂದು ಸಾಯಂಕಾಲ ಶೆಟ್ರು ಎತ್ತಿದ್ದ್ರು ಮಾತು: "ನನ್ನ ಬೀಳೀಪತಿ ತೋಟದಲ್ಲಿ ಸಿಕ್ಕಿದ ನಿಧಿ:-ನಾನು ನನ್ನ ದುಡ್ಡಿನಲ್ಲಿ ಕೊಂಡುಕೊಂಡ ಬೀಳೀಪತಿ ತೋಟದಲ್ಲಿ ಸಿಕ್ಕಿದ ನಿಧಿ—ತೋಟ ಕೊಂಡುಕೊಂಡಮೇಲೆ ತೋಟದಲ್ಲಿ ನಾನು ತೋಡಿದ ಭಾವೀಲಿ ಸಿಕ್ಕಿದ ನೀರು ನಂದು ಹೇಗೋ ಹಾಗೇನೇ ನಾನು ತೋಡಿದಕಡೆ ಸಿಕ್ಕಿದ ನಿಧೀನೂ ನನ್ದೇನೇಯೇ!" ಅಂದ್ರು:

ಭಟ್ರು—ನಿಜ ಶೆಟ್ರೆ, ಅದ್ರ ಸರಕಾರಾಂತೋದು ಒಂದು ಇದೆ, ನಮ್ಮ ನಿಮಗೆ ಸಿಕ್ಕಿದ ಬಾಬ್ತುಗಳಿಗೆಲ್ಲಾ ಸಭಾಗಿ!

ಶೆಟ್ರು—ಮುಂಚೆ ಸರ್ಕಾರನುಯ್ಯಾ ಮೂಲ ಚೆನ್ನೇದಿ!.... ಕಾಲಯ್ಯಾ, ತೋಟಾನ್ನ ಹಚ್ಚಿಕ್ಕೊಂಡೇಕಾಕ ಯೋಚಾಧಿ ಯೋಚಾದಿಕೇನೀ ಇಟ್ಟಿದ್ದೇನಾ ಕಂಡಾಯನಟ್ಟ, ನೇನು? ಪಾಂಚ್ಹ್ಲೋನೇ ತೀರ್ಪುರೇಯು ಸರ್ಕಾರ ಬುದ್ಧಿವಂತ! ನಾ ತೋಟನುತ್ತೋ ನೇನು ಕೊಟ್ಟಿಕ್ಕಿನ ಬಾವಿಯೂ ಚಿಕ್ಕನ ಬೀಳ್ಕ್ಕು ಬ

ಐಕಟ್ಟು ನಾದ್ನಾದ್ರೂ, ನೀನು ಕೊಟ್ಟೆನಗುಂತ್ಲೊ ಚಿಕ್ಕನ್ನಿಧೀನೂ ಅದೇ ಐಕಟ್ಟು ನಾದ್ನಾದೆ! ಸರ್ಕಾರು ಎಕ್ಕಡ ಒಚ್ಚೆ ?

ಭಟ್ರು—' ಶೆಟ್ರೇ, ನಿಧಿ ನಿಮಗೆ ಸಿಕ್ಕಿದ್ರೂ ಒಂದ್ವೇಳೆ....ಮುರೀಬೇಡಿ ಇಥೆ ಸರ್ಕಾರದ ಸನ್ನಿಧಿ! ಹೇಳ್ತೀನಿ ಕೇಳಿ ಚಿಕ್ಕದೊಂದು ಕಥೆ,' ಅಂತ ಪ್ರಾರಂಭಿಸಿದರು.

## ಭಟ್ಟರ ಕಥೆ.

ಶೆಟ್ರೇ! ನೀವೂ ನಮ್ಮೂರಿಗೆ ಹೊಸಬ್ರು. ನೆನ್ನೆಮೊನ್ನೆ ಬಂದವ್ರು. ನಮ್ಮೂರಿಗ್ಬಂದು ಈಗ್ತಾನೆ ಹತ್ತ್ಹನ್ನೆರಡು ವರ್ಷ. ನಾನು ಹೇಳೊ ಕಥೆ ಈಗ ಸರಾಸರಿ ನಲವತ್ತೈದು ವರ್ಷಕ್ಕೆ ಮುಂಚೆ ನಡೆದದ್ದು. ಈಗ ಹುಡುಗೀರ ಸ್ಕೂಲು ಇದೆಯಲ್ಲ, ಮುನಿಸಿಪಲ್ ಸ್ಕೂಲು! ಇದು ಆ ಕಾಲದಲ್ಲಿ ಮೂರಂತಸ್ತು ಮನೆ....ಗಂಧದ ಕಾಶೀಪತಯ್ಯಂದು. ಮಹಾಪ್ರಾಣಿ ಆತ. ಭಿಕ್ಷಾನ್ನ ಎತ್ತಿ ಹೊಟ್ಟೆ ಹೊರ್ಕೊಂಡು ಓಡಾಡುತ್ತಿದ್ದ ಬ್ರಹ್ಮಚಾರಿ.... ಮೈಸೂರು ಅತ್ಕಡೆಯೆಲ್ಲಾ ತಿರುಗಿ, ವ್ಯಾಪಾರಕ್ಕೆ ಷುರುಮಾಡಿ, ಸಾಂಬ್ರಾಣಿ ಕಡ್ಡಿ, ಬಿಲ್ಲೆ, ಕಸ್ತೂರಿಮಾತ್ರೆ ಇತ್ಯಾದಿಗಳು ಮಾರ್‍ತಾ ಮಾರ್‍ತಾ ಕೊನೇಗೆ ಮದರಾಸು ಬೊಂಬಾಯಿಗೆಲ್ಲಾ ಕಸ್ತೂರಿ ಗಂಧ ಸಪ್ಲೈ ಮಾಡೋದು, ಹೀಗೆಲ್ಲಾ ವ್ಯಾಪಾರ ಹಬ್ಬಿ—ಅವನ್ಭಿಕ್ಷಾನ್ನ ಬೇಡುತ್ತಿದ್ದ ಮನೆಗಳಲ್ಲೇ ಒಂದನ್ಕೊಂಡ್‌ಕೊಂಡು ಅದರ್ಮೇಲೆ ಎರಡುಪ್ಪರಿಗೆ ಕಟ್ಟಿ....

ಶೆಟ್ರು—ಅಯ್ತೆ ಯೇಮಿ....ಊರ್‍ಕೊಂದ್ರು ಇಪ್ಪುಡು ಉಂಡೆ ಕಾಶಿಪತಿ ಛತ್ರಮು.... ?

ಭಟ್ರು—ಹೌದು ಆತನದೇ ಧರ್ಮ. ಅಲ್ಲ್ಯೇ ಊರೊಳಗಿರೋ ಶ್ರೀಕಂಠನ ಗುಡೀಗೆ ಧ್ವಜಸ್ತಂಭ, ಚಿನ್ನದ ಕಲಶ, ಬೆಳ್ಳೀ ವಾಹನ, ಪಾರ್ವತೀ ಪರಮೇಶ್ವರರಿಗೆ ಚಿನ್ನದ ಕಿರೀಟಗಳು, ಎಲ್ಲಾ ಆತನ ಧರ್ಮ. ಅದೇನು ಲೀಲೇನೋ ಪರಮಾತ್ಮನ್ದು, ಬಡಪಾಯಿಗೆ ಗುಡಿಸಲುತುಂಬ ಮಕ್ಕಳು! ಹಣಗಾರನಿಗೆ ಎಳ್ಳು ನೀರು ಬಿಟ್ಟು ಒಂದ್ಹಿಡಿ ಪಿಂಡ ಇಡೋಕೆ ಒಂದು ಮಗು

ಇಲ್ಲ....ಈತನ ಹಣೇಬರಹವೂ ಹಾಗೆ. ಇದ್ದಕ್ಕಿದ್ದಹಾಗೆ ನೆನ್ನೆ ನೆಗಡಿ, ಈವತ್ತು ಛಳಿಜ್ವರ, ನಾಳೆ ಚಟ್ಟ, ಹೀಗೆ ತೀರ್ಕೊಂಡ! ಇನ್ನು ಮಕ್ಕಳಿಲ್ಲದ ಆ ವಿತಂತು, ಅವಳ ತಮ್ಮನ ಸಮೇತ ಬಾಚ್ಕೊಳ್ಕೊಳ್ಳೊಕ್ಕೆ ಒಡ್ವೇನೆಲ್ಲಾ ಬಾಚ್ಕೊಂಡು ಬಾಕಿ ಮನೆ ಭೂಮಿ ಇತ್ಯಾದಿಗಳ್ನ ಧರ್ಮಕ್ಕೇಂತ ಬಿಟ್ಬಿಟ್ಟು ಹೊರಟು ಹೋದಳು. ಮನೆ ಪಕ್ಕದಲ್ಲಿ ಈಗ ಬಯಲು....ಆಗ...............

.ಗಫF ಖಾನ್—ಓ ಬೊಮ್ಮಕ್ಕಾ....ಹೋಟೆಲ್ ಪಕ್ಕಮಕ್ಕಿ, ಮುಕ್ಕೇಕಫರ್ಮೀ ಜಮೀನ್ಬೀ! ಬಡಾ ತಕರಾರ್ ಬಿ ಅಮ್ಮ, ಆ ಜಮೀನ್ಗೆ ಲೇಕಿ, ಗನ್ಕ ಜಮಾಯಿಸಿ....ಗೂಡ್ ಬನಾಯ್ಸೋಕೆ ಲಾಗ ಮೋಸ ಕರ್ಕೆ. ಬಿಲ್ಕುಲ್ ಚಿತ್ರಿಗೂ ಛೋಡಾಯಿಲ್ಲ, ಭಾಡಗೇಗೂ ದಿಯಾಕೆಯಿಲ್ಲ: "ಖಾಲಿ ಜಮೀನ್! ನನ್ಗೆ ಬೇಕು!" ಅಂತ ಖಾಲಿ ಜಮೀನ್ ಇಟ್ಕೊಂಡಿ ಧಾಕೆ! ನನ್ಗೆ ತಾಜೂಬ್! ಅಕೇಲ ಇದ್ದಾವ ಆ ಹೆಂಗ್ಸು, ಮುಕ್ಕೇಕಫರ್ಮೀ. ಹೋಟೇಲ್ ಮಾಡ್ಕೆ ಬೇಕಾಸ್ತಿಲ್ಲ....ಕ್ಯಾಂಟಿ ಬನಾವ್ನಿ ಕ್ಯಾ ಮಸ್ಸ್ ಕಮಾಯಿಂಗೇ....ಕ್ಯಾಂಟಿZ'ಂದಗೀ ಗುZರಾತೀ!....ನನ್ಗೆ ತಾಜೂಬ್!

ಭಟ್ರು--ನಾಮೇಟ್ರೀ! ಬ್ರಾಹ್ಮಣರ ಸೂಕ್ಷ್ಮ ನಿಮಗಿನ್ನು ಗೊತ್ತಿಲ್ಲ. ನಿಮ್ಮಗಳ ಸಾವಿ....* 'ಬೊಮ್ಮಕ್ಕಮಾಮಿ ಮರ್ಯಾಂಬೋದೇ ಅಸ್ಸಿಭಾದೆ. ಆಕೆ ಮಾಡ್ತಿದ್ದೋ ದೋಸೆ ವ್ಯಾಪಾರದ ಗುಟ್ಟಿಗೆ 'ಮೆಂತ್ಯದದೋಸೆ ಪುಟ್ಟಮ್ಮ' ಅಂತ ಬೊಸೂರಿಂದ ಹರಿಹರ, ಕೋಲಾರದಿಂದ ಕೊಳ್ಳೇಗಾಲದ ವರೆಗೂ.... ನಡರೋ ಪ್ರಾಂತಗಳ ಅಂಜೂನೂ, ಬಿಲ್ಲಿನ ಕಂಟ್ರ್ಯಾ ಗಫF ಖಾನ್ ಸಾಹೇಬರ ಹೆಸ್ರು ಸೋಲೋದಿಲ್ಲ. 'ನೋಡಿ; ಯಾವತ್ತು ಬೇಕಾದ್ರೂ ಹೋಗ್ನೋಡಿ. ಬೆಳಿಗ್ಗೆ ಆರು ಘಂಟೆಗೆ ಘಮಘಮಾದ ಮೆಂತ್ಯದ ದೋಸೆ ಕೊತ್ತಂಬರೀಚಟ್ನಿ ವ್ಯಾಪಾರ ಎಂಟೂವರೆಘಂಟೇಲಿ ಮುಗಿದು ಇನ್ಮಧ್ಯಾಹ್ನ ಅದೇ ದೋಸೇ ಅದೇ ಚಟ್ನಿ, ಮೂರು ಘಂಟೆಯಿಂದ ಐದು ಘಂಟೆ ಒಳ್ಗೆ ತೀರಿದ್ರೂನೂವೆ ಖರ್ಚೆಲ್ಲಾ ಚಾತ ಬಾಕಿ ದಿನದಿನಕ್ಕೆ ಕಮ್ಮಿಯಿಲ್ದೆ ಮೂರು ರೂಪಾಯಿ ಆದ್ರೂ ಗಿಟ್ಟಿ, ತಿಂಗಳಿಗೆ ನಮ್ಮ ತಾಲ್ಲೂಕು ಮಾಮಲೇದಾರ್ರ ನೂರು ರೂಪಾಯಿ ಸಂಬಳಕ್ಕಿಂತ ಐವತ್ತೋ ಅರವತ್ತೋ ಎಪ್ಪತ್ತೋ ಸಂಪಾದಿಸ್ತಿದ್ಧಾಳೆ, ಆ ವಿತಂತು-ತನ್ನ ಚೋರ್ ಮನೆ ತನ್ನೊ

ಅಕ್ಕ, ಅವರ ತಾತ ಇಟ್ಟೋದ ಗಟ್ಟಿ!.... ಇನ್ನುೞೇಗೇ ಕೂಡಿಹಾಕ್ತಿದ್ದೋ ಡುಡ್ಡು!.... ನುಕ್ಕಳಿಲ್ಲ ನುರಿಯುಲ್ಲ:

ಬೋರೇಗೌಡ—ಎಲ್ಲಾ ಅಪ್ಪ್ರಜ್ಜ್ಯಂಗೆ ಈಕೇನೂಸೇ ಈ ಜಿಪ್ರಣ ಗಾಪ್ಪೇಕ್ರೇಯು ಪ್ಪ್ರಿಂಗೆ ಜೋದಡ್ಡು, ಆವಯ್ಯ ಆ ನುುಡುಕಯ್ಯ! ನನ್ನಿಗೈತ್ತು ಕತೆ: ತಟ್ಟಿಗೂ ಸಾಬ್ರಿಗೂ ಗೊತ್ತಿಲ್ಲ: ಯೀಳ್ವಿ, ಸ್ಪುಟ್ಟನ್ಪ್ರನಜ್ಜ ....ಊಪ್ಕೆ ಕೊಂಡ್ಕೋಳ್ಗೇ ಡುಡ್ಡು ಇಟ್ಕೊಂಡೂಸೆ.... ನುತ್ತಿ.... ಸ್ತಿನಪ್ಪತ ಸ್ತಿಸೇಳ್ಪ್ರನೇಸೇಯು ಚಂಡ:

ಭಟ್ಟ—ಬೋರೇಗೌಡ್ರು ಜೇಳ್ವಾಗೇ ತಟ್ಟೇ! ಸ್ಪುಟ್ಟನ್ಪ್ರನ ಅಜ್ಜ ....ನನಪ್ಪಾಜೇಬ್ರು ಕಪ್ಪನಾತ ಕಟ್ಟೋಕೆ ಚಿತೆಗೋ ಬಾಡಿಗೆಗೋ ಕೇಳಿ ಇಲ್ಲ ಅಪ್ಪಿಕೊಂಡ ಜನಿಾನಿನ ನೇತ್ರ ಆಗ ಇಷ್ಟ ನುನೇಮಿ ನಿಧಿ ಸಿಕ್ಕಿದ ಗಲಾ ಟೇಮಿ ಸರ್ಕಾರ್ದ್ ನನ್ನಿಧೀಮಿ ಸಿಕ್ಕೊಂಡು ಬಿಡ್ಡಾಡಿದ.... ತೇನಾಜೇನಿ ಸುಬ್ಬಣ್ಣನ ಚರಿತ್ರೆ, ಜೇಳ್ತಿದ್ದೋದು ನಾನು: ನನಗೆ ಆಗ ಹನ್ನೆರಡು ಹಡ್ಪೇರು ನಯುಸ್ಸು: ನುನೆ ಬಾಕಿಲು ಸರಿಸ್ಕಿತಿ ಈಗ ಇಡ್ಡಾಗಲ್ಲ.... ಜನಾಖರ್ಚಿನ ತೆಪ್ಪು ಇಟ್ಟ ಸ್ಪ್ರಣೆಗಳಲ್ಲ, ನನ್ನುಸ್ಸ್ರು, ನನಪ್ಪಾತ.... ಇಲ್ಲಿ: ಬಿಟ್ಟಿಳಿ ಕುಟುಂಬದ ಜೋಳ್ಕಿ.... ಜನಾಬ್ಬಾರಿಯುಪ್ಪ—ಸಾಜೇಬ್ರು ಭಾಸೇಮಿ ‘ಅಪ್ಪಾಜ್’ ಅಗಿ ಓಡಾತ್ತಿದ್ದ ಊತಿಲ್ಲಾ! ಕಾಳೇಗೂ ರಾನುಸ್ಪಿರಕ್ಕೆ ಪಾರಿ ಯುಲ್ಲ ನನುಪ್ಪ್ರರು! ಪ್ಪಿತಾಗಿಗಳು ಗೋಸಾಯಿಗಳು ಕಂಡುಬರೋದು ನಿರಳ ನನುಪ್ಪ್ರಸ್ಕಿಳಿ! ಆಪ್ರೆ ಒಂದಿನ, ಈ ಎದುರ್ ಕಟ್ಟೇನೇತ್ರೆ, ಆ ನುೂಗು ನುುರಿದ ಗೋಸಾಲಸ್ಪಾನಿಗುಡಿ ನುುಂಟೆ ಕೂತಿದಾನೆ, ಒಬ್ಬ ಪ್ಪಿತಾಗಿ! ಆಗ ನೆುಟ್ಟ್ರ ಭಪ್ರ: ನೀರು ನಿನುFಲ: ಕೆರೆ ತುಂಬಿ ಸ್ನಾನಪಾನಕ್ಕೂ, ನುತ್ತ್ರದೆಯುರ ಸ್ಪ್ರಾಚೆ ಸ್ಪ್ರನಸ್ಪಾರಕ್ಕೂ ಬೀಡಿಹಾಟು ತುಂಬಿದ ಈ ಜೇನಿ ಗುಡೀನೂ ಶುಭ್ರನಾಗಿದ್ದ.... ನೂರಾರು ಜನ ಓಡಾತ್ತಿದ್ದ ಸ್ಪ್ರಾಂತ್ಯ ಇದು, ಆಗ: ಒಂದು ದಿನ ಸ್ಪ್ರಾತಃಕಾಲ ನೋರೆಬುರುಜೆಗಳು ಕಟ್ಕೊಂಡು ಇಳ್ಳ ಈಜಿ ಜೊರ ಗ್ಗಂಡು ಬಟ್ಟೇ ಒಂತ್ತು ತಿರುಗಿಸ್ಸಿ; ನಾನು ನನ್ನ ಜೊತೇಮಿದ್ದ ನಾಲ್ಕೈದು ಹುಡುಗರು! ತಿರುಗಿಸ್ಸಿ! ಎದುರು ಕಟ್ಟೇಕಚೆ ಕೂತಿದಾನೆ ಸ್ಪ್ರಭು! ನೊಳಪತ್ರ

ಜಟೆ ಮುಂಡೇಮೇಲೆ; ಬತ್ತ್ಲೆ ಮೈಯಿತ್ತು! ಮೈಯೆಲ್ಲಾ ವಿಭೂತಿ, ಬಿಗ್ರ-ಗೊಂಡು ಲಂಗೋಟಿ: ತೊಡೆ ಮೇಲೆ ಹೊದ್ದುಕೊಂಡು ಉಂಗ್ರದ ಸಮೇತ ಉಕ್ಕಿನ ಸಲಾಕೆ: ಕಣ್ಣುಗಳು ಮುಚ್ಕೊಂಡು....ಅವನ ದೊಡ್ಡ ಗಂಟಲಿನಲ್ಲಿ ಒಂದೇ ಸಮನೆ....ಈಗ್ಲೂ ಜ್ಞಾಪಕ ಬರುತ್ತೆ....'ಅಲಕ್ ನಿರಂಜನ್! ಭಂಡಾರ! ಭರ್ಪೂರ್! ಕಾಳ್ಬುಂಟಕದೂರ್! ಶ್ರೀ ಸೀತಾರಾಮ್ ನಾರಾಯಣ ಭಗವಾನ್!' ಅನ್ನೋದೂ, ಎರಡು ಕೈಯಿಂದ....ಅದೇನೋ ಹೇಳ್ತಿದ್ದ ಸಾಹೇಬ್ರೆ....ಗಾಂಜಾ.... ಭಂಗಿ ಬಾಬ್ತು?

ಗಜ ಕೃಷಾನ್—ಗೊಡಾಕ್ಷ....?

ಭಟ್ರು—ಹೂ....ಅದ್ಕೆ, 'ಉಫ್!' ಅಂತ ಹೇಳೋದು, ತಿರುಗಾ 'ಅಲಕ್ ನಿರಂಜನ್—' ಇತ್ಯಾದಿ; ಆಶ್ಚರ್ಯ ಪಡುಗೆಲ್ಲಾ! ಹೀಗೆ ವಾರಕ್ಕೊಂದು ದಿನ ಊರೆಲ್ಲಾ ನೋಡಿ, ಊರೊಳಕ್ಕೆ ಬರ್ತಿದ್ದ ಆ ಗೋಸಾಯಿ: ಮಕ್ಕಳಿಗೆ ವಿಭೂತಿ ಕೊಟ್ಟು ಬೇಡಿ ಇತ್ಯಾದಿ ನಿರ್ವೋದು; ಇವನ್ನು ತಾಯಿತ್ತು....ಯಂತ್ರ ಈ-ಬಾಬ್ತುಗಳು, ದೆವ್ವ ಬಿಡ್ಸೋಕೆ, ಪಿಶಾಚಿ ಬಿಡ್ಸೋಕೆ, ಆಸ್ತಿ ಜೋಸ್ಯಂತ್ರ ಇತ್ಯಾದಿಗಳು, ಹೀಗೆಲ್ಲಾ ಊರ್ಗೆ ವಾರಕ್ಕೊಂದು ದಿನದಲ್ಲಿ ಮಾಡಿದ....ಮೂರಾರು ಉಪಕಾರಗಳು, ಮಾಡಿದ್ರೂ ಮೂವೆ; ಒಂದ್ಸಿಡಿಗಾಸು ಮುಟ್ಟದ ಹಾಗೆ, ಬಂದದ್ದು ತಂದೋರ್ಯಾತ್ರೆಯಾರೆ ಎಸೀತಿದ್ದ ಈ ಬೈರಾಗಿ, ಭಟ್ರನೆ ಒಂದು ದಿನ ಗಂಧದ ಕಾಶೀಪತಯ್ಯನ ಮನೆ ಎದುರಿಗೆ ನಿಂತು, ಅತ್ತ ಇತ್ತ ಹೊಂಟ್ಟನೂ ಊರ್ನ್ಬಟ್ಟು ಸುತ್ತೂರಿಗ್ಯಾಗಿರೋ ಪತ್ಯಾರ್ರವಾನ ಮನೆಕಾವಲುಗಾರ, ಮುರುಕ್ಕಾ ತಿಳಿದ ಬಟ್ಟು ರಂಗಯ್ಯನ ಮುಖಾಂತ್ರ ತಿಳಿದು....ಅದ್ರ ಪಕ್ಕದ್ಮನೆ, ಈಗಿನ ಖಾದಿ ಬಜಾರ್ ಮೇಲೆ ಆಗ ಇದ್ದ ಮುಗ್ಗಲುಮನೆ, ತೀರಾ ಹೇಳಿ ಸುಬ್ಬಣ್ಣನ ಮನೆ ಜಗಲೀಲಿ ಕೂತು....ವಾನ್ನೋಕ್ಡ್ಯಾಗೆ....ಮುಟ್ಸ್ನೇಲೆ ಅತೆ ಇದ್ದವರಿಗೂ ಇಲ್ದಿದ್ದೋನು....ಊರ್ನ್ಲ್ಲಾ ಬೆಪ್ರಾ ಅನ್ನೊಂಡ ಸುಬ್ಬಣ್ಣನ್ನ ರಾಮೇಶ್ವರಕ್ಕೆ ಟ್ರೈನು ಛಾರ್ಜ್ ಕೇಳ್ದ....; ಮನೆಯಾತ್ನೋ....ಸಾವಿರಾಂತರ ರೂಪಾಯಿ.... ಬ್ಯಾಂಕುಗಳ ಮೇಲೇನೂ ನಂಬ್ಕೆ ಯಿಲ್ದೆ....ಮನೇಲೇ ಇಟ್ಕೊಂಡು ಒಂದು ಬಿಡಿ ಕಾಸು ಖರ್ಚ ಮಾಡೋಕೆ ಹಿಂಜರೀತ ಕಾಸಿಗೆ ಕಾಸು ಕೂಡಾಕ್ತಿದ್ದ ಲೋಭಿ.... ಬೇಡಿದ್ಕೋಗೋ ಬೈರಾಗೀಗೆ ರಾಮೇಶ್ವರದ ಟ್ರೈನ್ ಛಾರ್ಜ್ ಕೊಡ್ತಾನ್ಯೇ?

‘ಸಾಸ್ತ್ರಿ! ಹೊರಟು ಹೋಗು’ ಅಂದ. ಅದಕ್ಕೆ ಗೋಸಾಯಿ ಹಿಂದೀ ಭಾಷೇಲಿ ‘ದುದ್ದಿಲ್ಲಿದ್ರೆ ಬೇಡ. ಪಾಪಕ್ಕೆ ಒಂದಿಷ್ಟು ನೀರು ಆದ್ರೂ ಕೊಡು’ ಅಂದ. ಬ್ರಾಹ್ಮಣರ ಮನೆ, ಪಾತ್ರೆ, ಹಂಡೋರು ಕಾಸ್ಕೊಡೋರ ಕೈಲಿ ಇಡೋದಿಲ್ಲ, ಅಂದ್ಕಟ್ಟೆ ಬಲಿಸ್ಟಿ ಬಾಚಿ, ‘ಈ ಅಂಗೈ ತುಂಬ ನೀರ್ಬಿಟ್ರೆ ಸಾಕು, ಇದೂ ಇಲ್ಲ ಅಂದ್ರ್ಯಾ....ನಾಳೆ ಬಂದು ನರಕಕ್ಕೆ ಎಳೆದು ಪಾಪದ ಸೀಸ ನಿನ್ಗಂಟಲ್ಗೆ ಸುರಿಯೋ ಕಾಲಾನ ಬಿಡ್ಲೇ ಹೋಗ್ಲೋ ಅಂದ. ಜಗ್ಲೀಲಿ ಕೂತಿಧಾನೆ ಸ್ಥಿರಾಗಿ. ಬೀದೀಲಿ ನಿಂತು ನೋಡ್ತಿದ್ದೇವೆ ನಾವೆಲ್ಲಾ. ಗೋಸಾಯಿ ಬೆದರ್ಕೇಗೆ ಬೆಚ್ಚಿದ್ದು ಜಗಲೀಗೆ ಒಂದ್ಚೆಂಬಾತ್ರೆ ನೀರ್ತಂದು ಮುಂದೆ ಚಾಚಿದ ಆ ಗೋಸಾಯಿಯು ಬಲ ಅಂಗೈಯಲ್ಲಿ ಒಂದಾತ್ಕೈಬಿಟ್ಟು ನೀರು ಬಗ್ಸೋನ್ತಲ್ಲೇ ‘ಸಿಲ್ಸು ಬಸ್ ಬಸ್!’—ಎಂದು ಎದ್ದುನಿಂತು ಹರಸ್ತಾನೆ ಅಂಗೈನ! ಆ ನಾಲ್ಕುಪಟ್ಟು ನೀರು, ಹಾವಿನ ಎಗರ್ದಾಗೆ ಎಗುರುತ್ತೆ ಅಂಗೆ ಅಲ್ಲಾಡಿ ಅಂಗೈಲಿ! ಆ ನೀರು ಎಗರಿದ್ದಾಗೆಲ್ಲಾ ಬೆಂಕಿಯುಷ್ಟೆ ಮನೆ ಒಳಹೊಕ್ಕುಕ್ಕೆ ಇದ್ದರಾಗಿ. ನಿಲ್ಲಾ ಮುಚ್ಚಿದಂತೆ, ದ್ವಾರೇಲಿ ಬಂದೋನ್ನ ಹಾಗೆ ಬರದಕ್ಕೇಳಿ ಗಾಬರಿಬಿಟ್ಟಿತ್ತು ಸಬ್ಬಣ್ಣನ ಮನೆ. ಹೊರಟೆಯಲ್ಲಾ ಬೇಗ್ನ ನಾಲಿ ಹೊರಗೋಯಿತು ಸುತ್ತಾಪ್ಪದ. ತುಂಬ್ಗಾದ ಕಿಳಿಂದು ಸುಟ್ಟುಹೋಗಿ [illegible] ರಂಗಯ್ಯನ್ನ ಹಂದ ‘ಇವನೇಪ್ಪ ಬೆಂಕಿ ಏನು ಹೇಳು’ ಅನ್ನುತಲ್ಲೇ....ಆ ಗೋಸಾಯಿ, ರಂಗಯ್ಯನ್ನ ಒಂಗೆ ನೋಡಿಂದು ಬಾಗಿಲು ದಾಟಿ.... ಈ ಕಥೆ ರಂಗಯ್ಯ ಆಮೇಲೆ ಅನುಭಾರ ಹೇಳ್ತಿದ್ದ: [illegible] ಬೀಡಿತ್ತು ಅದ್ದು ಘಂಟೆ ಹೇಳ್ತೀನೇ ಬೆಂಕಿ [illegible]...ದೇವರುಗಳು ದೊಡ್ಡ ತಾಳ್ಳಗೆ ಆಫೀಸಿನವರ ಗಳ್ದು [illegible] ‘ಇನ್ [illegible] ಬಚಾವಿ, ಸುನ್ನಾ, ಹೇಳ್ದಾ....[illegible]. [illegible] ಉಸಿದ್ರಾರ್ ಹೈ. ಪೋಕ [illegible] ಭೀ ತಾಯಿರ್ ಭೀ ಹೈ ಮುಝೆ ; [illegible] ಅದ ಅದ ಓಸ್ಟೇಶ ಮಂಜೂರ ಹೋತೆಹೇ.... [illegible] ಪಗ್ಗೆರೆ ಬಿಸ್ತರ್ ಖಬರ್ ಛೋಡ್ತೇಹೇ....ಸಿಧಿ ನಿಕಾಲ್ತೇ ಕೇಲಿಯೆ ಗ್ಯಾರೇಜ್ ಮುಝೆ ಹೈ. ಮಗರ್ ಗರಜ್ ಎ [illegible] ಹೈ, ಸಹಿ ತಲಾಷ್ [illegible]” ಅಂದ [illegible] ಹಾಗೆ ಸುಬ್ಬಣ್ಣನ [illegible] ಬೇಕೋಸ್ಲೇನೋ....

ರಂಗಯ್ಯನ ಮೂಲಕ ಆ ನಿಧಿ ಆ ಮುಂದಿನ್ಕೋಣೇಲೇಯೋ ಎಲ್ಲೋ ಹೂತಿರೋ ಸಮಾಚಾರ ಮುಂಡೇಗ್ಹುತ್ತಿ....ನಿಧಿ ಹುಡ್ಕೊ ಗಲಾಟೇಲಿ ನೆಲ ಎಲ್ಲಾ ಅಗಿಯೊ ಅಪಾಯ ಒಂದ್ಕಡೆ....ಅಗ್ಬ್ಯೋದ್ರ ನಷ್ಟ ಒಂದ್ಕಡೆ....ಅಲ್ಲಿ ಅಗ್ದು ಸಿಕ್ಕಬಹುದಾದ ಗೋಸಾಯಿ ಹೇಳ್ತಿರೋ ಬೆಳ್ಳಿ, ಚಿನ್ನ, ರತ್ನಗಳ ಲಾಭ ಒಂದ್ಕಡೆ, ಎದ್ರೆದುರ್ಗೆ ತೂಗ್ತಾ ಪೇಚಾಡಿ ಕೊನೇಗೆ ಪೂಜೆ ಪುನಸ್ಕಾರದ ಖರ್ಚು....ಅಂದಾಜು ಹಾಕಿದ ಐದು ರೂಪಾಯಿ ಸಮೇತ....ಅಗೆದ ನೆಲಾನೆಲ್ಲಾ ತಿರುಗಿ ತುಂಬಿ ಸರಿಮಾಡೋ ಖರ್ಚು....ತಿಂಗಳಿಗೆ ಏಳು ರೂಪಾಯಿ ಸಂಪಾದ್ನೇಲಿ ಬದುಕಿರೋ ರಂಗಯ್ಯಂದೂ....ನಿಧಿ ಸಿಕ್ಕಿದ ಪಕ್ಷಕ್ಕೆ ರೂಪಾಯ್ಲಿ ಎಂಟಾಣೆ ತನ್ದೂ, ಆರಾಣೆ ಗೋಸಾಯಿದೂ ಎರಡಾಣೆ ರಂಗಯ್ಯಂದೂಂತ ಕ್ಲಿಪ್ತಿಸ್ಕೊಂಡು....ಸುಬ್ಬಣ್ಣನೇ ಹನ್ನೆರಡಾಣೆ ಸ್ಟಾಂಪು ಹಚ್ಚಿದ ಕಾಗದದಮೇಲೆ ಇದ್ನೆಲ್ಲಾ ಬರೆದು....ಅಕ್ಕಪಕ್ಕದ ಮನೆ ಓದ್ಬರಹ ತಿಳಿಯದ ಇಬ್ರು ದನ ಕಾಯೊ ಕೆಲಸ್ದವ್ರ ಹೆಬ್ಬೆಟ್ಟು ಗುರುತ್ನ ಸಾಕ್ಷಿ ಹಾಕ್ಕೊಂಡು....ಪ್ರಾರಂಭ.... ಮಾರನೆದಿನ ಶುಕ್ರವಾರದಿಂದ ನಿಧಿ ಬೇಟೇಗೆ!!

ನೆಲವೆಲ್ಲಾ ನಾಲ್ಕಡಿ ಅಗೆದದ್ದಾಯಿತು....ಅಟ್ಟ ಸೂರು ಕಿತ್ತದ್ದಲ್ದೆ ಹೆಂಚು ಹೆಂಚು ಬಿಡ್ಸಿ ಬಿಡ್ಸಿ ನೋಡಿದ್ದಾಯಿತು. ಒಟ್ನಲ್ಲಿ ಏಳು ದಿವಸದ ಕೆಲ್ಸದ ಫಲ ಪೂಜ್ಯ. ಸುಬ್ಬಣ್ಣ ಷುರು ರಂಗಯ್ಯನ ಮೇಲೆ ರೇಗೋಕೆ. ಗೋಸಾಯಿನೋ "ಹೈ! ಕಹ್ತಾಹೂಂ, ಹೈ! ಯೇಹೀಖಾನೆಮೇಚ್ ಹೈ! ಭೂಮಿಭಿ ಖಾಲಿ! ಆಕಾಶ್ಭಿ ಖಾಲಿ, ತಾಹಂಭಿ, ಹೈ ಇಸ್ಕೋಲೀಮೇಚ್ ಹೈ ನಿಧಿ" ಅನ್ನೋಕೆ ಷುರು! ಇನ್ನು ಸುಬ್ಬಣ್ಣನೋ "ಹಿರಣ್ಯಕಶಿಪು ಸಾವ್ತಪ್ಪಿಸಿಕೊಳ್ಳೋಕೆ ಬ್ರಹ್ಮನ ಹತ್ತಿರ ವರ ಬೇಡ್ದಾಗೆ ಆಕಾಶದಲ್ಲೂ ಇಲ್ಲ, ಭೂಮಿಾಲೂ ಇಲ್ಲ, ರಾತ್ರೀಲೂ ಇಲ್ಲ, ಹಗಲೂ ಇಲ್ಲ, ಒಳಗೂ ಇಲ್ಲ, ಹೊರಗೂ ಇಲ್ಲ" ಅಂತ ತೀರ್ಮಾನಿಸಿ ಸೂರನ್ನು ಸೋರೋಹಾಗೆ ಮಾಡಿ ನೆಲವನ್ನೆಲ್ಲಾ ಅಗೆದು....'ನನ್ನ್ಗತಿ ಯೇನು'ಂತ ಸುಬ್ಬಣ್ಣ. 'ತಡೀರಿ ಸ್ವಾಮಿ ಬೈರಾಗಿ ಬೆಪ್ಪಲ್ಲ! ತಿಳಿದ ಮನುಷ್ಯ!....ಸ್ವಲ್ಪ ಸುಧಾರ್ಸ್ಕೊಳ್ಳಿ'ಂತ ರಂಗಯ್ಯ.... ಅಷ್ಟರಲ್ಲೇ ಗೋಸಾಯಿ 'ನಿಧೀತೋ ಹೈ! ಜಮೀನ್ ಬಗೈರ್, ಆಕಾಷ್ ಬಗೈರ್, ಯಹೀ ಖೋಲೀಮೇ ರಹ್ನಾತೊ....ಆಂ!....ದಿವಾರ್ಮೆ ರಹ್ನಾ!' ಅಂದು

ನಾಲ್ಕು ಗೋಡೆಗಳಲ್ಲಿ ಒಂದೊಂದನ್ನೂ ನೆಲದಿಂದ ಸೂರಿನವರಿಗೂ ಏಣಿ ಸಹಾಯ ಇಟ್ಕೊಂಡು ಮುಷ್ಟೀಲಿ ಗುದ್ದುತಾ ಬಂದೂಬಂದೂ ಒಂದೊಂದು ಗೋಡೇಲೂ ಇದುವರಿಗೂ 'ಥಕ್!' 'ಥಕ್!' ಅನ್ನಿಸ್ತಿದ್ದ ಮುಷ್ಟಿ ಹೊಡೆತ ಒಂದ್ಕಡೇಲಿ ಮಾತ್ರ 'ಥಂಗ್!' 'ಥಂಗ್!!' ಅನ್ನುತ್ತೂ ಇದ್ದೇ....ಉಸ್ರು ನಿಂತ್ಹೋಯ್ತು ಸುಬ್ಬಣ್ಣನಿಗೆ. ಗೋಸಾಯಿಗೋ, ಕರೀಮೀಸೆ, ಕರೀದಾಡಿ ಮಧ್ಯೆ ತುಟಿಗಳು ಬಿಚ್ಚಿ ಬೆಳ್ಳಂ ಬೆಳ್ಗೆ ಬೆಳಗ್ತಿರೊ ಹಲ್ಲು ಪರಸೇನ ಕಿರೀತಾ.... 'ಏ ಹಾಂಪೈ!....ಅಭಿ ಸಾಪ್ ಲೋಹೇಕ ಸಲಾಕ್, ಅಪ್ನಾಪಾಸ!' ಅಂದ! ಇನ್ನೇನು ಕಬ್ಬಿಣದ ಗಡಾರಿ, ಹಂಡೆ ತುಂಬ ನೀರು, ಒದಗಿಸ್ದ ಸುಬ್ಬಣ್ಣ. ಜಟ್ಟಿರಂಗಣ್ಣ ಗೋಸಾಯಿ ಇಬ್ರೂವೆ ಒಬ್ಬರಿಗೊಬ್ರು ಸರ್ದಿ ಬದ್ಲಾಯಿಸ್ತಾ ಸರಾಸರಿ ಎರಡಡಿಯಾದ್ರೂ ಇದ್ದ ಗೋಡೇನ ಕ್ರೈ ಸೋ ಲೋ ವರ್ರೂ ಕೊಯ್ಯೋದು; ಸುಬ್ಬಣ್ಣ ನೀರೆರಚೋದು, ಹೀಗ್ಮಾಡಿ ಗಡಾರಿ ಕಬ್ಬಿಣ ಆ ಇಟ್ಗೆ ಗೋಡೆ ಹಾಸಿ ಲೋಪ ಲೋಹಾನ ತಾಕಿದ 'ಠಂಗ್!' ಅಂಬೊ ಶಬ್ದ ಕೇಳ್ತೋ ಇಲ್ವೋ....ಸುಬ್ಬಣ್ಣ ಮೂರ್ಛೆ ಬಿದ್ದದ್ದು ಆಶ್ಚರ್ಯವಲ್ಲ!!

ಮಧ್ಯರಾತ್ರಿ! ಕೋಣೇಲೊಂದೇ ದೀಪ! ಗೋಸಾಯಿ ಅರಶಿನಾನೂ ನೀರೂ ಕಲ್ಸಿಟ್ಟ ಮಹಾಲಿಂಗದ ಮುಂದೆ ತುಪ್ಪದಲ್ಲಿ ಉರೀತಿರೋ ನೀರಾಂಜನ ಒಂದೇ ದೀಪ. ರಂಗಯ್ಯ ಹಂಡೆನೀರ್ನ ಸುಬ್ಬಣ್ಣನ ಮುಖಕ್ಕೆರಚಿ ಆತನ್ನ ಕೊಡವಿ ಕುಕ್ಕರಿಸಿ, ಬೀಕವನೂ ಚೇತರಿಸಿಕೊಂಡು ಕಣ್ಣು ಬಿಡೋಹೊತ್ತಿಗೆ ಸರಿಯಾಗಿ, ಗೋಸಾಯಿ ಗೋಡೆ ತೂತ್ನ ವಿಸ್ತರಿಸಿ ಗೋಡೆ ಒಳಗೆ ಕೈಬಿಟ್ಟು, ಬೆಳ್ಳೀ ತಟ್ಟೆಗಳು, ಚೊಂಬುಗಳು, ಪಂಚ್ಪಾತ್ರೆಗ್ಳು, ಪನ್ನೀರ್‌ದಾನಿಗ್ಳು....ಚಿನ್ನ ದಲ್ಲಿ ಬಳೆ, ಡಾಬು, ವಂಕಿ, ಬಾಜಿಬಂದು, ಜೋಮಾಲೆ, ಕಾಸಿನ್ಸರ ಇವುಗಳ್ನೆಲ್ಲಾ ಒಂದು ಗುಂಪ್ಮಾಡಿ ಇನ್ನು ಇವುಗಳ ಮುಂದೆ ಕೆಂಪು ಪಚ್ಚೆ ಪದಕ, ನೀಮೆ ಕಮಲದ ಬೆಂಡೋಲೆ, ಕಡಕು, ಮೂಗ್ತಿ, ಬೇಸರಿ, ನಾಗಮುರಿ, ಈ ಬಾಬ್ತು ಗಳ್ನೂ ಪೇರ್ಸಿ...."ಅಭಿ ಖಲಾಸ್ ನಿಧಿ. ಅಭಿ ಅಂದಾಜ್ ತೋಲ್ಕೆ ಮೇರ ಹಿಸ್ಸ ದೇದೇವ್. ಮುಝೆ ರಾಮೇಶ್ವರಂ ಜಾನೆ ದೇವ್" ಅಂದ. ಚೇತರಿ ಸ್ಕೊಂಡು ಸುಬ್ಬಣ್ಣ, ಸಿಕ್ಕಿದ ನಿಧೀಲಿ ಒಂದೊಂದು ಅಸ್ಬಾಬನ್ನೂ ಪರೀಕ್ಷಿಸಿ ಕೈಯ್ಯಲ್ಲಿ ಎತ್ತಿ ತೂಗಿ ಅಂದಾಜು ಹಾಕ್ತಾ...."ಈ ಒಡವೆಗಳ್ನ ಒಪ್ಪಂದದ

ಪ್ರಕಾರ ಪಿಸ್ಸೆ ಹಾಕಿ ಈಗೀಗ್ಲೇ ಹಂಚ್ಕೊಳ್ಳೋದು ಅಸಾಧ್ಯ; ರಂಗಯ್ಯಾ! ನಾನ್ಹೇಳ್ದೇಂತ ಹೇಳಿ ಅಕ್ಸಾಲಿ ವೆಂಕಣ್ಣಾಚಾರೀನ ಕರ್‍ಕೊಂಬಾ. ಹೊತ್ತೀರಿಪ್ದ್ರೂನೂವೆ....ತುರುತ್ ಕೆಲಸ. ಇಪ್ಪತ್ತು ರೂಪಾಯಿ ಗಿಟ್ಟೋ ಅವಕಾಶ. ವರಗಲ್ಲು ತಕ್ಕಡಿ ಸರ್ವಾನ್ನೂ ಎತ್ಕೊಂಬಾಂ"ತ ರಂಗಯ್ಯನ್ನ ಸಾಗ್ಸಿ....ಆ ಸಿಕ್ಕಿದ್ನಿಧೀನ್ಮೇಲೆ ನಿಗ ತಪ್ದೇನೇ, ಹೊರಗ್ಹೋಗಿ ಒಳಗ್ನಿಂದ ಒಂದು ಚಿಪ್ಪು ಬಾಳೆಹಣ್ಣೂ, ಪಂಚಪಾತ್ರೆ ಹಾಲನ್ನೂ ಗೋಸಾಯಿ ಮುಂದಿಟ್ಟು....ಆತ ಫಲಾಹಾರ ಮಾಡಿ ಸಾಬ್ರು ಹೇಳಿದ 'ಗೊಡಾಹ್ಕ್'ನ ಅರಿಶಿನದ ಲಿಂಗದ ಮುಂದೆ ಬೆಳಗೋ ದೀಪ್ದಲ್ಲಿ ಹಚ್ಕೊಂಡು ಎರಡು ಮೂರು ದಮ್ಮು ಸೇದೋ ಷ್ಟರಲ್ಲೇ ಅಕ್ಸಾಲಿ ಸಮೇತ ರಂಗಯ್ಯನೂ ಬಂದು....ಸರ್ವ ಪರೀಕ್ಷೇನೂ ಮಾಡಿ ಒಟ್ನಲ್ಲಿ ಒಡವೆ ಪಾತ್ರೆಗಳು ಎಲ್ಲಾ ಸೇರಿ ಸರಾಸರಿ ಹತ್ತುಸಾವಿರ ರೂಪಾಯಿ ಅಂತ ಅಂದಾಜು ಹಾಕಿ ಬಂದ ಶ್ರಮಕ್ಕೆ ಆ ಲಿಂಗದ ಎದುರ್ಗೆ "ಸತ್ರೂ ಈ ಸಮಾಚಾರಾನ ಹೊರಗ್ಹಾಕೋದಿಲ್ಲಾಂ"ತ ಶಪಥಮಾಡಿ ಸುಬ್ಬಣ್ಣನ ಕೈಯಿಂದ ಇಪ್ಪತ್ತು ರೂಪಾಯಿ ಇಸ್ಕೊಂಡು ಅವನು ಹೊರಟುಹೋದಮ್ಲೆ.... ಅವನು ಹೋದ್ಮೇಲೆ....ಇವುಗಳ್ನೆಲ್ಲಾ ದುಡ್ಡಾಗಿ ಮಾರೋಕೆ ಒದಗುವ ಅನಾನುಕೂಲಗಳ್ನ ಸುಬ್ಬಣ್ಣ ಯೋಚಿಸಿ ಮನೆ ಒಳಗ್ಹೋಗಿ ಕಬ್ಬಿಣದ ಪೆಟ್ಟಿಗೆ ಯಿಂದ ಐದು ಸಾವಿರ ರೂಪಾಯಿ ನಗದು ತಂದು ರಂಗೈನ ಕೈಲಿ ಸಾವಿರಾನೂ, ಗೋಸಾಯಿ ಕೈಲಿ ನಾಲ್ಕು ಸಾವಿರಾನೂ ಇಟ್ಟು ಒಪ್ಪಂದದ್ ಪ್ರಕಾರ ಅವರ್ನ ಒಪ್ಸಿ, ರಂಗಯ್ಯನಿಗೆ "ನಾನೂ ನನ್ನ ಹೆಂಡ್ತೀನೂ ನಾಳೆ ಮನೆ ಬಾಗಿಲು ಹಾಕ್ಕೊಂಡು ನಿಧಿ ಸಮೇತ ದೂರ ದೇಶದಲ್ಲಿ ಬಂಡವಾಳಾನ ಬಿಕ್ರೆ ಮಾಡ್ಕೊ ಳ್ಳೋಕೆ ಬೆಳಕು ಹರಿಯೋಕೆ ಮುಂಚೇನೇವೇ ಹೊರಟುಬಿಟ್ಟಿರ್‍ತೇವೆ. ಕೇಳಿ ದೋರಿಗೆ....'ನಮ್ಮಾವನ್ಗೆ ಖಾಯಿಲೇಂತ ವರ್ತಮಾನ ಬಂದು ನಾವು ಹೊರಟ್ವಿ' ಅಂತ ಊರಿಗೆಲ್ಲಾ ಹೇಳೋದು ನಿನ್ನ ಭಾರಾ"ಂತ—ಹೀಗೆ ಹೊರ ಟದ್ದು ಲೇವಾದೇವಿ ಸುಬ್ಬಣ್ಣ, ಹೆಂಡ್ತಿ, ಸಿಕ್ಕಿದ್ನಿಧಿ-ಸಮೇತ ಬೊಂಬಾಯಿಗೆ, ಹತ್ತಲ್ಲ ಪದಿನಾಲ್ಕುಸಾವಿರ ರೂಪಾಯ್ಗೆ ನಿಧೀನ ನಿಧಾನವಾಗಿ ಅಲ್ಲೀಯಿಲ್ಲೀ ನೋಡೀನೋಡೀ ಬಿಕ್ರಿ ಮಾಡಿದ್ದು ಬೊಂಬಾಯ್ನಲ್ಲಿ. ಅಷ್ಟು ದುಡ್ನೂ ಇಟ್ಕೊಂಡು....ಊರ್‍ಬಿಟ್ಟುಹೋಗಿ ಮೂರು ತಿಂಗಳು ಆದ್ಮೇಲೆ ಬಂದು ರೈಲು ಗಾಡಿಯಿಂದ ಬುಳ್ಳಾಪುರದ ಸ್ಟೇಷನ್ನಲ್ಲಿ ಇಳಿಯುತ್ಲಾನೆ....ತಯಾರು!!....

ತೋಡಾಸಮೇತ ಇಜ್‌ಸ್ಪೆಕ್ಟ್ರು!! ಇನ್ನೇನು ಹಾತ್ಕೇಡಿಗಳು ಹಾಕಿ....ಮೈ ಮೇಲಿದ್ದ ಬಟ್ಟೆ, ಜೊತೇಲಿದ್ದ ಪೆಟ್ಟಿಗೆ ಎಲ್ಲಾ ಜಫ್ತಿಮಾಡಿ....ಸಿಕ್ಕಿದ ಹದಿಮೂರು ಸಾವಿರದ ಒಂಭೈನೂರು ಚಿಲ್ರೆ ನಗದ್ನ ಪ್ಲಾಟ್‌ಫಾರಂನಲ್ಲೇ ಪಂಚಾಯಿತರೆದುರಿಗೆ ಮುಹಜರ್ ಮಾಡಿ ಪೋಲೀಸ್ ಸ್ಟೇಷನ್ಗೆ ಕರೆದುಕೊಂಡು ಹೋಗ್ತಿದ್ದಾಗ ಸುಬ್ಬಣ್ಣ...."ಈ ದುಡ್ಡು ನನಗ್ಸಿಕ್ಕಿದ್ದು....ನಿಧಿ ಮೂಲ್ಕ ಸ್ವಾಮಿ! ನಿಧಿಮೂಲ್ಕ!" ಅಂದದ್ದಕ್ಕೆ ಆ ಪೋಲೀಸ್ ಇಜ್‌ಸ್ಪೆಕ್ಟ್ರು "ನಿಧಿಯಿರ್ಲಿ ಸುಬ್ಬಣ್ಣೋರೆ ಸಧ್ಯ ನೀವ್ ಸೇರೋದು ಸರ್ಕಾರದ್ ಸನ್ನಿಧಿ" ಅಂತಂದು.... ಸೇರಿಸ್ದ ಲಾಕಪ್ಪಿಗೆ, ದಂಪತಿಗಳ್ನ!

ಅದೇ ನಾನ್ಹೇಳಿದ್ದು ಶೆಟ್ರೆ, ಅದೆ. ನಿಧಿ ನಿಮ್ದಾದ್ರೂನೂವೇ, ನಿಧೀ ಸಿಕ್ಕಿದ ನಿಲಯ ನಿಮ್ದಾದ್ರೂವೇ, ಸರ್ಕಾರಂಬೋ ಸನ್ನಿಧಿ, ಸಭಾಗಿ, ಸದಾ ಕಾದಿರುತ್ತೇಂತ!

ಶೆಟ್ರು—ಇಂಕಾ ಮುಂದಟ್ಲಾಲೇದು ಮೀರು ಚಪ್ಪೇದಿ. ಲೇವಾದೇವೀ ಸುಬ್ಬಣ್ಣುಡು ವಾಣಿಇಂಟಂಟ ಗೋಡಲೋ ಚಿಕ್ಕಿನ್ನಿಧಿ ವಾಡು ಅನ್ಕೊಂಟೆ.... ಪೋಲೀಸ್‌ವಾಳ್ಳು ದೇನಿಕಿರಾವಲಾಂಟ?

ಭಟ್ರು—"ದೇನಿಕೀ"ಂತೀರ ಶೆಟ್ರಿ? ದೇನ್ಕೀಂದ್ರೆ—ಸುಬ್ಬಣ್ಣನಿಗೆ ತಿಳಿಯದ ಅಂಶಗಳು ಎಷ್ಟೋ ಇದ್ವಿಟ್ಟು. ಮೊಟ್ಟಮೊದಲು ಆ ಗೋಸಾಯಿ,.... ದೇಶವೆಲ್ಲಾ ತಿರುಗಿ ಪಂಚಭಾಷೇನೂ ಕಲಿತು, ಕೊಂಚ ದಿನ ಗಂಧದ ಕಾಶಿ ಪತಯ್ಯನ ಮನೇಲಿ ಅಡಿಗೆ ಮಾಡಿಕೊಂಡಿದ್ದು, ಬರ್ತಫ್ ಆದದ್ದು—ಗೊತ್ತಿಲ್ಲ ಸುಬ್ಬಣ್ಣನಿಗೆ....ಅಲ್ದೆ ಗಂಧದ ಕಾಶಿಪತಯ್ಯ ಹೆಂಡ್ತಿ ಸಮೇತ ಊರ್ಬಿಟ್ಟು ಹೋಗಿದ್ದಾಗ ಕಾವಲುಗಾರ ಜಟ್ಟಿ ರಂಗಯ್ಯ, ಮನೆ, ಪಾತ್ರೆ, ಒಡವೆಗಳು ಇಟ್ಟು ಚಬ್‌ಸಲಾಕಿ ಬೀಗ (Chubb's lock) ಹಾಕಿದ ಗೋಡೆ ಅಲ್ಮಾರೇನ **ಅ**ತ್ಕಡೆಯಿಂದ್ಲೆ ಒಡೆದು ಮಾಲ್ನ ಕದ್ದು ಬಿಕ್ರಿ ಮಾಡಿ ನಿಭಾಯಿಸ್ಕೊಳ್ಳೋ ಅನಾನುಕೂಲಗಳನ್ನೂ ಅಪಾಯಗಳನ್ನೂ ಗ್ರಹಿಸಿ....ಪರಿಚಾರಕನಿಗೆ ಗೋಸಾಯಿ ವೇಷ ಹಾಕಿ....ಅಲಮಾರೆಯ **ಇ**ತ್ಕಡೆಯಿಂದ ಸುಬ್ಬಣ್ಣನ ಸಹಾಯದಿಂದ ಕನ್ನ ಹಾಕಿ....ಮಾಲುಗಳ್ನ ಬಿಕ್ರಿಮಾಡೋ ಜವಾಬ್ದಾರಿ

ಅವನ್ನ ತ್ತಲೇಗೆ ಕಟ್ಟಿ....ನಗದ್ನ ಕೈಗೆ ಹಾಕ್ಕೊಂಡು....ಒಟ್ನಲ್ಲಿ ಇವರಿಬ್ರೂ.... ದೆಹಲಿ, ಕಾಶಿ, ಕಡೆ ಪರಾರಿಯಾಗಿ....ಪೋಲೀಸ್ ಕೈಗೆ ಸಿಕ್ಕೋ ಅಷ್ಟು ಹೊತ್ತಿಗೇ....ಸುಬ್ಬಣ್ಣ ಸರ್ಕಾರ ಹೇರಿಸಿದ ಆತಿಥ್ಯದ ಮೂರು ವರ್ಷದಲ್ಲಿ.... ಎರಡು ವರ್ಷ ಅನುಭವಿಸಿ ಬಿಟ್ಟಿದ್ದ. ಯಾಕ್ಹೇಳ್ತೀನೇ! ನನ್ನ ಮನೆ, ನನ್ನ ಹೊಲ, ನನ್ನ ಗದ್ದೆ, ನನ್ನ ನಿಧೀಂತ ನಾವು ನಾವುಗಳು ಎಷ್ಟು ನಿರ್ಧರಿಸ್ಕೊಂಡ್ರೂನೂ, ಶೆಟ್ರೇ, ಈ ಹಾಳು ಸರ್ಕಾರ ತೋಡಾ ಸಮೇತ ತಯಾರಿ ತನ್ನ ಹಿಸ್ಸೇಗೆ!

## ೨

# ಸಮುಶ್ಕೋಯಿನ ದಂಬ್ಡಿ

ಸೇರಿದೆ ಗೋಷ್ಠಿ—ಕಾಳಮ್ಮನ ಗುಡೀಲಿ. ದೊಡ್ಡಯ್ಯಟ್ಟಿ ಬೋರೇಗೌಡ ಎಕ್ಕಡ ಹೊರಗಿಟ್ಟು ಒಳಗ್ಬರ್ತ ಗುಡಿ ಹೊಸಲ್ದಾಟಿ ಒಳಗೆ ಹೆಜ್ಜೆ ಇಡತ್ಲೂವೆ, ಪಾದದ ಹೆಬ್ಬೆಟ್ಟು ಚಿಮ್ಮಿ ಎದುರು ಗೋಡೆವರ್ಗೂ, “ಚಂಗ್! ಚಂಗ್! ಚಂಗ್!” ಅಂತ ಶಬ್ದ ಮಾಡ್ತಾ ಎದುಗೋಡೆ ಸೇರಿ ನಿಂತ ಬಿಡಿಕಾಸ್ನ, ಬೆಲ್ಲದ ಕಂಟ್ರಾಕ್ಟರು ಗಡF ಖಾನ್ ಸಾಹೇಬರು ಬಗ್ಗಿ ಎತ್ತಿ, “ಅರೇದೇರೇ ಏ ಕಾಸ್ ಕಹಾಂ ಆಯಾ ಯಹಾಂ” ಅನ್ನುತ್ಲೂವೆ, ಭಟ್ರು, “ಕಹಾಂ ಏನೂ, ಯಹಾಂ ಏನೂ; ಮಧ್ಯಾಹ್ನವೆಲ್ಲಾ ಪರೇಲಾಡ್ವ ಪಟಿಂಗ್ರು ಜೂಜಿನ್ಗಲಾಟೇಲಿ ಬಿಟ್ಬಿಟ್ಹೋದ ಬಿಡಿಗಾಸು! ಶೇಕದಾರ್ ಶಾಮಣ್ಣೋರ ಕೈಗೇ ಕೊಡಿ. ನಮ್ಮೈವರ ಹೆಸ್ರು ಹೇಳಿ....ನಮುಗ್ಸಿಕ್ಕಿದ ಈ ನಿಧೀನ....ಸರ್ಕಾರೀಗೆ ಹಿಸ್ಸೆ ಕೊಡದೆ ಊರೊಳಗಿನ ಶ್ರೀಕಂಠೇಶ್ವರನಿಗೆ ಮಂಗ್ಳಾರ್ತಿಲ್ಹಾಕ್ಲೀ,” ಅಂದ್ರು. “ಅಚ್ಛಾ! ಹೋನೆದೇವ್” ಅಂತ ಖಾನ್ ಸಾಹೇಬ್ರು ಶಾಮಣ್ಣೋರ ಕೈಗೆ ಕೊಡೊ ಬಿಡಿಗಾಸ್ನ ಶೆಟ್ರು ಕಸ್ಕೊಂಡು, “ಮಂಗ್ಳಾರ್ತೀಕಿ ವೇಸ್ತಾರಾ! ಐತೆ ಇಕ್ಕಡೀಯಂಡ. ಅದೀ....ಮಂಚಿಕಾಸೂ” ಅಂತ ಕಿಸೆಯಿಂಧ ಮತ್ತೊಂದು

ಬಿಡಿಕಾಸ್ನ ಶಾಮಣ್ಣೋರ ಕೈಯಲ್ಲಿಟ್ಟು, “**ದೀ**ನಿ ವೇಯಂಡ ಮಂಗ್ಳಾರ್ತೀಲೋ. ಸಮಶಿಪ್ರೋಯಿನ ಕಾಸೂ! ದೇವುಣಿಕೀ....ಪರವಾಲೇದೂ! ಕಣ್ಣುನ್ನಾವಾ ಚೂಶೇಕೀ! ಲೇಕಾ....ಪೋನೀ ದಾಸ್ಕೇಮಿ....ಅಂಗಡೀಕೆ ಪ್ರೋತಾಡಾ? ಮಂಚಿ ಕಾಸೂಂಟೆ....**ಮ**ನಕಿ ಉಪಯೋಗಮು....ಶ್ರೀಕಂಠುಣಿಕಿ ಕಾಸು ಎಟ್ಲುಂಟೇ ಯೇಮಿ?....ಜಗಮಂತ ವಾಣಿದೇ ಕದಾ?” ಅಂದ್ರು.

ಭಟ್ರು—ಶೆಟ್ರೇ! ಒಳ್ಳೇ ಕಾಸಿಗೆ ಸಮಕಲು ಕಾಸು ನೀವು ಕೊಟ್ಟದ್ದಾಶ್ಚರ್ಯವಲ್ಲಾ! ಸಮಕಲು ಕಾಸು ನಿಮ್ಹತ್ರ ತಯಾರಾಗಿದ್ದದ್ದು ಆಶ್ಚರ್ಯ!

ಶೆಟ್ರು—ಮಾಕಾಶ್ಚರ್ಯಮೇಮೋ....? ಮಾವಾಳ್ಳಕು ಲೇದೂ! ಮಾಕುಟುಂಬಮಂತಾ ಮುಂದರಿಕಿ ವಚ್ಚಿಂದಿ, ಒಕ್ಕೇ ಒಕ್ಕ ಸಮಶಿಪ್ರೋಯ್ಯಿನ ದಮ್ಮಡ್ಡಿನಿಂಚೇ! ನೇನು ಈ ಊರ್ಲೋ, ಮೀ ಎದ್ರುಗಾನೆ, ಅಂಗ್ಡೀ, ಇಲ್ಲೂ, ವಾಕ್ಲ, ತೋಟಮು ಕಾಕ, ಇಂಟಾಡಿದಿ ಪೈನ ಉಂಡೇ ಸೊಮ್ಮು, ದೀನಿಕಂತ ಅಸ್ತಿಭಾರಮು, ಮೇಮು ನಾಚಿನ್ನದಾಂಟ್ಲೋ ತಿರುಪತೀಕಿ ವೆಂಗಟರಮಣ ಸ್ವಾಮಿ ದರ್ಶನಾನ್ಕಿ ಪ್ರೋಯಿನಪ್ಪುಡು, ಮಾಯಕ್ಕ ಚೇತ್ಲೋ **ಒಕ್ಕ** ಸಮಶಿಪ್ರೋಯಿನ್ದಂಬ್ಡಿ **ಉಂಡೆನೋ, ಇಪ್ಪುಡು** ಈ ಮಂಚಿಸ್ಥಿತೀಲೋ ಉನ್ನಾನು ನೇನು!

ಗೌಡ—ಎಂಗಾದಾತು ಶೆಟ್ರೇ?

ಶಾಮಣ್ಣ—ಶೆಟ್ರು ಹೇಳೋದು, ಸಮಕಲು ಕಾಸಿಂದ್ಲೇ ಅವರ ಸಂಸಾರವೆಲ್ಲಾ ಇಷ್ಟುಮಟ್ಟಿಗೆ ಮುಂದಕ್ಕೆ ಬಂದಿದ್ರ ಅಸ್ತಿಭಾರಾಂತ; ಚಿಕ್ಕಂದ್ನಲ್ಲಿ ಶೆಟ್ರು ಅವರ ಕುಟುಂಬಸಮೇತ ತಿರುಪತೀಗೆ ಯಾತ್ರೆ ಹೋಗಿದ್ದಾಗ ಅವರಕ್ಕಾವ್ರ ಕೈಲಿ ಒಂದು ಸಮಕಲುದಮ್ಡಿ ಇದ್ದಿದ್ರಿಂದಲೇ, ಶೆಟ್ರಿಗೆ ನಮ್ಮೂರ್ನಲ್ಲಿರೋ ಮನೆ, ಬಾಕಿಲು, ದನ, ಕರು, ಅಂಗಡಿ, ತೋಟ, ಈ ಸಂಪತ್ತುಗೆಲ್ಲಾ ಲಭಿಸಿದ್ದೂಂತ ವಾದಿಸ್ತಾರೆ.

ಗಡF° ಖಾನ್—ವಾರೆ! ಯಾರ್!....ಏಕ್ ಸಮಕಲ್ದಮ್ಡಿ ಬುನಿಯಾದ್ಪೆ ಬಂದೇಸೋಕ್ಯಾ....ನಿಮ್ದೂಗೆ....ಈಗ ಇರೋ....ಮನೇ ತೋಟ....ಯೆಲ್ಲಾ....

ಭಟ್ಟ್ರು—ಸ್ವಲ್ಪ ಸುಧಾರಿಸ್ಕೊಳ್ಳಿ ಸಾಬ್ರೇ....ಶೆಟ್ರು ತಾವೇ ಹೇಳ್ತಾರೇ.... ಅವರಕ್ಕಾವ್ರ ಕೈಲಿ, ತಿರುಪತಿ ವೆಂಕಟರಮಣಸ್ವಾಮಿ ಸನ್ನಿಧೀಲಿ, ಸಮಕಲು ಕಾಸು....ಅದೇನ್ಕಥೇ ಶೆಟ್ರೇ....ಕೇಳ್ಬಹುದೇ....?

ಶೆಟ್ರು—ಅಡಕ್ಕಂಡ ಏಮಿ....ಅಡಗಂಡ....ವಿನೇವಾಳ್ಳು ಉಂಡೇಟಪ್ಪುಡು ಚೆಪ್ಪೇದಾನ್ಕೇಮಿ ಅಭ್ಯಂತರಮು ನಾಕೀ! ಪೆದ್ದ ಕಥ....ಐತೇನೂ ಚೆಪ್ತಾನು.... ಕೂಚೊಂಡ!

ಎಲ್ಲರೂ ಕುಳಿತುಕೊಂಡು ಆರಾಮವಾಗಿ ಕೇಳುವರು.

## ಶೆಟ್ಟ್ರು ಕಥೆ

ಚಪ್ಪಿತ್ನೇ....ತಿರುಪತೀಕಿ ಪ್ರೋಯಿಂಟ್ರೇ ಅನಿ! ಮಾಅಯ್ಯ, ನೇನು ಒಕ್ಕೇ ಕೊಡುಕ್ಕು, ಮಾಯಕ್ಕ ಒಕ್ಕೇ ಕೂತ್ರು; ಮಾಯಮ್ಮ ಪ್ರೋಯ್ಯಿ ಶಾನಾ ದಿನಾಲು ಐಯ್ಯಂಡ....ಮಂಗ್ಯಾರ್ತಿೀಕಿ ಸಿಲ್ಸ್ಕೋನುಂಡಾಮು....ಪೂಜಾರಿ ಕುಡಿಚ್ಚೈತೊಟ್ಟು. ಎದುರು ವರಸಲೋ....ಒಕ್ಕ ಮುಶಿಲಾಯನ, ಆಡ್ಡಿ, ಒಕ್ಕ ಚಿನ್ನೋದು;— ಅಂದ್ರೂ ಮಾವಾಳ್ಳು— ಆ ಚಿನ್ನೋದು, "ಮಂಗ್ಯಾರ್ತೀಲೋ ವಿಡಿಕಾಸುಂಟೇ ವೇಯುಯ್ಯಾ"....ಅನಿ. ಮುಶಿಲಾಯನ, ತಿತ್ತಿ ವಿಪ್ಪಿ, ವಿಡಿಗಾಸ್ಲು ಬೈಟತೀಶಿ, ಕರ್ಪೂರಮ್ಮುರ ಕಾಲ್ತುಂಡೇ ತಟ್ಲೋ ವೇಸೇಲೋಪಲ್ನೇ, ಮಾಯಕ್ಕ....“ಮಂಚಿಕಾಸೈತೇ....ಇಕ್ಕಡೀಯಂಡ!....ಮಂಗ್ಯಾರ್ತೀಕೀ ಸಮಿತಿ ಪ್ರೋಯಿನ ದಂಮ್ಮಡೀ ನಾದಗ್ರುಂದೀ....ನೇಸಿಸ್ತಾ” ಅನಿ ಚಪ್ತಾನೇ, ಸಮಿತಿ ಪ್ರೋಯಿನ ಒಕ್ಕಾಸು ಆ ಮುಶಿಲಿವಾಣಿ ಚೇತ್ಲೋ ಪೆಟ್ಟೇದಾನ್ಕಿ ಪ್ರೋಯಿನ ಚೈಸಿ, ಆ ಮುಶಿಲಾಮೆ ಬಿಗುವ್ವ್ವಗ ಪಟ್ಕೋನಿ....“ಉಷಾರು ಅಂಟೇ.... ಇದಿ! ವಿಂಟೂಉಂಡಾರಾ! ಎವ್ವರಿಂಟೆ ಪಡ್ನೋ ಗೊತ್ಲೇದೂ!....ಅಯ್ತೆ ಇಟ್ಲುಂಡವಲ....ನುನಿಂಟೆ ಕೊಡಾಲು! ವಿಚಾರಿಚ್ಚಂಡ” ಅನಿ ಮೊಗುಣ್ಣಿ ಮಾತೊಟ್ಟು ವಬ್ಬಿ, “ದಾಮ್ಮಾ ಮಾಟಾಡ್ದುವ ದಾ” ಅನಿ, ಈಡ್ಚೊಚ್ಕನೇ ಮಾಯಕ್ಕಿ. ಇಂಕೇಮಿ ಆ ಮುಶಿಲವಾಡು ವಚ್ಚಿ ಮಾಯಯ್ಯನಿ ಪ್ರಾಕಾರಾನಿಕಿ ತೋಡುಕೊನಿಪ್ರೋಯಿ, ಇದ್ರೂ, “ಪಿಸಿಪಿಸಿಪಿಸಿಪಿಸೀ” ಅನಿ ಅದೇಮಿ

ಮಾಟ್ಲಾಡ್ಕೊನಿರೋ....ಛತ್ರಮು ಮೇಮು ಚೇರಿತಿಮೋ ಲೇದೋ.... ಮಾಯಪ್ಪ....ಚೆಪ್ಪೇ—"ಆದಿಮೂರ್ತೀ! ಮೀ ಅಕ್ಕಕು ರೇಪು ತಿರುಪತೀ ಲೋನೇ ಪೆಂಡ್ಲಿರಾ! ವೆಂಕಟರಮಣಸ್ವಾಮಿ ಮಹಿಮನೇ ಮಹಿಮ! ಇದು ವರ್ಕ್ಯ್ರ ಅಲ್ಲುಡ್ನಿ, ವೆದ್ಕಿ ವೆದ್ಕಿ ಚಿಕ್ಕಕಾ ಜ್ಯೆಜ್ಯೆ ಪಿಸುಕ್ಕೊನಿ, ಕಂಡ್ಲು ಕಂಡ್ಲು ವಿಡಿಸ್ಕೊನಿ ಉಂಡಿನ ನನ್ನಿ ತಿರುಪತೀಕೇ ತೆಪ್ಪಿಚ್ಕೊನೀ....ಮನ ಆಂಡಾಳುಕಿ ಮಂಗ್ಯಾರ್ತೀಲೋ ಸಮಶಿನಕಾಸು ವೇಶೇ ಬುದ್ದಿನಿಚ್ಚಿ ದಾನ್ನಿ ಚೂಶಿ ಕೋಡಾಲುಗಾ ಚೇಸ್ಕೋವಲಾ ಅನಿ ಮನ್ಸೈಕಟ್ಟೇ ದರ್ಶನಾನ್ನಿ ವಚ್ಚಿವುಂಡೇ ಬಲರಾಮಶೆಟ್ಟಿಗಾರು ಭಾರ್ಯ ತಲಕಾಯ್ಲೋ ಬುದ್ಧಿ ಪುಟ್ಟಿಂಚಿ.... ರೇಪು ತೆಲ್ವಾರೇ ಬ್ರಾಹ್ಮಣ್ಣಿ ಪಿಲ್ಪಿಂಚಿ....ತನ ಸನ್ನಿಧಾನಮುಲೋನೇ ಲಗ್ನಮು ಚೇಪಿಚ್ಚೇ, ವೆಂಕಟರಮಣಸ್ವಾಮಿ ಮಹಿಮನೇ ಮಹಿಮ!" ಅನಿಯೆ. ಇಂಕೇಮಿ? ಪೆಂಡ್ಲಿ ಜರುಗೆ....ಸಾಂಗೋಪಾಂಗಮುಗ! ಲಗ್ನಾನಿಕಿ ಒಚ್ಚಿನ ಬ್ರಾಹ್ಮಣುಲಂತಾ ಏಮಿ ಘಾಟೇ ಅಂಟಾರು!....ಭೂರಿದಕ್ಷಿಣ ಇಚ್ಚೇ ತಪ್ಪುಡು, **ಮಾ ಊರಿನಿಂಚೀ ತೆಚ್ಚಿನ ಸಮಶಿಪ್ರೋಯಿನ ಕಾಸುಲ್ಲೋ ಒಕ್ಕಟಿಕೂಡ** ಖರ್ಚು ಕಾಲೇದು. ಮಾಂಗಲ್ಯಧಾರಣಮು ಐಯ್ನೋ ಲೇದೋ, ಪ್ರಾರಂಭಮಾಯ ಜಗಡಾಲು; ಮೊದಟಿ ಜಗಡಮು....ಮಾಯಪ್ಪೊ ಬಲರಾಮಶೆಟ್ಟಿವಾಳ್ಳೂ ಮೇಳಮು ವಾಯಿಂಚಿನ ವಾದ್ಯಗಾರುಡುಪ್ಪೈನ ನಕ್ಕೆಲಿ ಕಟ್ಟು ಎಗಿರ್ರಿ! ಗಲಾಟಪ್ಪೈನ ಗಲಾಟ! "ಮೇಳಮುವಾಡು 'ಇದಿ ನ್ಯಾಯಮಾ ಶ್ರೀರಾಮಚಂದ್ರ' ಅನೇ ಕೃತಿ ವಾಯಿಂಚಿಂದಿ ಅಮಂಗಳಕರಮು....ವಾದ್ಯಮು ವಾಳ್ಳ ಕೂಲಿ ಇಚ್ಚೇಲೇದೂ," ಅನಿ ಚಪ್ಪಿ. ಆ ಜಗಡಮು ನಿಲಿಪಿಚ್ಚೇದಾನಿಕಿ ಭಗೀರಥ ಪ್ರಯತ್ನಮಾಯ. ಆ ಗಲಾಟ ನಿಲಿಚಿನೋ ಲೇದೋ, ಬಲರಾಮ ಶೆಟ್ಟಿ,....ಬ್ರಾಹ್ಮಣ್ಣಿ, "ಲಗ್ನಮು ಸಮಾಪ್ತಮಾಯ್ನ" ಅನಿ ಅಡಿಗಿ ಆತಡು "ಐಪ್ರೋಯ" ಅನಿ ಚೆಪ್ಪಿನೋ ಲೇದೋ.... ಎಗಿರೆ.... ಒಕ್ಕೇ ಎಗ್ಗು ದೂಲಾನ್ನಿ! ಚಪ್ಪಾರು ಮಾಯಪ್ಪಣ್ಣಿ ಚೂಶೀ...."ಗೆಲಿಸ್ತಿನಿರಾ ವೆಧವಾ ಗೆಲಿಸ್ತಿನೀ.... ಎಕ್ಕಡ ವೆದಕಿನಾನೂ ಚಿಕ್ಕಕುಂಡಾ ಉಂಡಿನ ಕೋಡಾಲು ಇಕ್ಕಡ ಚಿಕ್ಕೆ! ಚೂಡ್ರಾ! **ನೀ ಅಲ್ಲುಡೂ ಕಂಟ್ಯೇ ಲೇನಿ ಅಂಧುಡು!!!**" ಅನಿಯೆ. ಮಾಅಯ್ಯ ಪಕಾಪಕಾ ಅನಿ ನವ್ವಿ, ಸಂಬಂಧಿ ಕಿನ್ನ ಇಂಕಾ ಪ್ಯೆಕಿ ಎಗಿರೀ, "ಯವರ್ನಿರಾ ವೆಧವಾ ಅಂಟ್ರಾವು, ಡಬ್ಬಲ್

ವೆಧವಾ!....ಸೋಲಿಪೋಯಿನ ಬತ್ತಿ ನೀದೀ....ನೂವು ಗೆಲಿಶಿ ಮುಂಡುಮೋಚಿ ತಿವೀ! ಇಕ್ಕಡ ಚೂಡೂ....ಗೆಲಿಶಿನದಿ ಉಂಡನೀ!!" ಅನಿ ಚಪ್ಪ್ತೂ, ಮಾಯಕ್ಕ ತಲಪೈನ ಚೆಯ್ಯಿಪೆಟ್ಟಿ ಎತ್ತಾಡೂ ಚೆಯ್ಯೀ! ವೆಂಟಿಕಲಂತ ಒಕ್ಕೇ ಗಂಟ್ಲೆ ಒಚ್ಚೆಡ್ತ ಚೇತ್ಲೋ!! ನಾಟಕಂವಾಂಡ್ಳು, ಆಡವಾಂಡ್ಳ ಪಾರ್ಟಿಕಿ ತಲಕು ಪೆಟ್ಟ್ಕೋನೇ **ಟೋಪನ್ಲೂ**!!! ಮಾಯಕ್ಕಕಿ ಪುಟ್ಟಿನಪ್ಪಟಿಂಚಿ ವೆಂಟಿಕಲೇ ಲೇವು!! ಇಂಕೇಮಿ....ಮೋಸಾನಿಕಿ ಮೋಸಮು! ಠಕ್ಕಾಸ್ಕುಠಕ್ಕಿ! ಎವರ್ನಿ ಎವರು ತಿಟ್ಟೇದಿ?....

ಅಪ್ಪುಡಿನಿಂಚಿ ಅಲ್ಲುಣ್ಣಿ ಚ್ಯೈಪಟ್ಟಿ ಒಕ್ಕೊಕ ಆಸ್ಪತ್ರಿಕೂ ಒಕ್ಕೊಕ ವೈದ್ಯುಡ ದಗ್ಗಿರಾನೂ ಪಿಲಿಚಿಕೊನಿಪೋಯಿ ಎಂತೋ ಡಬ್ಬು ಖರ್ಚುಚೇಶ ಮಾಯಪ್ಪ. ಅಯ್ತೋಯೇಮಿ! ವಾಡು ಚಚ್ಚಿ, ಅಲ್ಲುಡು ಚಚ್ಚೇವರ್ಕು ಘೃತರಾಪ್ಪುಡೇ, ಮಾಭಾವ!

ಇದಿಕಾಕ ಮಾಯಕ್ಕಕಿ, ದಾನಿ ಅತ್ತೆಮ್ಮ, ತಲಕಾಯಿಕೆ....ಕೇಶರಂಜ ನ್ನೇಮಿ, ಜಬಗುಸುಮೇಮಿ....ಭೂಮಿಲೋ ಉಂಡಿನದಿ ಲೇನಿ, ತೈಲಮ್ಲೋ, ನೂನ್ಲೋ ತಲಕಾಯಿಕಿ ರುಬ್ಬೀರುಬ್ಬೀ, ಬುರುಡಪೈನ ಚಪ್ಪು ಎಗತ್ತೋ ಒಚ್ಚಿನೇ ಕಾಕ, ವಾಸನಕಿ ಒಕವೆಂಟಿಕನು ಲೇದು!....ಏಮಿ ರುಬ್ಬಿತೇ ಏಮಿ ....ಇಸುಕುಲೋ ಪಾತಿ ಕಟ್ಟಿ, ಗೊಬ್ಬ್ರಮು ವೇಸಿ, ವಿತ್ತ್ನಾಲು ವಿತ್ತಿ, ಎಂತ ನೀಳ್ಳು ವೇಸ್ತೇ ಏಮಿ? ಅಟ್ಲನೇ ಮೊಗಡು ಉಂಡಿನಾನೂ, ಗೊಂತಲೋ ಮಾಂಗಲ್ಯಮುಂಡಿನಾನೂ ಟೋಫನ್‌ಲೋಪಲ್ಲೋ - ಬೋಡಿ, ಮಾಯಕ್ಕ! ಪರಮಾತ್ಮುಣಿ ಲೀಲನೇ ಲೀಲ! ಕಂಡ್ಲು ಲೇನಿ ಕೊಮುಕ್ಕೇ, ಕಂಡ್ಳು ರಾವಲಾ ಅನಿ ತಿರುಪತೀಕಿ ವಾಂಡ್ಳು ಯಾತ್ರ ಚೇಸಿಂದೇಮೋ ಸರೇ!.... ಅಯ್ತೆ **ಮೇಮು** ...ಆಡವಾಂಡ್ಲು ತಿರುಪತೀಕಿ ಪೋಯಿ ತಲಕಾಯ ಬೋಡಿಚ್ಕೋನೇದಿ ಕದ್ದೂ! ಅಯ್ತೆ **ಮೇಮು**... ವೆಂಟಿಕಲು ಲೇಕ ಬೋಡಿಗ ಉಂಡಿನ ಮಾಯಕ್ಕ ತಲಕಾಯ್ಲೋ, ವೆಂಟಿಕಲು ಪೆರುಗುವಲಾ ಅನಿ, ತಿರುಪತೀಕಿ ಪೋಯಿಂದಿ ಆಶ್ಚರ್ಯಮೂ!... ಲೇದೂ...ಅಲ್ಲುಣಿಕೇ ಕಂಡ್ಳೊ ರಾಕ, ಅಕ್ಕಕಿ ವೆಂಟಿಕಲೂ ಪೆರುಗಕ - ಇದ್ದರಿಕೂ ಗಂಟೇಶಿನ ಪರ ಮಾತ್ಮುಣಿ ಲೀಲನೇ ಲೀಲ!

ಇಟ್ಲ ಮೋಸಮುಪೋಯಿನ ದುಃಖಮುಲೋನೇ ಚಚ್ಚಿಪೋಯಿರಿ ಮಾತಂಡ್ರೀನೂ, ಮಾಯಕ್ಕ ಮಾಮಾ, ಅತ್ತ. ಭಾವಕಿ ಉಂಡಿನ ಆಸ್ತಿ ಪಾಸ್ತಿ ಚೂಸ್ಕೋನೇಕಿ ನೇನುಕಾಕ ವೇರೆವ್ವರೂ ಲೇರು. ಮಾಭಾವಕಿ ಲೇನಿಕಂಡ್ಲೂ ನೇನೆ, ಮಾಯಕ್ಕಕಿ ಲೇನಿ ವೆಂಟಿಕಲೂ ನೇನೇ! ಮೆಲ್ಲಮೆಲ್ಲಗ ಭಾವುಣಿ ಆಸ್ತೀ ಅಂತ ಚೇತ್ಕಿ ತೀಸ್ಕೊನಿ, ವಾಣಿ ವ್ಯಾಪಾರಮಂತ ನೇನೇ ಜರಿಗಿಸ್ತ ವಸ್ತಿ. ವಾಡು ಚಚ್ಚೇಟಪ್ಪುಡು....ಚಚ್ಚೇಕಿ ಇಷ್ಟಮು ಲೇಕ ಉಂಡಿನ ವಾಣ್ಣಿ ನೋಟ್ಲೋ....ನರಕಮು ತಪ್ಪಿಚ್ಚಕೋನೇ ದಾನ್ಕಿ.... "ನಾರಾಯಣ" ಅನಿ, ಉಚ್ಚಾರಣ ಚೇಪಿಚ್ಚೇಪೇ ಪೆದ್ದಪನಿ ಅಯ್ಪೋಯ! ಮಾಭಾವ ಪಂಪುಕೋ ಉನ್ನಾಡು...."ಅಯ್ಯೋ! ಪೋತಾನೇ! ಒಕ್ಕ ಬಿಡ್ಡನೂ ನಾಕಡುಪುಲೋ ಪುಟ್ಟಕ ಪೋತಾನೇ! ಈ ವೆಂಟಿಕಲು ಲೇನಿ ಬೋಡಿನಿ ಪೆಂಡ್ಲಾಡಿನಪ್ಪುಡು....ಮೋಸಮುವಾಡು...."ಇದಿ ನ್ಯಾಯಮಾ" ವಾಂಚ್ಚೇ ಅಪ್ಪುಡೇ ಗೊತ್ತು....ಇಟ್ಲಾತಾನೂ" ಅನಿ ಭಾವ ಒಕ್ಕತಟ್ಟ.—

ಅಕ್ಕ! ...."ಮೀರು ಚೆಪ್ಪಿನಾಯಕಟ್ಟೇ ಕಂಡ್ಲುಲೇನಿವಾಣ್ಣಿ ಚ್ಚೈ ಪಟ್ಟಿನ ಪಾಡು ವಿಧಿ ಗೊತ್ತುಂಡ್ಕೊನೇ ವಾಡು ವಾಯಿಂಚೆಂದಿ ಆ ಕೃತಿ" ಅನಿ ಮಾಯಕ್ಕ ಒಗತಟ್ಟ. ಈ ಇದ್ರ ಜಗಡಮು ಸಮಾಧಾನಮು ಚೇಸೇ ಲೋಪಲ, ಅಕ್ಕಪಕ್ಕಮುವಾಳ್ಳು ವಚ್ಚಿ ಹಜಾರಮುಲೋ ನಿಲುಚುಕೊನಿ, ನನ್ನು ಪಿಲಚಿ, "ಬಲರಾಮ ಶೆಟ್ಟಿವಾಳ್ಳ **ಕೊಡುಕಿಕಿ** .... ಒಳ್ಲೋ ಇಟ್ಲ ಉಂದೇ?....ವೈದ್ಯುಡ್ನಿ ಪಿಲಿಪಿಚ್ಚಿ ಮುಂದು ಇಪ್ಪಿಚ್ಚಕೂಡ್ದಾ"—ಅನಿ ನನ್ನು ದಬಾಯಿಂಚ್ರಿ. ನೇನೇಮಿ ಚೆಪ್ಪುದು? ಕಂಡ್ಲು ಲೇನಿ ರೋಗಿ ಉಂಟೇ ಯೇಮಿ, ಪೋತೇಯೇಮಿ! ಉಂಡಿನ ಆಸ್ತಿನಿ ಅನುಭವಿಂಚೇಕೇ ನೆತ್ತಿಲೋ ಎಪ್ಪುಡು ರಾಯಲೇದೋ, ಇಂಕ ಬದುಕಿ ಏಮಿ! ವಚ್ಚಿನವಾಳ್ಳಂತ.... "ವೈದ್ಯುಡು ವಚ್ಚಿ ಚೇಸೇದೇಮುಂದೀ! ನಾರಾಯಣುನಿ ಪೈನ ಭಾರಮು ವೇಶಿನಾಮು! ವಾಣಿ ಇಷ್ಟಮೆಷ್ಟ್ಲನೋ ಅಟ್ಲಾತಿಂದಿ! ಗಲಾಟ ಚೇಯಕ ಪೋಯಿರಾಂಡ!" ಅನಿ ತರಿಮಿತಿನಿ ಅಂದ್ರನೂ.

ಇಂಕೇಮಿ, ಭಾವಕಂತ್ಯಕಾಲಮು! ಪೋತಾ ಉಂಡಾಡು! ಮಾಯಕ್ಕ, "ಪೋತಾರೇ, ನೋಟ್ಲೋ 'ನಾರಾಯಣಾ' ಅನಿ ಚೆಪ್ತೇಗಾನಾ ಸದ್ಗತೀ,"

ಅನಿಂದಿ ವಿನಿ ಮಾಭಾವ, 'ಚಸ್ತೇ ಚಚ್ಚಿಪ್ರೋತಾನೋ ಏಮೋ' ಅನೇ ಭಯಮುಲೋ ಚಪ್ಪಡು! ದಾನಿಕೊಕ್ಕ ಸೂತ್ರಮು ಚೇಸ್ಸ್ನಿ. ಟೆಂಕಾಯಿ ನಿಂಚಿ ಒಕ್ಕ ಅಂತ ಪಿಂಜು ಪೀಕ್ಕೊನಿ ಭಾವಚೇತ್ಲೋ ಪೆಟ್ಟಿ, ಇಂಕೊಗ ಚೇತ್ಲೋ ಒಕ್ಕ ಅಣ ಪೆಟ್ಟಿ, "ಭಾವಾ, ನೀಕಿ ಜ್ಞಾನಮು ತಪ್ಪಿಂದಾ, ಲೇದಾ, ಚೂಸ್ತಾಮು!" ಈ ಚೇತ್ಲೋ ಏಮುಂದಿ?" ಅಂಟ್ನಿ. "ನಾರು ಅನ್ನೈ. "ಆ ಚೇತ್ಲೋ?" ಅಂಟ್ನಿ. "ಆಣ" ಅನ್ನೈ—ರೊಂಡು ಚೇತ್ಲ್ಲೊ ಜೋಡಿಚ್ಚಿ ...."ರೊಂಡೂ ಚೇರ್ಚಿ ಚಪ್ಪು, ಚೂಸ್ತಾಮು!" ಅಂಟ್ನಿ. "ನಾರು ಆಣ! ಅಯ್ಯಯ್ಯೋ! ನಾರಾಯಣ ಅನ್ನಿಡಿಸ್ತ್ನೀ.... ಇಂಕ ಐಪ್ರೋಯು!" ಅನಿಂದೆ, ಪಾಪಮು.... ಪ್ರಾಣಮು ಪ್ರೋಯು.... ಮಾ ಬಾವ್ಕಿ.

ಇಂಕೇಮಿ! ಚೇಸೇದಂತಾ ಚೇಸಿ, ಆ ಊರ್ಲೋ ಉಂಡಿನ ಆಸ್ತೀ ಪಾಸ್ತಿಲಂತ ಅಮ್ಮಿ ರೊಕ್ಕಮು ಚೇಸ್ಕೊನಿ, ಅಕ್ಕ ಜೊತ್ಲೋ ಈ ಊರಿಕಿ ವೆಳ್ಳೇದಾನಿಕಿ ಎಕ್ಕಿಂಡಾಮು ರೈಲು! ಅಪ್ಪುಡು ಕೂಡ ಊರವಾಂಡ್ಲು ವಿಡುವಲೇ ನನ್ನು! ಅಡಿಗ್ಗೇ ಅಡಿಗಿರಿ! "ಏಮೋ, ಇಟ್ಲ ಐಪ್ರೋಯು! ಆಯ್ತೇನೂ ಒಕ್ಕ ವೈದ್ಯುಡುಗಾನಾ ತಮ ಭಾವುನಿ ಚೂಪುಂಟೇ....!" ಅನಿ.

ದಾಂಟ್ಲೋನೇ ನೇನು...."ಮೇಮೇಮಿ ಚೇಸೇದಿ?.... ನಾರಾಯಣುಡು ಪೈನ ಭಾರಮು ಮೇಮು ವೇಸ್ತೇ.... ಭಾವುನಿ ಭಾರಾನ್ನಿ ನಾರಾಯಣುಡು ನಲುಗರು ಪೈನ ವೇಶಿಡಿಚ!" ಅನಿ ಚಪ್ಪಿ, ಮಾಯಕ್ಕ್ನಿ ತೋಡ್ಕೋನಿ ಮಿಾ ಊರುಕೊಚ್ಚಿ, ವ್ಯಾಪಾರಮು ಷುರುಚೇಸಿ, ಪದಿ ಏಂಡ್ಲುಕು ಪೈನನೇ ಆಯು!

ಯಾಲ ಚಪ್ತಾನೂಂ....ಟೇ.... ದೇವುಡುಗಾನಾ ದಯಪೆಟ್ತೇ, ಸಮತಿ ಪ್ರೊಯ್ಯಿನ ದಂಬ್ಡಿಲೋ ಉಂಡೇ ಮಹಿಮ ಸವರನ್.... ಸವರನ್‌ಲೋನೂ ಲೇದೂ.... ಅನೇದಾನಿಕಿ....!

ಅಕ್ಕಡಚೂಡಂಡ! ಸೂರ್ಯುಡು ಮುಳುಗುತೂ ಉನ್ನಾಡೂ! ಗಿರಾಕಿ ಕಾಲಮು! ಕುರ್ರೋಡು ಒಕ್ಕಡೇ. ಊರೋಳ್ಳು ಘಾತುಕಲು! ಪ್ರೋದಾಮು.... ರಾಂಡಾ!

## ೩

# ಮುದ್ದೋ ಇಲ್ಲ ಕದ್ದೋ

ಪಾಡ್ಯಾನೋ ಬಿದಿಗೇನೋ ಶುಕ್ಲಪಕ್ಷ—ಶೆಟ್ರು ಕೊರತಿ ಕಾಳಮ್ಮನ ಗುಡೀಲಿ. ಗೋಷ್ಠಿ ಮುಂದೆ! ಶೇಕ್ದಾರ್ ಶಾಮಣ್ಣ "ಬೇಡ, ಬೇಡ!" ಂತ ಎಷ್ಟು ಬಡುಕೊಂಡ್ರೂವೆ....'ದೂಲ, ವಾಸ್ಕಾಲು, ಕಿಟ್ಕಿಗ್ಳು—ಎಲ್ಲಾ ಸಾಗ್ವಾನಿ, ಗೋಡೆಗ್ಳು ಭದ್ರ....ಸೂರೆಲ್ಲಾ ಮಂಗ್ಳೂರು ಹೆಂಚು, ನೆಲವೆಲ್ಲಾ ಕಡಪಕಲ್ಲು; ಆದ್ರೂ ನಾಲ್ಕುಸಾವಿರ ರೂಪಾಯಿ ಬಾಳೋ ಮನೆ, ಎರಡು ಸಾವ್ರಕ್ಕೆ ಸಿಕ್ಕೋವಾಗ ಯಾಕೆ ಬಿಡಬೇಕು?....ದೆವ್ವ ಪಿಶಾಚೀಲಿ ನನಗ್ನಂಬ್ಕೆ ಇಲ್ಲಾ'....ಂತ ಮುಷ್ಕರ ಹಿಡ್ದು ಶಿವಲಿಂಗಪ್ಪನ ಮನೇನ ಕೊಂಡ್ಕೊಂಡ ಶೆಟ್ರಿಗೆ—,....ಆ ಹೊತ್ತಿನ್ಂದ ಈ ಹೊತ್ತಿನ್ವರಿಗೂ ಒಂದೇ ಗೋಳು!—ಅಸಲು ಇರ್ಲಿ, ಬಡ್ಡೀ ಕೂಡ ಹುಟ್ಟಲಿಲ್ಲ, ಬಾಡ್ಗೇ ಮೂಲ್ಕ!....ಇನ್ನು ರಿಪೇರಿ, ಸುಣ್ಣ, ಮುನಿಸಿಪಲ್ ತೆರಿಗೆ, ಹೀಗೆ ಕೈಕಚ್ಚಿದ್ದದ್ದು ಅಷ್ಟಿಷ್ಟಲ್ಲ! ಬಾಡಿಗೇಗೆ ಬಂದೋರು....ಶುಕ್ಲಪಕ್ಷವೆಲ್ಲಾ ಸಾವಧಾನವಾಗಿ ಇದ್ದು....ಕೃಷ್ಣ ಪಕ್ಷ ಹುಟ್ಟುತ್ಲೂ ಮೊದಲು ಗೊಣಗುಟ್ಟೋಕೆ ಪ್ರಾರಂಭ ಮಾಡಿ....ಕ್ರಮೇಣ ಗದರಿ....ಕೊನೇಗೆ ಅಮಾವಾಸ್ಯೆ ರಾತ್ರೀಗೆ, ಮನೇಲಿದ್ದೋರೆಲ್ಲಾ ಹುಚ್ಚು ಹಿಡಿದೋರಹಾಗೆ ನಡುರಾತ್ರೀಲೇ ಕಿರಿಲಿಕೊಂಡು ಬೀದೀಗೆ ಬಂದು, ಅಕ್ಕಪಕ್ಕದೋರ ಆಶ್ರಯದಲ್ಲಿ ಉಳಿದ ರಾತ್ರಿ ಕಳೆದು, ಮಾರನೇ ಬೆಳಿಗ್ಗೆ....ಮನೆ....ಬೀಗದ ಕೈ....ಬಾಡ್ಗೆ ಸಮೇತ....ಶೆಟ್ಟರಿಗೆ ಒಪ್ಸ್ಸೋದು: ಶೆಟ್ರು, ಬೀಗದಕೈ ಸ್ವೀಕರಿಸಿ, ಮನೆಬಿಟ್ಟು ಹೋಗೋರಕೈಲಿ, "ಅಯ್ಯಿಂದಿ ಅಯ್ಯೋಯ...ಪೊಯ್ಯೇವಾಳ್ಳು ಪೊಯ್ಯಪೋತಾರು ತಾವು. ಅಯ್ತೆ, ನಾಕಡುಪುಮೀದ ಕೊಟ್ಟೊದ್ದಂಡ....**ದೇ**ನಿಕಿ ಇಲ್ಲು ವಿಡಿಚಿ ಪೋತಾರೋ ಚಪ್ಪೊದ್ದಂಡ ಯವ್ವರಿತೋನೂ!" ಂತ ಶಪಥ ತಕ್ಕೊಳ್ಳೋದೂ: ಇನ್ನು ಮೂರೋ ಆರೋ ತಿಂಗಳು ಮನೆ ಬಾಡ್ಗೆ ಇಲ್ದೇ ಖಾಲಿ ಬೀಳೋದು....ಮತ್ತೆ ತಿರುಗಿ ಯಥಾ ಪ್ರಕಾರ. —ನಾನು ಹೇಳಿದ್ಹಾಗೆ ಶುಕ್ಲಪಕ್ಷ; ಪಾಡ್ಯಾನೋ ಬಿದಿಗೇನೋ.

ಶೆಟ್ಟ್ರು—ಕಾದಂಡೀ ! ದೆಯ್ಯಾಲೂ, ಪಿಶಾಚಲೂ, ಉಂಡ್ನೀ ಲೇಕ ಪೋನಿ ! ರೊಂಡುವೆಯ್ಯಿ ರೂಪಾಯ್ಲು ಇಚ್ಚಿ ಕೊನಿನ ಇಂಟ್ಲೋ ಬಾಡಿಗಕಿ ಉಂಡೇವಾಳ್ಳನಿ....ವಾಂಡ್ಲು....“ ಚೂಸ್ತಿಮಾ ” ಅನಿ ಚೆಪ್ಪೇ ದೆಯ್ಯಾಲು .. .... ಚೇತ್ಲೋ ಕೊಟ್ಟಿನಾ ?.... ಕಾಳ್ಳತೋ ತನ್ನಿನಾ ? ... ಕೊರಿಕಿನಾ ?.... ಚಂಪಿನಾ ? ದೆಯ್ಯಾಲು ತನುಂತಕು ತಾಮು ಉಂಡಿನ, ವೀಳ್ಳು ವೀಂಡ್ಲಂ ತಕು ಬಾಡಿಗಿಸ್ತಾ ಉಂಡರಾದಾ ? **ಪಿರಿಕಿಲು** ಅಂಟೇ ಮೇಮು ! ಚೆಲ್ಲಂ ಸಾಬು ! ! ದೀನ್ಕೆ ಮಮ್ಮುಲ್ನಿ....ಹಿಂದೂಲ್ನಿ ಪಿರಿಕಿಲೂ ಅನೇದಿ....ಮೀರಂತ.

ಶಾಮಣ್ಣ—ಒಳ್ಳೇ ವಾದ ಶೆಟ್ರೇ ನಿಮ್ದು ! ಕೈಯಿಂದ್ಲೂ ಹೊಡೀದೆ, ಕಾಲಿಂದ್ಲೂ ಒದೀದೆ, ಯಾರ್ನೂ ಕೊಲ್ದೆ, ಇದ್ರೂನೂವೆ ದೆವ್ವ .. ಮಲಗಿರೋ ವಾಗ ಬಾಗಿಲ ತಾಪಾಳಾನ ಆಡ್ಸಿಯೋ....ಕಂಚಿನ ಚೊಂಬ್ನ ಉರಳಿಸ್ಯೋ ... ಎಬ್ಸಿ....ಎದ್ದೋನು ದೀಪ ಹಚ್ಕೊಂಡು ಸುತ್ತಮುತ್ತ ನೋಡೋವಾಗ.... ನಡುರಾತ್ರೇಲಿ....ಕಾಲಿಗೆ ಗೆಜ್ಜೆ ಕಟ್ಕೊಂಡು “ ಝುಲ್ ಝುಲ್ ” ಅಂತ ಹೆಜ್ಜೆಗ್ಳಿಡ್ತಾ ಹಜಾರದಾಚೆ ತಾಪಾಳು ಹಾಕಿದ ಮುಂದಿನ ಬಾಗಿಲು ತೂರಿ ಕೊಂಡು ಹೋದ್ಹಾಗೆ ಒಬ್ಬ ಹೆಂಗ್ಸು ನಡುರಾತ್ರೆ ಅಮಾವಾಸ್ಸೇಲಿ ಕಂಡು ಬಂದ್ರೇ.... ನಿಮಗೆ ಹೇಗಿರುತ್ತೆ ? .... **ಅದೇ**.... ಬೇಡ ಬೇಡಾಂತ ನಾನು ಬಡುಕೊಂಡ್ರೂನೆ ಹುಚ್ಚುಹಠ ಹಿಡ್ದು ನೀವು ಕೊಂಡ್ಕೊಂಡ ಮನೇಲಿರೋ.... **ಐಬು** !

ಶೆಟ್ಟ್ರು—ಅಬ್ಬಬ್ಬಾ ! ದೇವ್ನ್ಡೇಗತಿ ! ಅಟ್ಟಲ್ನಾ....ಗೆಜ್ಜಲು ಕಟ್ಕೋನಿ ಕುಲ್ಕೇ ಆಡುದೆಯ್ಯಮಾ ಉಂಡೇದಿ ...ಆ ಯಿಂಟ್ಲೋ ? .. ಅಯ್ತೋ.... ಚೆಲ್ಲಂ ಸಾಬೂ !! ನೀ ಐಕಟ್ಟು ಯಿನುಪುಗುಂಡಿಗ ಬಾಡಿಗಕಿ ಉಂಟೇ ಅಮಾಸ್ ಅಮಾಷ್ಕೊ ರೆಯ್ಯಿರೆಯ್ಯಂತ ಒಕ್ಕ ಕಾಸಿವ್ವಕ ತಾಫ ಚೂಡವಚ್ಚನು ಕಾದ !.... ಇಂಕ....ಪಾಡುತುಂದಾ ಆ ಆಡಿದಿ ?....

ಶಾಮಣ್ಣ—ಇಷ್ಟು ಮಾತೇಕೆ ... ಇನ್ನೂ ಸಪ್ತಮಿಾ ಚಂದ್ರ ಕಾಣೋ ವರಿಗೂ ಅದೇ ಗಲಾಟೆ ಆ ಮನೇಲಿ. ಬೇಕಾದ್ರೆ ಶೆಟ್ರೇ ! .. ಈ ಹೊತ್ತು ರಾತ್ರೆ ಅಲ್ಲೇ ಮಲಕ್ಕೊಂಡು ತನಿಖೇ ಮಾಡಿ !

ಶೆಟ್ರು—ತಿರುಪತಿ ವೆಂಗಟ್ರಮಣಾ ಅಂಟೆ. ಸಾಕ್ಶೀಲ ಈ ಶೀಕಲಾ ಟಮು. ನೇನು ಆ ಪಾಡಿಲ್ಲು ಕೊಸಿಂದಿ ಬಾಡಿಗಕು ಇಚ್ಚಿ....ಬದ್ದೇದಾನ್ನೇ ಕಾಕ....ನೇನುಂಡಿ ಅಕ್ಕಡ ಚಚ್ಚೇದಾನ್ನಿ ಕಾದು! ಅದಿ ಉಂದನೀ!.... ಐಯ್ತೆ .... ಮೀಕಂದರಿಕೂ .. ದೆಯ್ಯಾಲೂ.... ಅಂಟೆ ನಂಬಿಕನಾ?.... ಚೆಲ್ಲಂ ಸಾಬ್ಲೂ! ತಾಮು ಚೆಪ್ಪಂಡ!

ಗಡF ಖಾನ್--ದೆವ್ವ!....ಶೈತಾನ್!....ಐಯ್ತೆ ಬಿಲ್ಕುಲ್ ಐಯ್ತೆ ....ಹಮೇಭಿ ನಮ್ಮಾಗೇಲೂ ತುಮ್ಮೇಭೀ ನಿಮ್ಮಾಗೇಲೂ... ಐಯ್ತೆ. ಏಕ್ ಫೋಟಾ ಕಾನಿ ಬೋಲ್ತಾಹೂಂ ಕೇಳೇಕೆ ಬೇಕೂ ನೀವು....

---

## ಸಾಬರ ಕಥೆ.

(ಭಟ್ಟರಿಗೆ) ಸ್ವಾಮಿ! ಪುಟ್ಟಮಲ್ಲ ಜಾತಿ ನಹೀ ಆಪ್?....ನಾನು ಗನ್ನ ಜಮಾಯ್ಸಿ ಚೆಲ್ಲ ಕಮಾಯ್ಸಿ ಬೇಪಾರ್, ಇಸ್ಕೆ ಸೋಬ್ ನನ್ಗೆ ದಳ್ಳಾಳ್ ಥ....ದಳ್ಳಾಳ್ ಇದ್ದ ಪುಟ್ಟಮಲ್ಲಪ್ಪ....ಅವನ್ಗೆ ಜೋರು ಔರ್ ಚೋಟ ಬಚ್ಚ ಮಗ ಇದ್ದ. '**ಮುದ್ದ**' ಹೆಸ್ರು, ಹುಡ್ಗಾಗೆ ಪೆಸ್ರು; ದೇಖಿಯೇ!...ಹರ್ ಏಕ್ ಅಮಾಸ್ಕೆ ರಾತ್ ಪುಟ್ಮಲ್ಲಾಕೆ ಝೋಪ್ಡಿ ಮುಂದೆ ಹುಣ್ಸೇ ಜಾಡ್ಕೇ ಕೊಂಬೆಮೇಲೆ ಕೂತ್ಕೊಂಡಿ, "**ಮುದ್ದ! ಮುದ್ದ! ಮುದ್ದ!**" ಅಯ್ಸ ರಾತ್ ಸೋಬ್ ಅಲ್ಲಾಯ್ಸಿತಿತ್ತು....ಏಕ್ ಬಡಾ ಗುಗ್ಗು! ....ಕ್ಯಾ ಬೋಲ್ತೇ ಕನಡೀಮೆ ಸಾಮಿ?

ಭಟ್ರು—ಪುಟ್ಟಮಲ್ಲಪ್ಪನ ಮನೆ ಮುಂದಿನ ಹುಣಿಸೇಮರದ ಕೊಂಬೇಲಿ ಕೂತ್ಕೊಂಡು ಅಮಾವಾಸ್ಯೆ ರಾತ್ರೀಯೆಲ್ಲಾ ಪುಟ್ಮಲ್ಲಪ್ಪನ ಮಗ ಕೈಕೂಸು ....ಅದ್ರ ಹೆಸರ್ನ "ಮುದ್ದು! ಮುದ್ದು! ಮುದ್ದೂ!" ಅಂತ ರಾತ್ರಿಯೆಲ್ಲಾ ಕಿರುಚ್ತಿತ್ತು ಒಂದ್ಗೂಬೆ.. ದೊಡ್ಡ ಗೂಬೆ... ಅಲ್ವೇ ಸಾಬ್ರೇ?

ಶೆಟ್ರು—ಮಂದಟ್ಸಾಯ....ಚೆಪ್ಪಂಡ ಸಾಬ್ಲು .. ಈ ಶನಿ ದೆಯ್ಯಮುಲ ಮಾಟ ದೇಸಿಕೊಚ್ಚಿನೋ ಆ ವೆಂಗಟರಮುಣುಡಿಕೇ ವೆಲುಗು!

ಗಡFಖಾನ್— ಜೀ ಹಾಂ! ಹಮಾರಾಮೇ ಗುಗ್ಗೂ.. ಗೂಬೆ.... ಮೌತ್ಕಿ.. ಸತ್ತುಹೋಗೂದೂಗೆ... ಸಿಷಾನಿ.... ಗುತ್ರ್ಗ ಆಯ್ತಿ. ಪ್ರುಟ್ಟಮುಲ್ಲಪ್ಪ ಓ.. ಬಿ ಚಾರಿ.. ಬೆದಕ್ರೊಂಡಿ ನನ್ಗೆ ಕೇಳ್ತಾನೆ ಗುಗ್ಗು ಅಲ್ಲಾಯಿಸ್ತದ್ಕೆ ಮತ್ಲಬ್! ನಾನು ಖಾಜಿಸಾಬ್‌ಗ ಕೇಳ್ದೆ. ಓ ಬೋಲ್ತಾಯ್— ' ಗುಗ್ಗು.... ಕಬ್ರಸ್ತಾನ್ಮೆ....ಮನಾಣ್ಡಲ್ಲಿ ಮುರ್ದ ಹೆಣ... ತಿಂದು ಬದ್ಕೋ ಜಾನ್ವಾರ್. ಕೊಪಿ ಕೊಪಿ ಯಾರು ಯಾರು ತಿನ್ನೋಕೆ ಬೇಕು ಅವನ್ಗೆ ಸಾಯೋದೆ ಅವ್ವಲ್ ಖಬರ್ ಕೊಡಾಕೆ ಹೇಳ್ತೈತೆ! ಪ್ರುಟ್ಟಮುಲ್ಲಾಕ ಜೇಟೂಕು ಖಾನೇಕ ಇರಾದ ಹೈ-- ಪ್ರುಟ್ಟ್ರುಲ್ಲಾಗೆ ಹೇಳು.. " ಕುಚ್ ಅZಾಬ್.... ಕೇಸ್ ಕಷ್ಟದಲ್ಲಿ ಲಪಟ್ಕೋ . ನುತ್ಕೊಂಡು.. ಘರ್ಮೆ ಎಲ್ರೊ ' ಮುದ್ದು ಮಗ್ಗ ಯಾ!' ಮುದ್ದು ' ಮಗ್ಗಯಾ '! ಅಂತ ಅಕ್ಕೊಂಡಿ ಕಸ್ಟುಮೆ ಲಪ್ಟೇನ ಜೇನ್ ಮಸಾಣ್ಗೆ ತಕ್ಕೊಂಡ್ಹೋಗಿ ಮಟ್ಟೀಮೆ ಮಿಲಾಯ್ನಿ ಆಗಯಾತೋ....ಹೋ ಗಯಾ ಗುಗ್ಗೂಕಾ ಗಲಾಟಾ "——ಕರ್ಕೆ. ಮೈ ಖಾಜೀ ಮಾತು, ಪ್ರುಟ್ಟ ಮುಲ್ಲಾಗೆ ಪೌಂಛಾಯ್ನಿ....ಉನೇಭಿ ಮೈಯ್ನಾಚ್ ಕಿಯಾ. ಫಜರ್ ಉಟ್ಕೋ ಎದ್ದು ಎಲ್ರೊ " ಮುದ್ದು ಸತ್ತ! ಮುದ್ದು ಸತ್ತ!" ಅಯ್ನ ಅಲ್ಲಾಯಸ್ತಾ.... ಏಕ್ . ಕ್ಯಾ ಬೋಲ್ತೀ ತುಮಾರುಮೇ?.. ಹಾಂ! ಸೋರೇಕಾಯಿ ಲೇಕೇ.... ರುಮಾಲ್‌ಮೇ ಲಪಟ್ಕೋ ಬಾಪ್ಪು, ಮಾ.. ಮನೆ ಎಲ್ರೂನೆ.. ರೋತೇರೋತೇ ಮಸಾಣ್ಗೆ ಹೋಗಿ ಕಪ್ಡೇಕೆ ಸಾತ್ ಸೋರೇಕಾಯಿ ಮಟ್ಟೀ ಮಾಡ್ಬಿಟ್ಟೀ ಫಿರ್ ಆಗಯೇ ... ಬಂದ್ಬಿಟ್ರು ಮನೇಗೆ. ಆವತ್ತು ರಾತ್‌ಸಿಂದ ಬಹೀಂಚ್ ಗುಗ್ಗೂ ....ಅಪೇ ಗೂಬೆ ..ಅಪೇ ಮುನ್ಸೀ ಝಾಡ್ಮ್ರೀ ಕೂತ್ಕೊಂಡೀ " ಮುದ್ದೂ ಇಲ್ಲ! ಕದ್ದೂ! —ಮುದ್ದೂ ಇಲ್ಲಾ, ಕದ್ದೂ!" ಅಯ್ನಾ ಅಲ್ಲಾಯ. ಔರ್ ಪ್ರುಟ್ಟಮುಲ್ಲಪ್ಪಾ " ಕ್ಯಾ ಭೇಜಾ! ಕ್ಯಾ ದಿಮ್ಮಾಕ್ ಜೀ ಗುಗ್ಗೂಕು! ಮುದ್ದೂಕು ಕದ್ದೂ ಬದ್ಲೇಸೋ ಹಿಕ್ಮತ್ ಸಮುಜ್‌ಲಿಯಾನಾ! ಕ್ಯಾ ಅಜಬ್ ಗುಗ್ಗೂ!" ಕರ್ಕೆ ಓ ಬೀಚಾರಿ ಘಾಬ್ರ ಹೋಕೆ, ಕಾಮ್ ಛೋಡ್ಕೋ ಜೋರು ಬಚ್ಚೇಕೆ ಸಾತ್ ಗಾಮ್ ಛೋಡ್ದಿಯಾ, ಮೈ ತೋ ಹೈರಾನ್‌ಹೂಂ... ಈ ಗುಗ್ಗೂಗೆ ಕೈಸಾಮಾಲುಂ ಹುವಾ? ...." ಮುದ್ದು ನಹಿ, ಕದ್ದೂ" ಂತ ....ದೆವ್ವ ಶೈತಾನ್ ಹೇಳಿ ಇರ್ಬೇಕು.

ಬೋರ--ಇದೇನ್ಸಾಬ್ರೇ! ಮಸ್ಕಿರಿಗೇನ ಯೇಳಿದ್ದು ಕತೆ!....ದೆವ್ವ ....ಪಿಶಾಚಿ....ಮೋಹಿನಿ.... ಮುನೀಸ್ವರ.... ಯಾವಾಗಲಾರೂ ಕೇಳಿವ್ರಾ? ಕಂಡಿವ್ರಾ?

ಗಡFಾರ್—ಇಲ್ಲ ಬೋರಣ್ಣ!....ಕಭಿ ನೋಡಿದ್ದಿಲ್ಲಾ ದೆವ್ವ. ನನ್ಗೆ ಕಾಣಿಸ್ತಿದ್ರೇಭೀ ದೆವ್ವ ಇಲ್ಲಾನೇ ಇಲ್ಲಾ ಕರ್ಕೇ ವೈ ಕೈಸ ಭಾಯಿಸ್ ಕರೂಂಗ!

ಬೋರ—ಕೇಳಿ ಸಾಬ್ರೇ. ಶೆಟ್ರೇ ನೀವೂನೂವೆ ಕೇಳಿ ಭಟ್ರಿಗೂ ಶಾಮಣ್ಣೋರಿಗೂ ಓಟೋಟು ತಿಳಿದಿರಬೈದು ಆದ್ರೂ...

ಭಟ್ರು, ಶಾಮಣ್ಣ —ಹೇಳಿ ಬೋರಣ್ಣೋರೆ ಹೇಳಿ.

ಶೆಟ್ರು--ಇದೇಮಿ! ವಿಪರೀತಮೈಪೋಯು! ಚಪ್ಪಂಡ ಗೌಡವಾಳ್ಳು! ನಾಕೇ....ಮಿ ಅಭ್ಯಂತರಮು ಲೇದು! ವಿನೇವಾಳು ಉಂಡೇವರ್ಕೂ ಚಪ್ಪೇ ವಾಳ್ಳು ಚಪ್ತಾನೇ ಉಂಡೊಚ್ಚುನು. ಆಯ್ತೆ ದೆಯ್ಯಮೈತೇ ಏಮಿ! ಆಡದಿ ಆಡ್ದೇ! —ಇಲ್ಲು ಬಾಡಿಗಕಿ ತೀಸ್ಕೋವುಂಡೇ **ನೊಗವಾಡು .... ಆಡು** ದೆಯ್ಯಾನಿಕಿ ಬೆದರಿ ಇಲ್ಲಿಡಿಚಿ ಪೋಯ್ಯೇದಿ ಮೊಗತನಮಾ? ಅದೀನು....ಕಾಳ್ಳಿಕಿ ಗೆಜ್ಜಲು ಕಟ್ಕೋನಿ ಕುಲುಕೀ ಕುಲುಕೀ ತಾಫ ಚೇನೇ ಆಪದೆಯ್ಯಮು ಉಂಟೇ ಇಲ್ಲುಕಿ ಡಬ್ಬಲ್ ಬಾಡಿಗ ಇವ್ವಲಾ ನನ್ನಿ ಅಡಿಗಿತೆ! ..

ಬೋರಣ್ಣ---ಶೆಟ್ರೆ! ನೀವೇಳೋ ಅಂಗೆ, ಅಮಾಸೆ ಇಂದ ಏಳು ರಾತ್ರೆ ಕಾಲಿಗೆ ಗೆಜ್ಜೆ ಕಟ್ಕೊಂಡು ಯೆಂಗ್ಸು ಕುಣಿಯೋದು ನೋಡಾಕೆ, ಬಾಡ್ಗೆ ಕೊಟ್ಕೊಂಡು ನಿಮ್ಮನೇಲಿರಬೌದು! ....ಆದ್ರೆ ನಿಮ್ಮನೆ ದೆವ್ವ ಅಂಗಲ್ಲ. ಆ ನಾಯಕ್ನಾಸಿ ಕುಣೀತಿರೋವಾಗ, ಕತ್ತು ಕುಯ್ದೋಗಿ.... ಕುಡುಗೋಲಿಂದ ಕಟಾಯಿಸ್ದಂಗೆ ಬಿದ್ಕೊಂಡು....ರಕ್ತ ಮೈಯೆಲ್ಲಾ ಸುರೀತ....ಮೊಕ ಎಲ್ಲಾ ನಸ್ನಗ್ತಾ....ತಾಫೆ ಕಟ್ಕೋದು ಒಂದು ಚೆಂದ!....

ಶೆಟ್ಟ್ರು—ಏಮಿ! ಗೊಂತುಕೋಲೆ ಪ್ರೋಯಿ ರಕ್ತಮು ಕಾರುತುಂಟುಂದ ಕೆುಲುಕೇಟಪ್ಪೂ....

ಬೋರಣ್ಣ—ಆದ್ರೂನೂವೆ ಏಬಿಲ್ಲ...ಅಪಾಯ ಇಲ್ಲಾ....ಮನೇಲಿ ದ್ದೋರ್ಗೆ...ಏಟು ಬೆದರಿದ್ರೂವೆ...ಇದುವರೆಗೂ ಒಂದು ಜೀವ ಸಾಯ್ಲಿಲ್ಲಾ ಶಿವಲಿಂಗಪ್ಪನ ಮನೇಲಿ! ಈಗ ನಿಮ್ಮನೇಲಿ ಶೆಟ್ರ್ರು. ಈ ದೆವ್ವದ ಚರಿತ್ರೆ ನಮಗೆ ಗೊತ್ತು ಆಳಬರಿಗೆ. ಇವಳು ಊರಿಗೆ ಬಂದಾಗ....ನಲವತ್ತು ವರ್ಷದ ಮಾತು ನಾನಾಡ್ತಿರೋದು....ನಾನು ಪ್ರಾಯದ ಉಡ್ಗ. ಚಿಕ್ಕನಿಂಗಪ್ಪನ ಮನೆ ಮದುವೇಗೆ ಕರ್ಸಿದ್ದು....ಅವ್ಳ....ಕಂಚಿ ಕಡೆಯಿಂದ ಅವಳು ಬಂದದ್ದು ಗೊತ್ತು ಊರ್ಗೆಲ್ಲಾ. ಓದದ್ದು ಗೊತ್ತಿಲ್ಲಾ. ನಿಂಗಪ್ಪನ್ಗೂ ಕಾಯಿಲ್ನ್ನ! ಬೇಗ.... ಕಾಪೀ ತೋಟದ ಕೆಂಚಪ್ಪನಿಗೂ ಕಾಯಿಲ್ನ್ನ. ಇದ್ದಕ್ಕಿದ್ದಂಗೆ ಗುಮ್ಮು ನಾಯಕ್ಸಾನಿ. ಯೆಣಾನೂ ಸಿಕ್ಲಿಲ್ಲ ಇಲ್ಲಿ....ಕಂಪ್ಲೇಂಟೂ ಇಲ್ಲ. ಮದರಾಸು ಕಡೇಯಿಂದ ತಿಳಿದೂನೂವೆ ಕಯ್ಯಾಡಿಸಾಕಾಗ್ದೆ ಕಣ್ಣು ಕಣ್ಣು ಬಿಡ್ತಿತ್ತು ಪೋಲೀಸು. ಆದ್ರೆ ಊರ್ಗೆಲ್ಲಾ ಗೊತ್ತು. ಲಕ್ಷಾಂತರ ರೂಪಾಯಿನ ಆಸ್ತೀನ ಕಳ್ಕೊಂಡು ಅರಾಜಾದ ಮನೆ...ನಿಮ್ಮ ಪಾಲಿಗೆ ಬಂತು ಶೆಟ್ರ್ರು! ಇನ್ನು ಕಾಪಿ ತೋಟ್ದೋನೋ! ಮನೆ ಬಾಕ್ಲು ಮಕ್ಕಳು ಮರಿ ತೋಟದ ಸಮೇತ ಮಣ್ಣಾಗೋದ! ಆದ್ರೆ ಈ ಉಡ್ಗಿ ಅಮಾಸೆ ಬರುತ್ಲು, ಕತ್ತಿಂದ ರಕ್ತ ಸುರಸ್ತಾ ....ಎಜ್ಜಾಬು...."ಝುಲ್! ಝುಲ್!"ಂತ ತಾಫಾ ಕಟ್ತಾ ಇವತ್ತಿಗೂವೆ....!

ಶೆಟ್ಟ್ರು—ಚಾಲೂಂಟೆ .... ಗೌಡವಾಳ್ಳು! ಚಾಲೂಂಟೆ! .... ಐತೇನೂ ಇಂಟ್ಲೋ ಉಂಡೇವಾಳ್ಳಿಕಿ ಅಪಾಯಮು ಯೇಮಾನ ಚೇಸಿನ....ಆ ದೆವ್ವಮು? ....ಸಾಬುಲು **ಚೆಪ್ಪಿನ ಗೂಬ** ಪುಟ್ಟಮಲ್ಲಪ್ಪನಿ **ಬಿಡ್ಡ....ಕೊಡಕು.... ಮುದ್ದೂನಿ .... ಕೊಡುಕುನಿ ಕೊರಿಕಿನಾ?** ಒಟ್ಟ್ಲೋ ಚೆಪ್ತಾನು.... ದೆಯ್ಯಾಲು ದೇನಿಕಿ ಭೂಮಿಲೊ....ಉಂಡಿವ್ರೋ ದೇವುಣಿಕೇ ವೆಲುಗು.... ಅಯ್ತೇ ದೆಯ್ಯಾಲ್ನಿಂಚೇ ಯೆವ್ವರಿಕೂ ಏಟು ಪಡಲೇದು ಕದಾ! ದೆಯ್ಯ ಮುಂಡೇ ಯಿಂಟ್ಲೊ ಉಂಡಿನವಾಳ್ಳು ಬೆದರಿ ಉಂಡಾರೆ ಕಾಕ—ಎವ್ವರೈನ ಚಚ್ಚಿರ....ಇದಿವರ್ಕೂ?

ಬೋರಣ್ಣ — ಯಾಕ್ಸೆಟ್ರೇ? ದೆವ್ವ ಇರೋ ಮನೇಲಿ ಒಬ್ರಾನಾ ಸತ್ತಿದಾರಾಂತಲ್ವೇ ಕೇಳೋದು ನೀವು! ಒಂದಲ್ಲ, ಎಲ್ಡಲ್ಲ, ಅತ್ತಲ್ಲ, ಇಪ್ಪತ್ತಲ್ಲಾ—ತಿಳಿದು ಮಾತಾಡ್ತಿನಿ!—ಮೂವತ್ತೊಂಬತ್ತು ಜೀವ ತಿಂದ ಮನೆ ನಮ್ಮೂರೊಳ್ಗೇ ಅಯ್ತೆ!! ನನ್ನ ಪ್ರಾಯದಲ್ಲಿ.... "ಸುಂಕದಕಟ್ಟೇ" ಂತ ಯೆಸ್ರು ಮನೇಗೆ; ಒತ್ತು ಮುಳುಗುತ್ಲೂ ಆ ಬೀದಿ ಬೀದೀನೆ ತಿರುಗಾಡಾಕೆ ಹೆದರ್ತಿದ್ರು ಗಂಡಸ್ರು!...ಈಗ್ಲೂವೆ ಮನೆ ಆಳು ಬಿದ್ದಿದ್ರೂವೆ...ದರಣಯ್ಯನ ಓಣೇಲಿ ಕಾಲಿಕ್ಕೋರು ಇಲ್ಲ ನಮ್ಮೂರ್ಲಿ!

ಶೆಟ್ರು—ಏಮಿ! ಸುಂಕಂಕಟ್ಟನಾ! ಊಪು ಲೋಪ್ಪಾ! ಅದೆಟ್ಲಯ್ಯಾ! ಅದೇಮಿ ಸುಂಕಮು!?

ಬೋರಣ್ಣ—ಜೀವಾನೇ ಸುಂಕ. ದರಣಯ್ಯನೋರೂಂತ ಇದ್ರು ಶೆಟ್ರೆ ....ನಲವತ್ತು ವರ್ಷದ ಯಿಂದೆ....ದೊಡ್ಡಮನತನ....ಈಗ ಅವರ ಎಸರಿಗೆ ಆ ಆಳುಬಿದ್ದ ಮನೆ ಓಣಿ ಅಷ್ಟೇ ಬಾಕಿ! ಆ ಮನೇಲಿ ಜನಗ್ಳು ತಂಗಿದ ಒಂದೊಂದು ರಾತ್ರೀನೂ ಒಂದೆಣ....ಇಂಗೆ ಮುವ್ವತ್ತೊಂಬತ್ತು ಜೀವ ತಿಂದೈತೆ ಆ ಆಳುಮನೆ. ಅದ್ಕೇ ಸುಂಕದ ಕಟ್ಟೇಂತೆಸ್ರು ಮನೇಗೆ. ಯೋಕ್ತೀನೆ ಕೇಳಿ....

ಶೆಟ್ರು— "ವಿನುವಲಾ ಅನಿ ನಾಕೂ ಆಶ ಗೌಡವಾಳ್ಳು. ಅಯ್ತೆ ಪೊದ್ದು ಮುಣಿಗಿ ಶ್ಯಾನಾ ನೇಪಾಯ ಅಮಾವಾಸ್ಯ ದಿನಮು. ಚೀಗಟಿ. ಅಂಗಡ್ಲೋ ಪಿಲ್ಲವಾಡು ಒಕ್ಕಡೇ ಇಂಟ್ಲೋನೂ ಅದೀನೂ ಏಕಾಂಗಿಕಾಕ ಇಕ್ಕಡಂತ ಕಟ್ಟ ಪೆಟ್ಟಲು ಅಂತೇಮಿ ಭದ್ರಮು ಕಾದು. . ತಮ ಕಥ.... ಮುಪ್ಪೈತೊಂಬಿದಿ ಜೀವಾಲ್ನಿ ಭಕ್ಷಣಂ ಚೇಸಿನ ದೆಯ್ಯಾಲು ಕಥ....ಎಲು ಗುಲೋ ವಿನುವಲನೇಗಾಕ....ಇಪ್ಪುಡು .... ಇಂತಪೊದ್ಲೋ! ... ಕಾವಲಿತಿ ಉಂಟೆ....ವೀಂಪ್ಕಂತಾ ವಿನನಿ....ನೇನು ಪೋತಾನು ....ಮಾಕೇಮಾನಾ ಭಯ ಮುಂಟೇ .... ಉಂಟೇಯೇಮಿ .... ಲೇಕಪೋತೇಯೇಮಿ .... ಚೇರೇ ವಸ್ತಿಮಿ .... ಮಳ್ಳ ಚೇರೇ ಪೋಯಿ ಇಳ್ಳು ಚೇರುತಾಮು....ಬೆದರುಪೊದ್ದಂಡ!....ಜೀವಾಲು ತಿನೇ ದೆಯ್ಯಮುನಿ ಕಥ ರೇಪು ವಿಂಟಾಮು. ನನ್ನು ಪಟ್ಟೋನಿ ರಾಂಡಾ,".... ಎನ್ನುತ್ತಾ ಗಡಗಡನೆ ನಡುಗುತ್ತಿರುವ ಎರಡು ಬಾಹುಗಳಿಂದಲೂ

ಸಾಬ್ರನ್ನೂ ಗೌಡರ್ನೂ ಒಂದ್ಕಡೇ, ಭಟ್ರರ್ನೂ ಶಾನುಭೋಗ್ರನ್ನೂ ಮತ್ತೊಂದು ಕಡೇ ಭದ್ರವಾಗಿ ಅಪ್ಪಿಕೊಂಡು....ಅವರ ಮಾತುಕತೆಗಳಿಗೆ, —"ಸಿಲ್ಪಿಚ್ಚಂಡ ಅಂಟೆ! ಇಕ್ಕಡ ಯಾಲ ಮಾಟ್ಲು! ಮೊಬ್ಬುಲೋ ನನ್ನ ವಿಡುವಕ ಪಟ್ಕೋನಿ.... ಚರುವುದಾಟಿ,....ಊರುಲೋಪಲ ಮಾಟ್ಲಾಡಿಕೊಂಟಾಮು"—.ಎನ್ನುತಾ ಕಾರ್ತವೀರ್ಯಾರ್ಜುನನಂತೆ ಮಿಕ್ಕವರ್ನೆಲ್ಲಾ ಅಪ್ಪಿಕೊಂಡು ಅವರ ಸಹಾಯದಿಂದ ನಡುಗ್ತಿರೋ ತನ್ನ ಕೈಕಾಲುಗಳ್ನ ನೆಟ್ಟಗಿಡ್ತಾ ನಿಧಾನವಾಗಿ ಮನೇಕಡೇ ನಿಷ್ಕ್ರಮಿಸಿದ್ರು.

# ೪

# ಸುಂಕದ ಕಟ್ಟೆ

ಯಥಾಪ್ರಕಾರವಲ್ಲ! ನಾಟಕದವರು ನಾಚಿಕೆ ಪಡಬೇಕು! ಅಂಥ ಸೀನು ಕಾಳಮ್ಮನ ಗುಡಿ ಮುಂದೆ!

ಶೆಟ್ರು—"ದ್ಯೂತಮಾಡ್ತುಂಡಾರು ದುಡ್ಡು ಪೆಟ್ಟಿ! ನಳಮಹಾರಾಜು ರಾಜ್ಯಂ ಪೋಗೊಟ್ಟುಕೊನಿಂದುಂಟ್ಲೇ.... ಪಾಂಡವುಲು, ಒಕ್ಕರ್ನೊಕ್ಕರೂ ಪೆಂಡ್ಲಾಮನ್ನೂ ಮರವಕ ಅನ್ಯಾಯಮೈಯ್ಯಿಂದೀ ಘುಂಡ್ಲೀ. ಆಕಾಲಮುಲೋ ಸರ್ಕಾರಾ? ಪೋಲೀಸಾ? ಅಡುಗೇವಾಳ್ಳೆವರು ವಿನೇವಾಳ್ಳೆವರು! ಇಪ್ಪುಡು, ಸರ್ಕಾರ ಡಬ್ಬು ಮಿಂಗ್ಕೊನಿ ಮೀರು ಉಂಡಿನಾನೂ (ಪೋಲೀಸ್ ಕಾನ್ಸ್ಟೆಬಲ್ ಪುಳ್ಳಯ್ಯನಿಗೆ) ಊರು ಪಟೆಂಗುಲಂತ ಪರೇಲ ಆಡ್ತೂ, ದೇವೀ ಗುಡ್ಲೊ, ಪಾಡಯ್ಯೇದಿ ಚೂಸ್ತಾಉಂಡೇದಾನ್ಕಿ ಪೋಲೀಸ್ಲು ಉಂಡೇದಿ? ಮೀರು....ಮಾರಾಜ್ಲು ಪ್ರಶ್ನ ವೇಸ್ಕೊನಿ?"

ಪುಳ್ಳಯ್ಯ—ಅಲ್ರೀ ಶೆಟ್ರೇ.... ಯಾವ್ ಸೆಕ್ಷನ್ ಮೇಲೆ ಅರೆಸ್ಟ್ ಮಾಡೋದು ನಾನು? ಪಾಳುಬಿದ್ದ ಗುಡಿ. ಹೇಳುವರಿಲ್ಲ, ಕೇಳುವರಿಲ್ಲ. ಐದ್ಹತ್ತು ಜನ....ಪಟೆಂಗರೇ ಆಗ಼್ಲೀ ಪ್ರಭುಗ್ಳೇ ಆಗ್ಲೀ....ಇಷ್ಟೇಟು ಆಡ್ತಿದ್ರೆ.... ನಾನು....??

ಶೆಟ್ಟ್ರು—ಸರಿಪ್ಪೋಯಿ! ದಾನ್ಕೇ ಕಾನ್‌ಸ್ಟೇಬ್ಲು, ಕಾನ್‌ಸ್ಟೇಬ್ಲೇ! ಇನ್‌ಸ್ಪೆಕ್ಟ್ರುಲು ಇನ್ಸ್ಪೆಕ್ಟ್ರುಲೇ! ಒಕ್ಕ ಕುಕ್ಕಕಿಂದ ನೂರು ಗೊರ್ರೆಲು ಕುರ ಬೋಡು ಪೆಟ್ಟೇ ಐಕಟ್ಟು....ಒಕ್ಕ ಇನ್‌ಸ್ಪೆಕ್ಟರ್ ಕಿಂದ.... ಮಿಮ್ಮೆಲ್ಲಂತ ಪೆಟ್ಟುಂಡೇದಿ ಸರ್ಕಾರು” ಎಂದು ಹೇಳುತ್ತಲೇ ಪುಳ್ಳಯ್ಯನು ರೇಗಿ ಸೋಟಾ ವನ್ನು ಬೀಸುತ್ತ ಗುಡಿಯನ್ನು ನುಗ್ಗಲು ದೇವೀ ಸನ್ನಿಧಾನದಲ್ಲಿ ಜಪಾನ್ “ಇಮಿಟೇಷನ್ ಲಂಚ” ಕಟ್ಟನ್ನು ಹಂಚಿಕೊಂಡು ಮುಂದಿರುವ ಆದಿಶಕ್ತಿ ಯನ್ನು ತಿರಸ್ಕರಿಸಿ ಈಗಿನೀಚೆಗೆ ನಿನ್ನೆ ಮೊನ್ನೆ ಹುಟ್ಟಿದ, ಕೇವಲ ಮಹಾ ಲಕ್ಷ್ಮಿಯ ದಯೆ ಹಾರೈಸುತ್ತಾ ಒದ್ದಾಡುತ್ತಿದ್ದ, ಪಟೇಂಗರು, ಕೈಲಿದ್ದ ಎಲೆಗಳನ್ನು ಎಸೆದು....ಹಿಮ್ಮಡಿ ಕಚ್ಚಿ ಬರುತ್ತಿರುವ ಪುಳ್ಳಯ್ಯನ ಸೋಟಾ ಏಟುಗಳನ್ನು ತಪ್ಪಿಸಿಕೊಂಡು ಚಿಮ್ಮುತ್ತಿರುವ ಕಾಲಿಗೆ ತಮಗಿಲ್ಲದ ಬುದ್ಧಿ ಯನ್ನು ಉಪದೇಶಿಸುತ್ತ ಕಂಬಿ ಕೀಳುತ್ತಲೂ....ಏಕಾಂಗಿಯಾಗಿದ್ದ ದೇವಿಯ ಗುಡಿಯನ್ನು ಶೆಟ್ರು ಪ್ರವೇಶಿಸಿ ಗೋಷ್ಠಿಯನ್ನು ಪೂರೈಸಲು ಮಿಕ್ಕ ನಾಲ್ವರು ಬರುವಷ್ಟರಲ್ಲಿ, ದಿವಾಕರನು ಖಾನ್‌ಸಾಹೇಬ್ರ ಆಲೆಯನ್ನು ಹಾಸಿ ಆಗತಾನೆ ಶಾಮಣ್ಣನವರ ಗದ್ದೆಯನ್ನು ಬೆಳಗುತ್ತಿದ್ದನು.

ಭಟ್ರು—ಇದೇನು ಶೆಟ್ರೇ, ಇನ್ನೂ ಐದು ಘಂಟೆಯಿಲ್ಲ; ನೋಡಿದ್ರಿ ಪುಳ್ಳಯ್ಯ ಪಟೇಂಗರ್ನ ಅಟ್ಕೊಂಬರ್ತಿದ್ದದ್ದು! ಸಾಹೇಬ್ರು ಆಲೇನೂ ಬಿಟ್ಟು.... ಶೇಕ್ದಾರ್ರು ಆಫೀಸ್‌ನೂ ಬಿಟ್ಟು ನನ್ನೂ ಬೋರಣ್ಣೋರ್ನೂ....ನಮ್ಮೆಲ್ಲರನ್ನೂ ಸಂಪ್ರದಾಯ ತಪ್ಪಿ ಇಷ್ಟುಹೊತ್ಗೇನೇವೇ....ಸೇರೋಹಾಗೆ........?

ಶೆಟ್ರು—ಯೇಮಿಾಲೇದೂ, ನೆನ್ನ ಮುಪ್ಪೈತೊಂಬಿದಿ ಜೀವಾಲು ಮಿಂಗಿನ ಪೆಯ್ಯಮು ಉಂಡೇ ಧರಣಿಯ್ಯಗಾರಿ ಯಿಲ್ಲು, ಪಾಡಯ್ಯಿಪ್ಪೋಯಿನಿಲ್ಲು ....ಕಥ ಚೆಪ್ತಾನು ಅನೆ ಗೌಡ್ಲು....ವಿನೇದಿ ವಿನುವಲಾ....ಅಯ್ತೆ ನೆನ್ನೈಕಟ್ಟು ಮಬ್ಬುಲೋ ಲೇಕ.... ಎಲುಗುಲೋನೇ ವಿನಿ ಎಲುಗುಲೋನೆ ಇಂಟಿಕಿ ಪ್ಪೋಯೇದಿ ಮಂಚಿದೀನಿ ಪಿಲ್ಚಿಂದಿ ಮಿಮ್ಮೆಲ್ಲಂತ. ಯಮರೇಮಿ ಚೆಪ್ತೇನೂ ಪ್ರಾಣಭಯಮು.... ತಜ್ಜನ್ಮಮು...., ಮನುಷಿಕಿ.... ಕಾದಾ ಗೌಡೋಳ್ಳು!? ಚೆಪ್ಪಂಡ ಕಥ.

# ಬೋರೇಗೌಡನ ಕಥೆ

ನಾನೇಳ್ದಂಗೇ....ಬಟ್ರಿಗೆ ಓಟೀ ಓಟು ಗೊತ್ತು. ಚಿಕ್ಕ ಐದ ಆಗ. ಶಾಮಣ್ಣೋರೂ ನಾನೂ ಪ್ರಾಯದ ಉಡುಗರು, ಸಾಬ್ರೆ; ಈಗ ಕುಗ್ಗಿವ್ರೆ ಶಾಮಣ್ಣೋರು. ಆಗ್ನೋಡಿರ್ಬೇಕ್ರಾ ಅವರ ಜಿಸುಮು. ಉಕ್ಕು ಜಾತಿ ಕಾಲುಕ್ಕೈಯ್ಯಿ ಗರ್ದನ್ನು. ಒಂದೇ ಗಲ್ಲಿ ನಾವಿಬ್ರೂ. ಕಲೀಫ಼್ ಪೀರ್‌ಪಾಚಂದು. ಧರಣಯ್ಯನೋರ್ದು ಎದುರು ಗಲ್ಲಿ. ಎಲ್ಲಾ ಗಲ್ಲೀನೂ ನಮ್ಮ ಕಲೀಫರ್ನ ಬುಡ್ರು. ಖಸಾಬ್ ಮುತ್ರ್ಜಾಲಿ ಅವಂದೊಂದುಗಲ್ಲಿ ಮುಸಲ್ಮಾನರ್ದು. ಇಜೀದಶಮ್ಮಿ ದಿನ ನೋಡ್ಬೇಕ್ರ ದೊಡ್ಬಳೀ ಕುಸ್ತಿ. ನಲವತ್ತೆಂಟು ಜೋಡಿ ತೀರಿದ್ಮೇಲೇನೇವೇಯೋ ಮನೇಗ್ಬರೋದು. ವರ್ಸಾ ವರ್ಸಾನೂ ಆದತ್ತು. ಗಲ್ಲಿ ಗಲ್ಲೀಗೂ ದುಸ್ಮನಿ ಯೇಟಿದ್ರೂನೂವೇ....ದೋಸ್ತೀನೂ ಇತ್ತು. ಈ ಮೂರು ಗಲ್ಲಿಲೂವೆ ಕಿಲಾಡಿ ದರಣಯ್ಯನೋರ ಗಲ್ಲಿ ಕಲೀಫ ಫೇಕ್ ರಂಗಯ್ಯ, ರುಸ್ತುಂ. ಕುಸ್ತಿ ಆಗ್ಲಿ ಈಜೋದಾಗ್ಲಿ ಪಟ್ಟವರ್ಸೆ ಆಗ್ಲಿ....ಅವನ್ನ ಮಾರಿಸ್ಕೋರು ಉಟ್ಲಿಲ್ಲ ಇನ್ನುಟ್ಟಾಕಿಲ್ಲ. ಬಾರುದ್ದ ಕೋಲು ಕೈಲಿ ಇದ್ಬಿಟ್ರೆಗಾನ ಊರೆಲ್ಲಾ ಕಲ್ಲುಗಳು ಬೀರ್ತಿರ್ಲಿ ಒಂದ್ಕಲ್ಲಾಗ್ದೆ ಸಿಬಾಯಿಸ್ಕೊಳ್ಳೋನು .... ರುಸ್ತುಂ. ಆದ್ರೆ ದುಡ್ಕೋದು ಅವನ ಐಬು. ಮೈನೂ, ಗುಂಡ್ಗೆನೂ, ಉಕ್ಕು, ಸಿಂವುದಂಗೆ. ಭತ್ತದ್ಹೋಡ ತೊಟ್ಕೊಂಡು ಕಾಲ್ಗೆ, ಉಲಿಯೂಸ ಕಟ್ಟಾನೆ ಮೂರು ಗಲ್ಲೀ ಮುಂದೂನೂ. ಕುರಿಮರಿಗಳ್ನ ಬುಟ್ರೇ ಅಂಗಂಗೆ ಬಾಯಾಗೆ ಕಚ್ಕೊಂಡು ಭಿರ್ಕಾಯಿಸ್ತಿದ್ದ....ಫೇಕ್ ರಂಗಯ್ಯ!

ಗಡF ಖಾನ್—ಹಾಂ ಬೋರಣ್ಣಾ, ಬಕ್ರಿಯೋಂಕೂ :ದಾತೋಮೆ ಚಾಕ್ ಲೇಕೇ ನನ್ದು ಬಚ್ಚನ್ ಮೆ ದೇಖ್ಯಾಹೂಂ! ಥೇ ರುಸ್ತುಮೋ ಉಸ್ ದಿನೋಮೇ....ಈವಾಗ ಹಂಗೆ ಯಾರೂ ಬೋರಣ್ಣಾ ?!

ಬೋರಣ್ಣ — ಈಗಲಾ!? ಅಂಚೇಕಡ್ಡೀ ಅಂಗೆ ಜಿಸ್ಮ ಇರೋ ಒಣಕಲ್ನನ್ಮಕ್ಕೆಲ್ಲಾ ಉಸ್ತಾದುಗಳು .. ಈ ಬೈಸ್ಕಲ್ಲೂ ಬಂದೂಕೂ ಬಂದ ಕಾಲ್ದಲ್ಲಿ....ಆದರಿದ್ಕೇಳ್ರಿ....ಜುಮಾರತ್ತು... Fಾತ್ಯ; ನಮ್ಗಲ್ಲೀಲಿ ಮುತ್ರ್ಜಾಲೀನೂ ಇದ್ದ....ರಂಗಯ್ಯನೂ ಇದ್ದ. ಷಕ್ಕರ್ ಫಾತ್ಯಾಕೊಡಿಸಿ ಒರಗ್ಬಂದು

....ಕೂತ್ವಿ. "ಇದ್ಯಾಕಿಂಗೇ"? ಅಂದ ರಂಗಯ್ಯ. ಪೀರ್ಸಾಚಾ "ನಮ್ಗಲ್ಲೀಲಿ ಆಡತ್ತು; ಜುಮ್ಮಾರತ್ ಫಾತ್ಯಾ ತೀರ್ಸ್ಕೊಂಡು ದೀಪ ಆರ್ಸಿ ಒರಕ್ಬಂದು ಬಾಕ್ಲಾಕ್ಕೊಂಡು ಕೂತ್ಕೊಳ್ಳೋದು. ಗಲ್ಲೀಒಳ್ಗೆ ಅನುಮ ಭೀಮ ಇಬ್ರು ಲಡತ್ ಸದ್ದು ಕೇಳ್ತೈತೆ" ಅಂದ. ಯೇಳ್ತಾನೇವೇ ಒಳ್ಗೆ ಗರಡನ್ಮೇಲೆ ಕಂಚಿ, ತೊಡೇಮೇಲ್ಕೈ, ಬುಜಕ್ಬುಜ, ಲಗಾಯ್ಸ್ಕೊಂಡು ದೊಡ್ಜೋಡಿ ಕುಸ್ತಿ ಅಗೋ ಸದ್ದು ಆಗ್ತಾಅಯ್ತು! ಒಳ್ಗೆ! ನಂಬ್ಕೆಯಿಲ್ಲ ರಂಗಯ್ಯಂಗೆ. "ಇದು ಸುಳ್ಳು! ಏನೋ ಇಕ್ಮತ್ತು... ಸಾಬೀತಾಗ್ಬೇಕು ಈಗ!" ಅನ್ಕೊಂಡು ಒಂದೇ ಗುದ್ದು....ಬೀಗ ಸಲಾಕಿ ಸಮೇತ ಬೂಪ ತಿರುಗ್ಸಿ ಎಸ್ದ ಒಳಕ್ನುಗ್ದ! ಬೆದರ್ಕೊಂಡು ನಿಟ್ಟುಸ್ರು ಬುಡ್ತಾ ಕೂತ್ಕೊಂಡಿದ್ದ ನಮ್ಕಿವೀಗೆ ಕೇಳ್ಬಂತು ಒಂದೆಳ್ಡು ನಿಮಿಸ್ದಲ್ಲಿ ಒಂದ್ಕಿರ್ಲು....ರಂಗಯ್ಯಂದು "ಅಯ್ಯೋ" ಅಂತ. ಬೆಂಕಿ ಕಡ್ಡಿ ಗೀಚ್ಕೊಂಡು ಒಳಕ್ನುಗ್ಗಿದ್ವಿ. ದೀಪ ಅಚ್ಚಿದ್ವಿ. ಸುತ್ಮುತ್ತ ನೋಡಿದ್ರೇನೋ ಯಾವಾಗ್ಲೂ ಯಂಗೋ ಅಂಗೇ! ಮಲ್ಕಂಬ ಇದ್ಕಡೇನೇವೇ. ಅಕಾಡ ಲಾಲ್ಮಟ್ಟೀ ತುಂಬ ಬಾರ್ ಬಾರ್ ಅಗ್ಲ ಎಜ್ಜೆಗ್ಳು, ಅನುಮಂತಂದು ಬೀಮ್ಸೇನಂದು. ಅಲ್ಲಿ ಅವರಿಬ್ರೂ ಮಟ್ಟಿನ ಕಡೆಯೆಲ್ಲಾ ಬಿದ್ದ ಅಕ್ಕಗ್ಳು. ಆದ್ರೆ ಯಾವ ಜುಮ್ಮಾರತ್ತೂ ಇಲ್ಲದ್ದು ಒಂದು, ನಮ್ಗಲ್ಲೀಲಿ, ಗೋತ ಆಕ್ದ ಸಾದ್ನೆ ಮೂಲೇಲಿ. ಯೆಣ! ರಂಗಯ್ನೆಣ! ಬಾಯ್ತುಂಬ ರಕ್ತ! ಎದೆ ಎಲುಬೆಲ್ಲಾ ಚೂರ್ಚೂರು! ಅಂಗಾತ ಬಿದ್ದವ್ನೆ. ಅವನ್ಮೇಲೆ ಬೆಟ್ಟ ಬಿದಿದ್ರೆ ಎಂಗೋ....ಅಂಗೆ! ಇನ್ಯಾಕೇನು ಮಾಡೋದು! ಪೋಲೀಸ್ ಬಂದ್ರು ಯೇನು ಡಾಕ್ಟ್ರು ಬಂದ್ರೆ ಏನು! ಗಲ್ಲೀ ಗಲ್ಲೀನೆ! ಸಾಕ್ಷಿಗಳು ಒರ್ಗೆ. ಒಳಕ್ನುಗ್ದೋನು ಯೆಣ! ಗಲ್ಲೀಲಿ ಯಾರೂ ಇಲ್ಲ! ಮುಚ್ಕೊಂಡೋಯ್ತು. ಆದ್ರೆ ದರಣಯ್ನೋರು ತನ್ನ ಗಲ್ಲಿ ಕಲೀಫ ನಮ್ಗಲ್ಲೀಲಿ ಸತ್ತಾಂಬೊ ಸೇಡು ಇಟ್ಕೊಂಡು ....ಕೇಸಾಕ್ದ್ರು ನಮ್ಮೇಲೆಲ್ಲಾ. ಊರೆಲ್ಲಾ ಅವರ್ಕಡೆ.. ಆದ್ರೆ ಕಚೇರೀಲಿ ಕುಲಾಸೆ ನಾವೆಲ್ಲಾ. ಆದ್ರೂನೂವೆ ಮೂವತ್ತೊಂಬತ್ತಿನ ಲಾಕಾಪ್ನಲ್ಲಿದ್ವಿ ನಮ್ಗಲ್ಲಿಯೋರೂ ಕಸಾಬ್ ಮುರ್ತಿಜಾಲಿ ಗಲ್ಲಿಯವ್ರು. ಒಟ್ಮುಸ್ತತ್ತೊಂಬತ್ಜನ ಮನೆ ಮಕ್ಳೂ ಮರೀ ಬುಟ್ಟು....ಒಬ್ಬನ್ಸಾವ್ಗೆ ಮೂವತ್ತೊಂಬತ್ಜನ ಗಲ್ಗೋಗ್ತೀವ್ರೋ ಅಂಬೋ ಎದರ್ಕೇಲಿ ನಡುಗ್ತಾ ಬಿದ್ದಿದ್ವಿ ಲಾಕಪ್ನಲ್ಲಿ. ಊರೂರೇ ದರಣಯ್ಯನ ಕಾಲಿಗ್ಬಿದ್ದು ಬೇಡ್ಕೊಂಡ್ರೂವೆ ಕೇಳವಲ್ಲ, ದುಡ್ಡು

ನೀರು ಸುರಿದಂಗೆ ಸುರಿದು....ಮದರಾಸ್ ಕಡೆಯಿಂದ ಲಾಯ್ರುಗಳ್ ತರ್ಸಿ.... "ನನ್ಗಲ್ಲಿ ಫೇಕ್ ರಂಗಯ್ಯ ಸತ್ತದ್ದಕ್ಕೆ ಸಿಪ್ಪಿತ್ರ ಗಲ್ತೀನೆಲ್ಲಾ ಗಲ್ಲಿಗೆ ಸಾಗಸ್ಬಿದ್ರ ಗಂಡ್ಸಲ್ಲಾ ನಾನೂ"ಂತ ನೀರು ಸುರಿದಂಗೆ ದುಡ್ಡು ನ್ದುರ್ ನಡಸ್ದ ಮೊಕದ್ದಮೆ. ದೇವ್ರು ಏಟು ಐಸ್ವರ್ಯ ಕೊಟ್ರೂ....ಮಕ್ಕಮರ್ಯೋನು ....ತನ್ನಂಗೇ ಮಕ್ಳು ಮರಿ ಇರೊ ಗರೀಬರಮೇಲೆ ರೋಷ ಕಟ್ಬಾರ್ದು! ದೇವರ್ದಯು....ನಮುಗ್ನಾವೆ ಸಾಕ್ಷಿ....ಸೆಷನ್ ಕೋರ್ಟ್ನಲ್ಲಿ. ಕಾಲಿಗಲ್ಲಿ.... ಒರಗ್ನಾವ್ರು. ಒಕ್ಕಣ್ಣಗ್ದೋನೊಬ್ಬ!....ಯೆಣಾನ ಅಪ್ಮಾಷಿಮೊಡ್ದ ಪರಂಗಿ ಡಾಕ್ಟ್ರು....'ಸೂರ್ಯನ ಮೇಲ್ಬಿದ್ದಿದ್ರೂ ಇಂಗ್ಯ್ಯೂರ್ಯಾಕೆಲ್ಲಿ ಈಟು ಗಟ್ಟಾಗಿದ್ದ ಮನಸ್ಸನಜಾತಿ ಎಲ್ಬಿಗ್ಲು' ಂತ ಕೈಪೀತು....ಇನ್ನೇನು ಕುಲಾಸ ನಾವೆಲ್ರೂವೆ. ಅವತ್ತಿಂದ ಅದೇಸ್ವಿಶಾಜಿ ಯಿಡೀತೊ ದರಣಯ್ಯನ್ನ, ಅವನ್ಮಸೆತನಾನೆ ಮಣ್ಣು. ನೆನ್ನೆ ಯೇಳ್ದಂಗೆ ಆ ಓಣಿ, ಆ ಅರ್ದಮುರ್ದ ಸುಂಕದಕಟ್ಟೆ.... ಮೂವತ್ ನಲವತ್ ಜನ ಅಗ್ಲೂ ರಾತ್ರೀ ಎರಡೊತ್ತೂನೂವೆ ಒಟ್ಟೆ ತುಂಬ ಉಂಡು ಕೈತೊಳೀತಿದ್ದ ಆ ಮನೆ ಯೆಕ್ಡೀ ಅಲ್ದೆ, ಮೂವತ್ತೊಂಬತ್ ಜೀವ ಓದ ಆ ಮನೆ, ಈಟೆ ಬಾಕಿ.

ಶೆಟ್ರು – ಅಯ್ತೆ ಯೇಮಿ....ಮುಪ್ಪೈತ್ತೊಮ್ಮಿದಿ ಜೀವಾಲು ಪಡ್ಡಾನಾ ....ಆ ಯಿಂಟ್ಲೋ?

ಬೋರಣ್ಣ—ಹೂಂ, ಅದೇ ಕತೆ ಯೇಳೋದು ನಾನು.

ಶೆಟ್ರು—ಯೇಮಿ ಒಕಿಂಟ್ಲೊ ಮುಪ್ಪೈತ್ತೊಮ್ಮಿದಿ ಪೀನುಗುಲಾ! ದೇವುಡೇ ಗತಿ! ಗೌಡ್ಲು, ಚಪ್ಪೇದೈತೆ....ವೇಗ್ರ ಚಪ್ಪಂಡ....ಕಥ.

ಬೋರಣ್ಣ—ಮೂವತ್ತೆಂಟೆಣಗ್ಳು ಬಿದ್ದಿದ್ದು ಕೇಳಿವ್ನಿ....ಮನೆಯಿಂದೂ ರ್ಗೊಟ್ಟು ಅಮಲ್ದಾರ್ರು ಪಂಚಾಯ್ತಿಯಿಟ್ಟು ತನ್ಕೆ ಮಾಡಿ ಮಸಾಣಕ್ಕೋ ಮಣ್ಣಗೋ ಸಾಗ್ಸಿದ್ದು ನೋಡಿವ್ನಿ. ನನ್ಗೆ ಖುದ್ದಾಗಿ ತಿಳ್ದು ಓದ ಮೂವತ್ತೊಂಬತ್ನೇ ಜೀವದ್ಕತೆ ಯೇಳ್ತಿರೋದು ಈಗ. ಇಲ್ಲಿರೊ ಈ ನಮ್ಮ ಸಾಮಣ್ಣೋರು ಒಬ್ರೇ ಸಾಕ್ಸಿ....ಒಂದ್ರಾತ್ರಿ ನಮ್ಮ್ಕಣ್ಣೆದ್ರುಗೇನೇ ಒಂಜೀವ ಓದ ನನ್ಕತೇಗೆ.

ಫೇಕ್ ರಂಗಯ್ಯ ಸತ್ತು ಒಂದ್ವಾರ್ದೊಳ್ಗೆ....ನಾವೆಲ್ಲಾ ಲಾಕಪ್‌ನಲ್ಲೇ ಇದ್ವಿ .... ದರಣಯ್ಯನ ತಮ್ಮನ ಮದುವೆ ಆದ ರಾತ್ರಿ ಮನಿಕ್ಕೊಂಡವ್ರೆ ನೂರಾರ್ ಜನ. ಬೆಳಿಗ್ಗೆ ಏಳೊತ್ಗೆ ಮದವಣಿಗ-ಮದವಣಿಗಿತ್ತಿ, ಬೀಗ-ಬೀಗ್ತೀರು ಆರು ಜನ ಒಟ್ನಲ್ಲಿ ಯೆಣಗ್ಳು ಬೆಳಕರೀತ್ಲೂವೆ! ಅಪ್ನೂ, ಅಮ್ಮೂ, ತಮ್ಮೂ, ಒಸೆಂಡ್ತೀನೂ, ಅವಳಪ್ನೂ, ಅಮ್ನೂ, ಮಸಾಣಕ್ಕೆ ಸಾಗಿಸ್ತಿದ್ದಾಗ್ಲೇ ....ಶ್ರೀಕಂಟದೇವ್ರ ಪೂಜಾರಿ ಬಡ್ಕೊಂಡ! "ಮನೆ ಬುಟ್ಬುಡು ಆ ಮನೇಲಿ ಒಂದ್ರಾತ್ರಿ ಇರ್ಬ್ಯಾದ್ರು" ಂತ. ದರಣಯ್ಯನಟ ಕೇಳ್ಲಿಲ್ಲ. ಮಾರನೆ ಬೆಳಿಗ್ಗೆ ಎಂಡ್ತೀನೂ ಮಗನೂ.... ಒಬ್ನೇ ಮಗ....ವಾಂತಿಬೇದೀಲಿ ಫಡ್ಚ. ಮನೆ ಬಿಟ್ಟ ಆಮ್ಯೇಲೆ. ಅಂಗೋ ಇಂಗೋ ಮುವ್ವತ್ತೇಳ್ಜನ ಒಟ್ಟು ತಿಂದದ್ದು ಬಲಿ ಆ ಮನೇಲಿ ಇದ್ದ ಭೂತ. ಆಟೋತ್ಗೆ ದರಣಯ್ಯನೂ ಇಲ್ಲ; ಮನೆಯೋರೂ ಇಲ್ಲ. ಅವರ ದಾಯಾದಿ ಚನ್ರಾಯ್‌ಪಟ್ನ! ವಾರಸ್‌ದಾರ.... ಮನೆ ಮಾರಾಕೋಗಿ ಕೊಂಡ್ಕೊಳ್ಳೋರ್ಯಾರೂ ಯಿಲ್ದೆ ಮನೇಸ್ಕೀಳಸ್ಪೇ ಕೊಂದ. ಅವನಿಟ್ಟಿದ್ದದ್ದು ಊರು ಮುಂದಿನ ಗಂಧದ ಕಾಶಿಪತಯ್ಯನ ಛತ್ರ. ಛತ್ರದ ಕಾವಲುಗಾರ ಏಳಿದ್ಕಥೆನೆಲ್ಲಾ ನಂಬ್ಲಾರ್ದೆ ನನ್ನೂ, ಕಸಾಬ್ ಮುರ್ತಿ ಜಾಲೀನ್ನೂ ಇಲ್ಲಿರೋ ಸೇಕ್ದಾರ್ ಶಾಮಣ್ಣಾವರ್ನೂ ಕರಸ್ದ. ಓದ್ವಿ. ಮನೆ ಕತ್ತೆಲ್ಲಾ ಏಳಿದ್ವಿ. ಆದ್ರೇನು? ದರಣಯ್ಯನ ರಕ್ತ....ಅಟ! ನಂಕತೆ ನಂಬ್ಲಿಲ್ಲ! "ನಿನ್ಮನೇಗೆ ಸುಂಕದ ಕಟ್ಟೇಂತ ಯೆಸ್ರು. ರಾತ್ರಿ ತಂಗಿದ್ರೆ ಒಂಜೀವನಾದ್ರು ತಿನ್ನೊ ದೆವ್ವ ಇರೋ ಮನೇ" ಂತ ಏಟೇಳಿದ್ರೂ ಕೇಳ್ಲಿಲ್ಲ. 'ದೇವ್ರಮುಂದೆ ದೆವ್ವಾನೆ?" ಂತ ಅಂದು "ಈವತ್ತು ರಾತ್ರಿ ಆ ಮನೇಲೇ ಮನೀಗ್ಕೊಳ್ಳೋದ್ನಾನು....ನೀವು ಮರ್‌ದುಗಳಾದ್ರೆ ಮೂವ್ರೂ ಬನ್ನಿ! ನೋಡೇಬಿಡೋಣ ಈ ದೆವ್ವದ ಜೂರತ್ನ!" ಅಂತ ಶಾಲೊದ್ಕೊಂಡು ಒಂದ್ಕೈಲಿ ಒಂದಿಂಬು, ಇನ್ನೊಂದ್ಕೈಲಿ ಒಂದು ಲಾಟೆಂಗು ಇಡ್ಕೊಂಡು ಬಂದೇಬುಟ್ಟ ಬೂಪ! ಈಗ್ನಾವೇನ್ಮಾಡೋದು? ಓಡ್ಹೋಗ್ಲೀರಿತನ್ಕೊಂಡು ನಮ್ಮಟ್ಗೆ ಬಂದ್ಬುಟ್ವೋ ಊರ್ಗೆಲ್ಲಾ ಪಿರ್ಕಿಪಟ್ಟ ಚನ್ನರಾಯಪಟ್ಟಣದೋನ್ಕೈಲಿ? ಯಿಲ್ಲಾ ಈ ಉಚ್ಚನ್ ಜೊತೇಗೆ ನಾವೂ ಓದ್ವೋ....ನಮ್ಮಲ್ಲೊಬ್ರು ಯೆಣ ಅಂಬೋದು ಗುಂಡ್ಗೆ ಯೇಳ್ತದೆ. ಆದ್ರೆ ಮಾಡೋದೇನು? ಮರದ್‌ಗಳು ನಾವ್ಮೂವರು ಚನ್ರಾಯಪಟ್ನಾಕ್ನಾ ಬುಟ್ಕೊಡೋದು ನಂಬುಳ್ಳಾಪುರದ ಗೈರತ್ನ!

ಒಂಟ್ಟಿ ಅವಯ್ಯನ್ ಜೊತ್ರೇಲಿ! ಆ ಆರ್ ಮನೇಗೆ ಓಗ್ಬುಟ್ಬಾಗ್ಲೇನೇವೇಯೋ ಸಾಮಣ್ಣೋರು ಏಳಿದ್ರು. ಎಂಗೋ ಬಯ್ಯು, ನಿಗ ತಪ್ಪಿ ನಿದ್ದೆ ಮಾಡಿದ್ರೇನೇವೇ ಅಪಾಯು, ಎಂಗಾದ್ರೂವೇ ಅಲ್ಕಚ್ಕೊಂಡು ಜಾಗರ್ಣೆ ಮಾಡ್ಕೊಂಡಿದ್ಬಿಟ್ರೆ ವೈಯಿಲ್ಲದ್ದೆಪ್ಪ ನಮ್ಮನ್ನೇನ್ಮಾಡೀತು. ಒಂದಿಸ್ಪೇಟ್ ಕಟ್ಟು ಇಟ್ಕೊಂಡು.... ಪಟ್ಟ್ಯಾಟ್ಟೋ ಇಪ್ಪತ್ತೆಂಟೋ ಆಡ್ತ ರಾತ್ರಿ ಕಳೆದ್ಬಿಡೋಣ ಅಂತೇಳಿದ್ರಕ್ಸಂ ಯಾಗಿ ಇಸ್ಪೇಟಾಡ್ತಾ ಕೂತಿದ್ದೀವಿ ನಾನೂ ಮನೆಆತ್ನೂ ಜೊತೆ, ನಮ್ಮೆದ್ರು ಮುರ್ತಿಜಾಲಿ ಸಾಮಣ್ಣೋರು. ಎಲ್ಡು ಕರಿ ಕಪ್‌ಸೆಟ್ ಆಯಿತು ಅವರ್ಗ. "ಇದೇನೋ? ಕಾಸಿಲ್ಲಾಟ! ಜೋರಿಲ್ಲ"ಂತ ಮನೆಯಾತ ಜೋಬಿಂದ ನಲವತ್ತು ರೂಪಾಯೆತ್ತಿ....ನಾವು ಅತ್ತತ್ತ್ರುಪಾಯಿ ಅಂಚ್ಕೊಂಡು ತಿರ್ಗಾ ಷುರು ದುಡ್ಡಿಗಾಡಾಕೆ. ಆಡ್ತಾ ಆಡ್ತಾ ಇದ್ವಿ....ಗೆಪ್ತಿ ಐತಾ ಸಾಮಣ್ಣೋರೇ.... ಮುರ್ತಿಜಾಲಿ ತಲೆದೂಗ್ತ ಆಕಳಸ್ತ ಅವನ್ಮುಂದಿದ್ರೂಪಾಯಿಗಳ್ನ ನಮ್ಕಡೆ ತಳ್ಳಿ "ನೀವಾಡ್ಕೊಳ್ಳಿ....ಅಲ್ಲಾಹೊ! ಅಲ್ಲಾಹೊ!"ಂತಾನೆ ಬಿದ್ಕೊಂಡು ನಿದ್ದೆ. ತಿರ್ಗನೂವೆ ಸಾಬಿದುಡ್ನ ಮೂವ್ರೂ ಅಂಚ್ಕೊಂಡು ಆಟ್ಟದ್ದೀವಿ.... ಸಾಮಣ್ಣೋರು ಆಕ್ತಿದ್ದ ಒಂದೊಂದೆಲೇಗೂ ಆಕಳಸ್ತ "ರಾಗ್ಪಾ! ರಾಗ್ಪಾ!" ಂತ ಬಾಯ್ಗೆ ಚುಟ್ಕೆ ಒಪ್ಕಿಸ್ತಾ...."ದಿನವೆಲ್ಲಾ ಬಿಸುಲಿನಲ್ಲಿ ತಿರುಗ್ಡ....ನಿದ್ದೆ ....ನೀವ್ನೀವೇ ನೂರೆಂಟು ಆಡ್ಕೊಳ್ಳಿ"ಂತ ಗೊಣಗುಟ್ತ ಬಿದ್ಕೊಂಡ್ರು, ನಾನು ಕಟ್ಟು ಕಲ್ಸಿ ಕಟ್ ಮಾಡಿಸ್ಕೊಂಡು ನನ್ನೂ ಮನೆಯಾತನ್ನೂ ಅಂಚ್ತಿರೂ ನನ್ನ ಬೆನ್ಗೆ — ಭುಜಾನೂ ಸೋತ್‌ಬೀಳ್ತಿದ್ದದ್ನ .... ನನ್ತಲೆ ನಿದ್ದೇಲಿ ತೂಗೋದ್ನ....ನೋಡ್ದ ಅವಯ್ಯ....'ಇದೇನ್ರಿ ದೆವ್ವ ಇರೋ ಮನೆ ಅಂದ್ರಿ ....ನನ್ಜೊತೇಲಿ ಬಂದ ನಿಮ್ಮೂವ್ರಲ್ಲಿ ಇಬ್ರೂ ನಿದ್ದೆವೋಗಿ ನೀವೂನೂ ತಲೆ ತೂಗ್ತಿರೋದು .... ಇದೇನು ನನ್ನ ಬೆದರ್ಸೋಕೆ ಅಂತ ಮಾತಾಡ್ಕೊಂಡು ಮಾಡ್ತಿರೋ ತಮಾಷೇನಾ'? ಅಂದ. ನನಗ್ಯಾಕೋ ಕಣ್ಣು ಒಂದ್ಕಡೆ ಕಬ್ಣಕಡ್ಣಂಗೆ ಇಳೀತಿದೆ ನಿದ್ದೆ ಬಾರ. "ಅಲ್ಲಾ ಸ್ವಾಮಿ ಸತ್ತಾಗೂನೂ ನಿದ್ದೆ. ದೀಪ ಇಳಿಸಿ ಮನಿಕ್ಕೊಳ್ಳಿ ನಮ್ಮಂಗೇನೆ" ಅನ್ಕೊಂಡು ಕಾಲುಗಳ್ನ ಚಾಚ್ದೆ; ಆವಯ್ಯನ್ಮುಕ ಕಣ್ಣುಗಳ್ನ ಕತ್ಲೆಕಂಡ ಕೂಸಿನ್ಮುಕದಂತೆ ಆಗಿ....ಕೈ ನಡುಗ್ತ ನಾಲ್ಗೆ ತೊದಲ್ತ...."ಅಯ್ಯೋ....ಗೌಡ! ನಿಮ್ನಿಮ್ಮಲ್ಲಿ ಇದೇನೋ ಪಿತೂರಿ! ದೆವ್ವಾಂತೀರಾ ಮನೇಲಿ ಹತ್ತ್ರುನ್ವತ್ತು ಹೆಣಗಳ್ನ ಬಿದ್ದು ಅಂತೀರ ನಡ್ರಾತ್ರೀಲಿ

ನಂಜೊತೇಲಿ ಬಂದ್ನೀವ್ರು ಸಿದ್ರೆ ಅಂತ ನಟ್ಸಿ ಬೆದರ್ಸೋಕ್ನೋಡ್ತಿರಾ ನನ್ನ! ...............ಬೆದ್ರೋನಲ್ಲ ನಾನು!" ಅನ್ಕೊಂಡು ಒಂದು ಸಿಗರೇಟು ಜೇಬಿನಿಂದ ತೆಗೆದು ಬಾಯಾಗಿಟ್ಕೊಂಡು ಒಂದ್ಬೆಂಕೀ ಕಡ್ಡಿ ಗೀಚಿ ನನ್ನಗ್ತ ನನ್ನ್ನೋಡ್ತ .... ಕಡ್ಡೀನ ಸಿಗ್ರೇಟ್ಗೆ ಅಚ್ತಿದ್ದಾಗ್ಲೇನೇವೇ ಅಜಾರ್ದಲ್ಲಿ ಒಳ್ಳೆ ಕಂಚಿನ್ ಸರ್ಪ್ಳಿ ಕದಲಸ್ದಂಗೆ ಸದ್ದು ಆಗತ್ಲೂವೇ ನನ್ನ್ಕೈಕಾಲುಗ್ಳು ನಡುಗ್ತ "ದೇವ್ರೇ! ಶ್ರೀಕಂಟಾ! ಇದೇನ್ಬಂತೂ! ಕಾಪಾಡಪ್ಪಾ! ನನ್ತಂದೇ!" ಅಂತ್ಕಿರಲ್ಪೆ ನನ್ಬೆದರ್ಕೇಲಿ. ಅನಯ್ನೋ ತಟ್ನೆದ್ದ.......ದೀಪಾನ್ಕೈಲೆತ್ಕೊಂಡು......."ಕತ್ಲೇಲಿ ಸಾಯ್ರಿ.......ಮೂರು ಪ್ರಾಣಿಗ್ಳು ನಿದ್ದೇಲಿ ಬಿದ್ದಿರೋವಾಗ ನಾನೊಬ್ನೇ ಇಲ್ಲಿರೋದು ಆಸಿ" ಅನ್ಕೊಂಡು....ದೀಪಪ್ಸಮೇತ.......ಏಳಾಕೆ ಮರ್ತ್ನೆ; ಮನೆಮಾಡಿ ಮೇಲ್ನ ದಿವಾನ್ಖಾನೇಲಿ ಕೂತಿದ್ವಿ ನಾವು-- ಏಳ್ದಂಗೇ ದೀಪಪ್ಪಮೇತ ಕಿರುಬ ಅಟ್ಟಿದ ಕಡಬಂತೆ ಬಡಬಡಾಂತ ಮಾಡಿ ಮರಪ್ತ್ರಟ್ಲ್ ಇಳ್ದೋದ! ಕೋಣೇನೂ ಕತ್ಲೆ. ನಾನೂ ಸುಸ್ತು. ಅಂಗೇ ಬಿದ್ಗೊಂಡು, ಕಣ್ಣು ಬಿಟ್ಟಾಗ ಬೆಳಕರ್ದು ಏಟೋ ಒತ್ತಾಗಿತ್ತು. ಸಾಬಿ ಒಂದ್ಕಡೆ, ಇವಯ್ಯ ಒಂದ್ಕಡೆ ಇನ್ನೂ ಗೊರ್ಕೆ! ಇಬ್ರರ್ನೂ ಜಿಗ್ಟಿ ಎಬ್ಬಸ್ದೆ. ಒಬ್ಬರ್ನೊಬ್ರು ನೋಡಿ ನಕ್ವಿ. ಸಾಬಿ "ಅಂಗಾದ್ರೆ ಯಾರೂ ಸಾಯ್ನಿಲ್ಲ ನಾವು"? ಅಂದ. ಅಟ್ರಲ್ಲೆ ಶೇಕ್ದಾರ್ರು "ಮನೆಯಾತ ಎಲ್ಲಿ?" ಅಂದ್ರು. ನಾನು "ರಾತ್ರೀನೇ ಯಾರೊ ಸರ್ಪಾನೆ ಆಡಿಸ್ದಂಗೆ ಕೇಳ್ಬರೂತ್ಲೂ ಎದಕ್ರೋಂಡು ದೀಪಾನೂ ಎತ್ಕೊಂಡು ಓತ್ಕೊಂಡ ಆಪಯ್ಯ....ಛತ್ರಕ್ಕೇ!" ಂದೆ. ಶಾಮಣ್ನೋರು...."ಆಗಾದ್ರೆ.... ಈ ಆಸ್ತ್ರನೇಗೆ ಒಂದ್ರಾತ್ರಿಯಾದ್ರೂ "ಸುಂಕ" ಕೊಡದೆ ಕಳೆದ್ವಲ್ಲ ಅಂದದ್ಸಂತೋಷ!" ಅಂದ್ರು. ನಾವ್ಗೂನೂ ಒಪ್ಪಿ ಎದ್ದು ಇಳಿದು ಬಂದ್ವಿ ಮೆಟ್ಲ ಕೆಳಗೆ. ಕೊನೇಮೆಟ್ಲ್ನ ಮೆಟ್ಟ್ನೋ ಅಷ್ಟ್ಯೊತ್ಗೆ ಕಂಬ್ದಂಗೆ ನೆಟ್ಕೊಂಡು ಮೂರ್ಛನಾನೂ ಕಂಡ್ವಿ; ಕೈಲಿಪ್ದ....ದೀಪ ಒಂದ್ಕಡೆ ಮುರಿದ್ಬಿದ್ದು ತಾನೂ ಕುತ್ಗೆ ಮುರ್ಕೊಂಡು ಬಿದ್ಕೊಂಡಿದ್ದ ಮನೆಯಾತ್ನ ಯಜಮಾನ!

ಶೆಟ್ರು- ಅಯ್ಯೋ ಯೇಮಿ....?

ಜೋರಣ್ಣ--ಯೇಮಿಯೇನು ಶೆಟ್ರೇ....ಕೊನೇಗೂ ಆ ಮನೇಗೆ ಸುಂಕ ವಸೂಲಿ ಆಯ್ತು!!

೫

# ಶಾಮಿಯ ಸೇಡು

ಗೋಷ್ಠಿ ಗುಡಿ ಸಮೀಪಿಸ್ತಿದೆ. ಎಕ್ಕಡ ಜೋಡುಗಳ್ನ ಇದುವರಿಗೂ ಮೆಟ್ಟ್ಲ್ಗ ಮುಂದೆ ಬಿಚ್ಚಿಟ್ಟು ಗುಡಿಯೊಳಕ್ಕೆ ಕಾಲಿಡೋ ಪದ್ಧತಿ, ಈ ಹೊತ್ತ್ರಟ್ಗೇ ಈ ಪಂಚಪ್ರಾಜ್ಞರಿಗೆ ತಪ್ಪಬೇಕಾಗಿ ಬಂತು.

ಮೆಟ್ಟ್ಲ್ಗ ಸುತ್ತ ಹತ್ತಡಿವರೆಗೂ ಚೊಕ್ಕಟವಾಗಿ ಗುಡಿಸಿ, ಸಾರಿಸಿ ರಂಗೋಲೆಯಿಟ್ಟು ಕೆಮ್ಮಣ್ಣಿನ ಚೌಕಟ್ಟು ಹಾಕಿದ್ದೇ ಅಲ್ದೆ ಇನ್ನು ಮೆಟ್ಟ್ಲ್ಗಳ ಅತ್ತಿತ್ತಕಡೆ ರಂಗೋಲೆ, ಇನ್ನು ಹೊಸ್ಲೋ, ಅರಿಸಿನದಲ್ಲಿ ತೊಳೆದು ಮಧ್ಯದಲ್ಲಿ ರಂಗೋಲೆ ಪದ್ಮ!

ಶೆಟ್ರು—“ಇದೇಮಿ ಇದುವರ್ಕೂ ಪಾದುಪಡಿ ಉಂಡಿನ ಕಾಳಮ್ಮ್ಕು ಈಪದ್ದೇಮಿ ವೊಚ್ಚ ಭಾಗ್ಯಮು? ಸಾಬ್ಲು ಇಕ್ಕಡ್ನೇ ಉಂಡಂಡ. ಲೋಪ್ಲನ ಪೋಯಿ ಚೂಸಿ ಚಪ್ಪಾ!” ಎನ್ನುತ್ತಾ ಒಳಹೊಕ್ಕು ನುತ್ತಿರುಗಿ “ಬಾಧಕಂ ಲೇದು ರಾನ್ವೊಚ್ಚನು ಸಾಬ್ಲು. ಮೀರಂತಾನೂ ಅಟ್ಲ್ಗೇ. ಇಪ್ಪಿಪ್ಡೇ ಯೆಪ್ರೊ ಬೇಡೀಲು ತಾಗಿ ಪೋಯಿನ ಘಾಟು ಇಂಕ ಉಂದಿ.” ಎಲ್ಲರೂ ಒಳಹೊಕ್ಕು ನೋಡುತ್ತಲು....ಒಂದು ಹೊಸ ಅರಳೇಪೇಟೆ ರೌಕೇಕಣವನ್ನು ನಡುವಿಗೆ ಸುತ್ತಿ ಹಣೆಗೆ ಹರಿದ್ರ ಕುಂಕುಮಗಳನ್ನು ಬಳಿದು ಶಾವಂತಿಗೆ ಹುವ್ವಿನ ಹಾರವೊಂದನ್ನು ಕೊರಳಿಗೆ ಹಾಕಿ ಅಮ್ಮನನ್ನು ಅಲಂಕರಿಸಿದ್ದ ಅದ್ಭುತಾಕಾಕ್ಷಿಯನ್ನು ಕಂಡು ಬೆಚ್ಚಿಬಿದ್ದವರಲ್ಲಿ....

ಖಾನ್‌ಸಾಹೇಬ್ರು--ಆಜ್ ಕ್ಯಾ ಕಾಳಮ್ಮ ಬಡಾ ಖದರ್ಮೆ ಹೈ! ಹರ್ರೋಜ್ ಬಚ್ಚೊಂಕೆ ಮೋಫಕ್ ನಂಗಾ ಥೀಸೋ ಅಮ್ಮಾಕು ಕೊಯ್ಕೀ ಲಂಗ ಪೇಹನಾಕೆ ಫೂಲೋಂಕುಂಕುಂಭಿ ರಖೀಂ! ಆಜ್ ಕ್ಯಾ ಖುಬ್ಬಹೈ ಅಮ್ಮಾಕೆ?....ಹಬ್ಬ ಇದಾದೆ?....

ಶಾಮಣ್ಣ--ಹಬ್ಬವೇನೂ ಇಲ್ಲ ಈ ಹೊತ್ತು. ಯಾರೋ ಪಾಪ ಹೆಂಗ್ಸು ಮಗೂಗೆ ಸಿಡುಬೋ ಗಿಡುಬೋ ಎದ್ದಿರಬಹುದೂ! **ಎಂದೂ** ಮರೆತ ಮಹಾಕಾಳೀ **ಇಂದು** ಜ್ಞಾಪಕ ಬಂದು ಅಲಂಕಾರಮಾಡಿ ಹೋಗಿರಬೇಕು.

ಶೆಟ್ರು---ಕಾದಾಮರಿ! ಸಂಕಟಮು ವೊಚ್ಚೇತಪ್ಪೇ ವೆಂಕಟರಮಣಾ ಅನ್ನೇದಿ ಮೇಮಂತ. ಸಂಸಾರಮುಲೋ ಸಮಸ್ತಮೂ ಸಲೀಸ್ಗ ಸಲ್ಲುತುಂಡೇ ನೆಂಕೊ ದೇವುಡು ಯಾಲ! ಎವ್ವರು ಯಾಲ! ಮನುಷ್ಯುಡು ಜ್ವೈಮಾರಿ ಪೋಯಿನಪ್ಪುಡೇಕಾದ ದೇವುಡುರಾವಲ! ಒಳ್ಳ ಬಾಗುಂಡೇವರ್ಕು ವೈದ್ಯುಡ್ನಿ ಪಿಲಿಪಿಸ್ತಾರಾ! ಯೇಮನ್ನಾಬ್ಲ?

ಗಡFಖಾನ್- ಬರೋಬರ್ ಶೆಟ್ಟೀ ಸೀನು ಹೇಳಿದ್ದೇ ಠೀಕ್. ಆದ್ರೆ ವ್ಹ ಕ್ಯೆ ದಿಮಾಕ್ ಜೂರತ್ ಗೈರತ್ ಗರಸ್ ಇರೋ ಮರದ್ ಕ್ಯೆಲಿ ಆಗದ್ ಕೆಲ್ಸ....ಪತ್ಥರ್‌ನಲ್ಲಿ ಬನಾಯಿಸ್ದ ಸನಂಕ್ಯೆಲಿ ಅಗ್ತೈತೆ ಕ್ಯಾ? ಕ್ಯಾ ಸಾಮಿಾ ಆಪ್ ಬೋಲಿಯೆ! ಖುದಾಕೆ ಖುದರತ್ ಹೋನಾಚ್ ಹೋನ! ಅಲ್ಲಾಕೆ ಹುಕ್ಮ್ ಬಗ್ಯೆರ್, ಕುಚ್ಛ್ ನಹಿ ಕರ್‌ಸಕ್ತಾಯ್ ಆದ್ಮಿ! ತಾಹಂಭೀ ಸಾಮಿ, ಅಂಥ್ಸ ಪತ್ಥರ್‌ಕೆ ಸನಮ್ಕು ಪೂಜ ಕರ್ನೇಮೆ ಕುಚ್ ಮತ್ಲಬ್ ಹೈಕ್ಯಾ? ಇಲಂ ಹೈ ಕ್ಯಾ? ಇನ್ಸಾಫ್ ಹೈ ಕ್ಯಾ? ಇಮಾನ್ ಹೈ ಕ್ಯಾ....ಮೈತೊ ಹೈರಾನ್ ಹೂಂ! ಬಿಯಿಜ್ಜತ್ಸೆ ನಹಿ ಮೈ ಪೂಛ್ಛ್ತಾೀಕ ಸಾಮಿ, ಆಪ್ಸೆ ಸಮುಜ್ನೇಕೇಲಿಯೇ!

ಭಟ್ರು—ನೀವ್ ಕೇಳೋ ಪ್ರಶ್ನೆ ಸಾಬ್ರೆ ಹೊಸ್ದಲ್ಲ. ಸಾವಿರಾರು ಜನಗ್ಳು ಕೇಳಿದ ಪ್ರಶ್ನೆ. ಅದಕ್ಕೆ ತಕ್ಕ ಉತ್ತರ ಇದೆ! ಆದ್ರೆ ಆ ಕೇಳೋ, ಸಾವಿರ ಜನಗ್ಳ ಸಾವಿರ ಪ್ರಶ್ನೆಗಳ ಸಾವಿರ ರೂಪಗಳಿಗೆ ಸರಿಯಾಗಿ ಉತ್ತರಕ್ಕೂ ಸಾವಿರ ರೂಪಗಳು. ಆದ್ರೆ ಒಟ್ನಲ್ಲಿ ಪ್ರಶ್ನೇನ್ನೂ ಉತ್ತರಾನ್ನೂ ಒಂದೇ ರೂಪಕ್ಕೆ ಇಡಿಸಿಕೊಳ್ಳೋಕೆ ಮುಂಚೆ....ಒಂದು ಅಸ್ತಿಭಾರ ಬೇಕು....ಪ್ರಶ್ನೆ ಕೇಳೋನೂ ಉತ್ತರ ಹೇಳೋನೂ....ಆಸ್ತಿಕರಾಗಿರಬೇಕು.

ಶೆಟ್ರು--ಯೇಮಿ? ಆಸ್ತಿ ಉಂಡವಲ್ನಾ? ಅಯ್ತೆ ಪೇದವಾಳ್ಳ ಗತಿ ಯೇಮಿ? ಮುಂಚೆ ಲೆಕ್ಕಾಚಾರಮುಯ್ಯಾ ನೀದಿ! ಆಸ್ತಿ ಉಂಡೇವಾಳ್ಳು ದಾನ್ನಿ

ಅನುಭವಿಂಚೇ ಗಲಾಟ್ಲೋ ಉಂಡುಗ....ಪ್ಯಾದವಾಳ್ಳ ಗತಿಯೇಮಿ ಅಂಟಿ. ಪೇದವಾಳ್ಳಕೇ ಕದಾ ಪುಟ್ಟೇದಿ ಪರಮಾತ್ಮುಡು ಯುಗಯುಗಾನ್ಲೂ ?

ಭಟ್ರು—ಎಗರಾಡ್ಬೇಡಿ ಶೆಟ್ರೆ. ಶಾಂತಿ ತಗೊಳ್ಳಿ. ಆಸ್ತಿಕರು ಅಂದರೆ ಹಣವಂತರಲ್ಲ. 'ಆಸ್ತಿ' ಅಂದ್ರೆ ...

ಶೆಟ್ರು—ಗೊತ್ತು ಬಾಗೊತ್ತು ಎಮುಕಲು! ಅಯ್ತೆ ಎಮುಕಲು ಎಕ್ಕಡಯ್ಯ ಒಚ್ಚೆ ಇಕ್ಕಡ ?

ಶಾಮಣ್ಣ—ಎಮುಕೆಗಳಲ್ರೀ! ಭಟ್ರು ಹೇಳೋದ್ನ ಕೇಳಿ, ಕಿವಿಗೊಟ್ಟು ಕೇಳಿ.

ಭಟ್ರು—'ಆಸ್ತಿ' ಅಂದ್ರೆ ದೇವ್ರೂಂತ ಒಂದು ಪ್ರಾಣಿಯಿಧೆ ಅಂತ ನಂಬೋವ್ರೆಲ್ಲಾ ಆಸ್ತಿಕರು! "ನನಗೆ ದುಡ್ಡು ಕಾಸು ಗದ್ದೆ ತೋಟ ಬೇಕಾದಷ್ಟಿವೆ! ನನಗ್ಯಾರಿಂದ್ಲೂ ಏನೂ ಆಗಬೇಕಾದ್ದಿಲ್ಲಾ"ಂತ ಉಬ್ಬಿ! ಐಹಿಕ ನಶ್ವರ ..." ಈ ಹೊತ್ತಿದ್ದು, ನಾಳೆ ಐಶ್ವರ್ಯವನ್ನ ಬಿಟ್ಟು ನಾನೋ ನನ್ನ ಬಿಟ್ಟು ಐಶ್ವರ್ಯಾನೋ ಹೋಗ್ಬೇಕಾಗುತ್ತೆ" ಎಂಬೋದ್ನ ತಿಳಿದೇನೂ ...ತನ್ನೂ ತನ್ಸುಖಕ್ಕೆ ಒದಗಿರೊ ಐಶ್ವರ್ಯಾನ್ನೂ ಸೃಷ್ಟಿಸಿ ಸುಡೋ ದೇವ್ರು ಒಬ್ನಿದಾನೆ ಅಂಬೋದ್ನ ನಂಬ್ದೇನೂ ಇರೋವ್ರೆಲ್ಲಾ ನಾಸ್ತಿಕರು. ಈಗ "ಅಲ್ಲಾ" ನಲ್ಲಿ ನಂಬಿಕೆಯಿರೋ ಸಾಬರು, ಪರಮಾತ್ಮನಲ್ಲಿ ನಂಬಿರೋ ನಾವು, ಯೆಲ್ಲೂ ಆಸ್ತಿಕರು. ನಾಸ್ತಿಕರ ಮಾತು ನಮಗ್ಯಾಕೆ.

ಸಾಬ್ರು—ಮಾಫ್ ಕರೀಯೆ ನಾವು ಎಲ್ರೂ ಒಂದೇ ಅಲ್ಲ. ನಮ್ಮ ಅಲ್ಲಾಗೂ....ನಿಮ್ಮ ರಾಮು, ಕಿಷ್ಣಾಗೇನೂ ಫರಕ್ ಇದ್ದಾದೆ. ನಮ್ಮ ಅಲ್ಲಾಗೆ ಜಿಸಂ ಇಲ್ಲ. ವೈಯ್ಯಿ ಕಣ್ಣು ಮೂಗು ಇಲ್ಲ, ನಿಮ್ರಾಮು ಕಿಷ್ನಗ್ಗೆ ನಾಲ್ಕುಕಾಲು ಎಂಟುತಲೆ ಇಪ್ಪತ್ತು ಕೈ .. .. ... ಅಯ್ಸೆ ಜೇಡೇವಾಲೂಂಕು ಡರ್‍ರಾನೇಕೇಲಿಯೆ.... ... ಬೊಮ್ಮ್ಕೊಂಕೆ ಹಿಕ್ಮತ್ ..

ಭಟ್ರು—ಅನ್ಯಾಯ ಸಾಬ್ರೆ! ನೀವ್ಹೇಳೋದು ಶುದ್ಧ ಅನ್ಯಾಯ. ನಿಮ್ಹೇವರ ಹಾಗೇನೇವೇ ನಮ್ಮ ದೇವ್ರೂವೇ. ಕೈಯಿಲ್ಲ ಕಣ್ಣಿಲ ಕಾಲಿಲ್ಲ ..

ಶೆಟ್ರು....ಅದೆಟ್ಲಯ್ಯಾ? ಸಾಬುಲ್ಲು ಚೆಪ್ಪೇದಿ ಸರಿಕದಾ. ಬ್ರಹ್ಮಣಿಕಿ ನಾಲುಗು ತಲಕಾಯಿಲು ಲೇವಾ? ವಿಷ್ಣುಡಿಕಿ ನಾಲುಗು ಚೆಯ್ಯಿಲು ಕಾದಾ? ರಾವಣುಡಿಕಿ ಪದಿ....ಉಂಡ್ಲಿ; ವಾಡು ರಾಕ್ಷಸುಡು ..... ....ಕುಮಾರುನಿಕಿ.... ಸಾಬ್ಲೂ ಮೀ ಸಹವಾಸನುಲೋ ಮನದೇವತುಲಪ್ಪೈನ ಮರ್ಯಾದನೇ ಪೋತುಂದಿ....ಕೊಮಾರಸ್ವಾಮಿ ದೇವುಡುಗಾಂಕಿ ಆರು ತಲಕಾಯಿ.. ವದನ ಮುಲು ಕಾದಾ? ಇದಂತ ಮಮ್ಮಲ್ನಿ ಬೆದರಿಚ್ಚೇದಾನ್ಕೇ ಕಾದಾ.... ಏರ್ಪಾಡಯ್ಯಿಂದಿ?

ಭಟ್ರು—ಅದೇ ಸೂಕ್ಷ್ಮ ಶೆಟ್ರೇ ನಮ್ಗೂ ನಿಕ್ಷ್ಮ ಏರ್ಪಾದೊಂದ್ರಲ್ಲ... ಅದೇ ಅಸ್ತಿಭಾರ ನಮ್ಮ ಮುವ್ವತ್ತಮೂರುಕೋಟಿ ದೇವತೆಗಳಲ್ಲಿ ಒಬ್ಬೊಬ್ಬ ರಿಗೂ ಮೈಯ್ಯಿ ಕಣ್ಣು ಕಾಲು ಈ ಬಾಬ್ತುಗಳಲ್ಲೂ ಸಿಹುಬಿಗೆ ಕಾಳಿ, ದುಡ್ಡಿಗೆ ಲಕ್ಷ್ಮಿ, ಪ್ಯಾಸು ಮಾಡೋಕೆ ಸರಸ್ವತಿ, ಭಾವಿ ನೀರು ಬತ್ತಿದ್ರೆ ಗಂಗಾಧರ, ಹೀಗೆ ಡಿಪಾರ್ಟ್‌ಮೆಂಟ್ ಡ್ಯೂಟಿ ಹೇರ್ಸಿದ್ದೆಲ್ಲಾ ಏರ್ಪಾಟು ಆದ್ರೂನೂವೆ... ಈ ಮನುಷ್ಯ ರೂಪ ಧರಿಸಿರೂ ದೇವತೆಗಳಿಗೆ ಮನುಷ್ಯನೇ ಹುಟ್ಟೋಕೆ ಮುಂಚೆ ನೀವು ಹೇಳಿದ ವಿಕಾರ ಆಕಾರಗ್ಳು ಇಲ್ಲ. ದೊಡ್ಡ ದೊಡ್ಡ ಪರ್ವತ ಗಳ್ನ ಸೃಷ್ಟಿಸಿದ ದೇವ್ರು ಮೈಲುದ್ದ ಕೈಕಾಲು ಇಟ್ಕೊಂಡ್ನ ಧಾಂಡಿಗನೂ ಅಲ್ಲ... ಚೀನಿ ಚಿಗಟಾನ ಸೃಷ್ಟಿಸಿದ ಅದೇ ದೇವ್ರು ಕ್ರಿಮಿನಾನೂ ಅಲ್ಲ. ಮನುಷ್ಯನಿಗೆ ಆಸೆಯುಂಟ್ಮೋದು ತಜ್ಜನ್ಮ. ತಜ್ಜನ್ಮವೇನೂ-ಅವನ ಜನ್ಮಕ್ಕೇ ಕಾರಣ! ಈ ಆಶೇನ ತೀರಿಸಿದ ಪರಮಾತ್ಮನ್ನ ತನ್ನಿಷ್ಟದ ಪ್ರಕಾರ ತನ್ಮನಸ್ನಲ್ಲಿ ತಾನೆ ನಿರೂಪಿಸ್ಕೊಳ್ತಾನೆ. ವ್ಯಕ್ತಿ ತನಗೆ ಬಣ್ಣ ಬಳಿಯೋಕೋ ಕಲ್ಲು ಕೆತ್ತೋಕೋ ಬಾಯಿಂದ ಹೇಳೋಕೋ ಹಾಡೋಕೋ ತಿಳಿದ ಪ್ರಕಾರ ಒಂದು ಚಿತ್ರ ಒಂದು ಪ್ರತಿಮೆ ಒಂದು ಭಾಷಣ ಒಂದು ಗೀತೆ ಇವುಗಳಿಂದ ಚಿತ್ರಿಸ್ಕೊಳ್ತಾನೆ ತನ್ನ ಧ್ಯೇಯದ ಜ್ಞಾಪಕಕ್ಕೆ. ಸಾಬ್ರು ಅಲ್ಲಾಗೆ ರೂಪವಿಲ್ಲಾಂತ ಎಷ್ಟು ವಾದಿಸಿದ್ರೂ ...ಕಣ್ಮುಚ್ಕೊಂಡು ಅಲ್ಲಾನ ಅವರು ಧ್ಯಾನಿಸಿದ್ರೆ ಮುಖವೋರೆ ಯಿಲ್ದಿದ್ರೂ....ಒಂದು ದೊಡ್ಡ ಬೆಳಕಿನ ಹಾಗಾದ್ರೂ ಕಂಡೇ ಬರುತ್ತೆ ಅವರು ಮುಚ್ಚಿದ ಕಣ್ಣಿಗೆ. ಆದರೆ ಮಕ್ಕಳು ಬೆದರಿದ್ರೆ 'ಅಪ್ಪಾ!' 'ಅಮ್ಮಾ!'ಂತ ತಂದೆತಾಯಿಗ್ಳ ಹತ್ತಿರ ಓಡಿಬಂದ ಹಾಗಾಗ್ಲೀ ತನ್ಮಗೂಂತ ಆಡಿಸ್ತಿದ್ದ ಗೊಂಬೆ

ಮುರಿದ್ರೆ 'ಅಮ್ಮಾ! ಮುರಿದ ಗೊಂಬೇನ ಸರಿಮಾಡ್ಕೊಡು' ಅಂತ ತಾಯಿ ಹತ್ತ್ರ ಓಡ್ಬಂದ ಹಾಗೆ.... ಈ ಹೊತ್ತು ಮಗು ಬಿದ್ದುಬಿದ್ದು ನರಳೋದನ್ನ ನೋಡಿ.... 'ಅಮ್ಮಾ! ಮಹಾಕಾಳಿ!.... ನನಗಿರೋದು ಒಂದು ಕುಪ್ಪಸದ ಖಣ ನನ್ನ ಕೈಲಾಗೋ ಅಲಂಕಾರ ಇಷ್ಟೇ. ಇಷ್ಟರಲ್ಲೇ ಸಂತೋಷಪಟ್ಟು ನನ್ನ ಮಗೂನ ಸರಿಮಾಡ್ಕೊಡೂ'ಂತ ಯಾವ್ಹೆಂಗ್ಸೊ ಈ ಹೊತ್ತಿನಲಂಕಾರ ಅಮ್ಮನಿಗೆ ಮಾಡಿ ಹೋದದ್ರಲ್ಲಿ ಅರ್ಥವಿಲ್ಲ, ನ್ಯಾಯವಿಲ್ಲ, ನಾಚ್ಕೆ.... ಆದ್ರೂ **ನಂಬಿಕೆ** ಯಿದೆ. **ಆಶೆ** ಇದೆ. **ಮಮತೆ** ಇದೆ. ನೀವು ಫ್ಯಾಸಿನೊ ಅಲ್ವಾಗೆ ಕೈಕಾಲಿಲ್ದಿದ್ರೂನೂವೆ.... ಆತ ರಹಂ ಅಂತೀರಲ್ಲ, ಆ ಕಸಿಕರ ಮಮತೆ, ಆತ ಇಟ್ಕೆರೊ ನಿಮಗೆ ಕೈಕಾಲಿವೆ, ಅಲ್ವೇ? ಕಣ್ಣುಗಳು ಇವೇ ಅಲ್ವೇ? ಹೀಗೇ ನಾಚ್ಕೇ ತನಗಿಷ್ಟವಿದ್ದ ಪದಾರ್ಥವನ್ನ ತನ್ನಿಷ್ಟದ ಪ್ರಕಾರೇನೇ ರಚಿಸ್ಕೊಳ್ಳೊ ಅಭ್ಯಾಸ ಮನುಷ್ಯನಿಗೆ ತತ್ಸ್ವಭಾವ. ಆದ್ದರಿಂದ ಪ್ರತಿಮೆಗಳು ಬರೀಕಲ್ಲು ಮಣ್ಣಾದ್ರೂನೂವೆ ಅವುಗಳಿಗಿರೋ ಯೋಗ್ಯತೆ ಅವುಗಳ್ನ ಪೂಜೆಮಾಡೊ ಭಕ್ತನ ಯೋಗ್ಯತೇನೇ ಅಷ್ಟೆ.... ಬರೀ ಕಲ್ಲಿಗೆ ನಮಗಿಲ್ಲದ ಬುದ್ಧೀನೂ, ಶಕ್ತೀನೂ, ಏನೂ ಇಲ್ಲ.

ಶೆಟ್ರು——ಅಂತ್ಯೆ ಯೋಚ್ಸಿ. ದೇವ್ರುಂಟ್ಲಾಂತ.... ನೇವ್ತ್ರೇ ನೇ ಜೇಗ್ನ್ಯಾಸಿಂ ದೇವ್ರುಂಡ್ಲಾ, ಹುಂ ಬೋರಣ್ಣಾ ಅಂತಾ ಎಸಿ ಊರ್ಕುಂಡಾವೇ?

ಬೋರಣ್ಣ——ಅಲ್ಲ ನಟ್ರು ಗುಡಿ ಮನಸರೇ ಕಟ್ಟಿದ್ದು. ಯಿಗ್ರಾನೂ ಕಲ್ಲು ಕುಟಿಗ ಕಡೆದದ್ದು. ಆದ್ರೂನೂವೆ.... ಕಡೆದ ಕಲ್ಗೊಂಬೇನ, ದೇವ್ರೂಂತ ಅತ್ತ್ಯಸಗಳ ನಂಬ್ಕೆ ಮೇಲೆ ಇರೋದು ಜೀವಾಳ!

ಶಾಮಣ್ಣ——ಗುಡೀಂತ ಕಟ್ಟಿ ಒಂದು ಪ್ರತಿಮೇನ ಸ್ಥಾಪ್ಸಿ ನಾಪಿರಜನ ಸಾವಿರಾರು ವರ್ಷಗಳಿಂದ ಆ ಪ್ರತಿಮೇನ ಪೂಜೆಮಾಡ್ತ ಬರ್ತಿರೋದ್ರ ಸರಿ ತಪ್ಪು ವಾದಿಸ್ತಿದೀರಲ್ವಾ ನೀವು. ಚಿಕ್ಕದೊಂದು ಚಾಮುಂಡೇಶ್ವರಿ ವಿಗ್ರಹ ಅತ್ಕಡೆ ಯಿತ್ಕಡೆ ಬೆಳ್ಳೀಲಿ ಮಾಡಿದ ಗಣೇಶ ಪಾರ್ವತಿ ಈಶ್ವರ ರಾಮಕೃಷ್ಣರು ಕೆಳಗೆ ಲಕ್ಷ್ಮೀ ಸರಸ್ವತಿ ಇವೆಲ್ಲಕ್ಕೂ ಮೇಲೆ ಇಂಗ್ಲಿಷ್ ಮೋಜ ಹಾಕ್ಕೊಂಡು ಬಣ್ಣದ ಕಾಲ್ಚೀಲ ಬಣ್ಣದ ಷರಟು ಬಣ್ಣದ ಅರ್ಧ ಷರಾಯಿ ತಲೆ ಕ್ರಾಪು

ಬಾಯಲ್ಲಿ ಒಂದು ಸಿಗರೇಟು ಇಟ್ಕಂಡಿರೊ, ಒಬ್ಬ ಈ ಕಾಲದ ಮನುಷ್ಯನ ತಸ್ವೀರ್ನ ನಾನು ಹೇಳಿದ ಪ್ರತಿಮೆಗಳ ಮೇಲೆ ತಗಲುಹಾಕಿ ಹಗಲೂ ರಾತ್ರಿ ಅಲ್ಲೆ ಒಂದೊಂದು ಪುಣ್ಯ ದಿವಸಾನೂ ಮೊದಲು ಆ ತಸ್ಬೀರಿಗೆ ಪೂಜೆ ಮಂಗ ಳಾರತಿಯಾಗಿ ಆ ಮೇಲೆನೇವೇ ಕೆಳಗಿರೋ ದೇವರುಗಳ್ಗೆ ಮರ್ಯಾದೆ ಈಗಿನವರ್ಗೂ ಆಗ್ತಿದೆ; ನಮ್ಕಂಟ್ರಲ್ಲಿ ಒಬ್ಬರ ಮನೇಲಿ, ಅಂದ್ರೆ ನಂಬೀರ ನೀವುಗ್ಳು ?

ಶೆಟ್ರು—ಯೇಮಿ ? ದೇವುಂಡ್ಲು ಪ್ರತಿಮೆ ಪೆಟ್ಟಿ ದಾನ್ಲ್ಲೊಪ್ಪೈನ ಮೋಜಾ ವೇಸ್ಕೋನಿ ಕ್ರಾಪು ಚೇಸ್ಕೋಸಿನ ಮನುಷ್ಯನಿ ತಸ್ಬೀರಿನಿ ಪೂಜ ಚೇಸೇದಾ ? ಅದೀನೂ ಬ್ರಾಹ್ಮಣುಲು ಇಂಟ್ಲೋನಾ ! ಪಾತಕಮಯ್ಯಾ, ಮಹಾಪಾತಕಮು ; ಕುಲಕುಲಮೇ ಕಾಲಿಪೋವನು. ಇಂಟಾಡಿದಿ ತಾಲಿ ತಾಲೀನೆ ಪೀಕಿಪೋವುನು.

ಶಾಮಣ್ಣ—ಅದೇ ನಂಬ್ಕೆ ಅನ್ನೋದು. ಈ ಮನೆ ಇಂಟಾಡಿದೀ ಅಂದ್ರಲ್ಲಾ ಆಕೆಗೆ ಇಷ್ಟು ದೇವರುಗಳು ಇದ್ರೂವೆ ತಾಲಿ ಕಿತ್ಕೊಳ್ಳೋಗ್ತಿದ್ದ ಅಪಾಯಾನ ತಪ್ಸಿ ಮಾಂಗಲ್ಯ ರಕ್ಷಿಸಿದ ಅವನು, ಅವನ ರೂಪ ವೇಷ ಹೇಗಿದ್ರೂ ನೂವೆ ಸತ್ತ ಸತ್ಯವಾನನ ಪ್ರಾಣಗಳು ತಿರುಗಿ ಕೊಟ್ಟ ಯಮನ ರೂಪ ಎಷ್ಟು ಘೋರವಾಗಿದ್ರೂ ಆತ್ನೇ ತನ್ನ ಸರ್ವಸ್ವಾಂತ ಸಾವಿತ್ರಿ ನಂಬಿದಹಾಗೆ.... ಈಕೇನೂ ಆ ತಸ್ವೀರ್ನಲ್ಲಿ ನಂಬ್ಕೆ ಯಿಟ್ಟಿರೋದು ಆಶ್ಚರ್ಯವೇ ? ತಪ್ಪೆ ? ಯೇನ್ಸಾಬ್ರೆ.

ಖಾನ್‌ಸಾಬ್- ಯೇತೊ ಮೊಹ್ಬಬತ್‌ಕೀ ಬಾತ್ ಹೈ....ಉಲ್ಫತ್ ಕೀ....ಭರವಸ್ ಕೀ ಬಾತ್ ಹೈ....ಹೇಳಿ ಹೇಳಿ....ಕಾನಿ ಹೇಳಿ !

ಶೆಟ್ರು ಕಥನಾ ?.... ಚಪ್ಪಂಡ.... ಯಮಧರ್ಮುಡು ಎಕ್ಕಡ ! ಮೀರು ಚೆಪ್ಪೆ ಕ್ರಾಪ್ ಚೇಸ್ಕೋನಿ ಮೋಜವೇಸ್ಕೊನಿ ಸಿಗರೇಟ್ ಕಾಲ್ಚೇ ಚಿನ್ನೋಡು ತಸ್ಬೀರು ಎಕ್ಕಡ....ವಾಣಿಕಿ ಪೂಜಾಂಟೆ ಯೇಮಿ....ನಾಕೇಮಿ ಮಂದಟ್ಲಾ ಲೇದು ! ಅಯ್ತೇನೂ ಚಪ್ಪಂಡ ! ಕಥ. ಒಕ್ಕೇಮಾಟ ! ನೆನ್ನ ಮೊನ್ನ ಐಕಟ್ಟು ರಕ್ತಂ ಕಾರ್ತ ದಯ್ಯಾಲು ಈ ಕಥಲೋ ಒಚ್ಚೇದ್ಯೆತೆ .... ನಾಕೇಮಿ ಭಯಂ ಲೇದು....ಅಯ್ತೇನೂ ನೆನ್ನ ರೆಯ್ಯಿ ಒಕ್ಕ ಕಲಗಂಟೆನಿ ! ಗೊಂತ

ಕೋಸ್ಕೋನಿ ರಕ್ತಮುಕಾರ್ತ್ತು ಗೆಜ್ಜಲು ಕಟ್ಟಿನ ಕಾಳ್ಳೋ ಕುಲುಕ್ತಾ ನಾ ಬಾಡ ಗಿಲ್ಲಿಲೊ ಕುಲ್ಕಿ ಆಡ್ತಿ ಸಾಬ್ಲು ಚಪ್ಪಿನ ಗೂಬಪ್ಪಿನ ನಿಲ್ಕ್ವಕ್ಕನಿ....ಮುದ್ದು ಕದ್ದೊ....ಅನಿ ಪಲ್ಲವಿ ಪಾಡ್ತಾ ಒಕಗೋಸಾಯಿಪೆನಕ "ಸಿಧಿಸಿಧಿ" ಅನಿ ತಾಳಂ ವೇಸ್ತ ಮಾಯಿಂಟಿಕೊಚ್ಚಿ....ನಡು ರಾತ್ರಿಲೊ 'ಓಟ್ಲೊ ಪುಟ್ಟಿನನ್ನು ಅಂಗಡಿನಿಂಚಿ ಪೆಂತ್ಯಾಲು ದೋಸ ಕೊತ್ತಿಂ ಚಟ್ನಿ ಇಪ್ಪೇ ತೆಪ್ಪಿಚ್ಚಿಸ್ತಾವ, ಲೇಕಾಪ್ರೋತೆ ನೀ ಗೊಂತ ಪಿಸುಕುತ್ತಾ?' ಅನಿ ನನ್ನು ದಬಾಯಿಂಚಿನ ಐಕಟ್ಟು ಕಲಲೊ ಚೂಸಿ....ಕಿರ್ಲಿ ಪಾಯಿಂಬಾಡಿದಿ, ಪಾಪಿಲ್ಲೋದು.... ಬಳ್ಳಾರಿ ಬೋಯಿಲು ಅಂದ್ರೂ ಒಚ್ಚಿನಪಿಟ್ಟ್ಕೆ ನಾಕಿ ಗಾಬರಿ ಪ್ರೋಯಿ.... ಇಂಕಮೀಟ ಗುಡ್ಲೊ ದಯ್ಯಾಲು ಕಥ ಪಿನ್ರಾದು ಅನಿ ಮನಸು ಗಟ್ಟೀಸ್ಕೊಂಟ್ನಿ. ನೇನೇಮಿ ಪಿರಿಕಿಕಾದು. ಅಯ್ತೇನೂ ನಡುರಾತ್ರಿಲೊ, ರಕ್ತಮು ಪಾರ್ತ ಮುದ್ದು ಕದ್ದೊ ಅನಿ ಗೂಬಲ್ಪಿನ ಎಕ್ಕೊನಿ ಪೆನಕೊಗ ಪ್ಯಿರಾಗಿ ಸಿಧಿಸಿಧೀನಿ ತಾಳಮು ವೇಸ್ತ ನಿದ್ರಲೊ ಒಸ್ತು ಒಕ್ಕಾಡಿದಿ....ಯಿನಪ್ಪು ಗುಂಡಿಗ ಉಂಡಿನ ಮೊಗವಾಡುಕೂ....? ಶಾಮಣ್ಣಗಾರು ಈ ಪೂ ಕಥಲ್ಲೋ ದಯ್ಯಾಲು ಗಿಯ್ಯಾಲು ಯೇಮನ... ?

ಶಾಮಣ್ಣ -ಬೆಪ್ರನೇಡಿ ರೆಪ್ರ. ಬೆಪ್ಪ ಪರಾಟಿ ಯೇನೂ ಇಲ್ಲ ನನ್ನಹೇಲಿ ಕೇಳಿ.

## ಶಾಮಣ್ಣನ ಕಥೆ

ಬಹಳ ದಿನದ ಮಾತಲ್ಲ. ಈಗೀಗ ಐದು ವರ್ಷದ ಮಾತು ಕ್ಯಾತ್ಸಂದ್ರ ಅಂತ ಕೇಳಿರಬಹುದು. ತುಮಕೂರು ಡಿಸ್ಟ್ರಿಕ್ಟು. ಅಲ್ಲಿ ಕೊಟ್ಟೆ ನನ್ನ ತಂಗೀನ. ಆಸ್ತಿ ಪಾಸ್ತಿ ತಕ್ಕಮಟ್ಟಿಗೆ ಇದೆ ಅಳಿಯನಿಗೆ. ಒಬ್ಬನೇ ಮಗ ತಂದೆಯಿಲ್ಲ; ತಾಯಿ ಹೆಸರಲ್ಲೇ ತಕ್ಕಮಟ್ಟಿಗೆ ನಗದು ಇಟ್ಟಿಟ್ಟು ಹೋದ ತಂದೆ, ಅಳಿಯನ ಚಿಕ್ಕಂದ್ನಲ್ಲಿ. ಸಂಬಂಧ ಒದಗಿದ್ದು ಬಲು ಅದೃಷ್ಟ ನನಗೂ ನನ್ತಂಗೀಗೂ. ಅಳಿಯ ಪ್ಪಿಮುಖ ಬಣ್ಣ ಗುಣ ಅಚ್ಚುಕಟ್ಟು....ಅಲ್ದೆ ಮಗು ಹಾಗೆ ಸ್ವಭಾವ. ಇನ್ನು ತಾಯಿಾನೋ ಹೆಣ್ಣು ಹೆತ್ತೋಳಲ್ಲ....ಸೊಸೆ ಅಂದ್ರೆ ಪ್ರಾಣ .... ಮದುವೆ ಯಿರಲಿ, ಪ್ರಸ್ತವಿರಲಿ, ಅದಲ್ಲ ಕಥೆ. ತಂಗಿ ಆರು ತಿಂಗಳ

ಗರ್ಭಿಣಿ. ತವರು ಮನೆಗೆ ಪ್ರಸವಕ್ಕೆ ಕರೆತರೋಕೆ ಹೋಗಿದ್ವಿ ನಾನೂ ನಮ್ಮಮ್ಮೂ ಕ್ಯಾತ್ಸಂದ್ರಕ್ಕೆ. ಇಳಿದದಿನ ಸುಬ್ರಾಯನಷಷ್ಠಿ. ಮೊದಲೇ ಹೇಳಿದ್ದೇನೆ ಮನೆಮಠ ಹೊಲ ಗದ್ದೆ ತೋಟ ಮಗನಿಗಿದ್ರೂನೂವೆ....ನನ್ನ ತಂಗಿ ಅತ್ತೇಗೆ ನಗದು ಇಟ್ಕೊಳ್ಳೋಗಿದ್ದ ಗಂಡಾಂತ.... ದೇವ್ರುದಿಂದ್ರು, ವ್ರತ-ನಿಯಮ ಯಾತ್ರೆ ಇತ್ಯಾದಿಗ್ಳಲ್ಲಿ ನಂಬ್ಕೆ ಆ ಚಿನ್ನದಂಥ ಹೆಂಗಸಿಗೆ. "ಮಗನಿಗೆ ಬೇಕಾದಷ್ಟಿದೆ! ನಾನು ಇಡಬೇಕಾದ್ದೇನೂ ಇಲ್ಲ! ಇವರಿಟ್ಟ ದ್ರವ್ಯಾನ ಸದುಪಯೋಗಮಾಡಿ.... ಇವರ್ನ ಸೇರೋ ಬಗೆ ಹುಡುಕ್ತೇನೆ" ಅಂಬೊ ಅಭಿಪ್ರಾಯಾನ ಮುಂದಿಟ್ಕೊಂಡು ಕಾಶಿವಿಶ್ವೇಶ್ವರನ ದರ್ಶನವಾಯಿತು, ಕಂಚಿ ಕಾಮಾಕ್ಷಿ ದರ್ಶನವಾಯಿತು! ರಾಮೇಶ್ವರದಲ್ಲಿ ರಾಮಪ್ರತಿಷ್ಠಿಸಿದ ಸಹಸ್ರ ಲಿಂಗಕ್ಕೂ ಸಹಸ್ರ ರೂಪಾಯಿಗಳ ಅರ್ಚನೆ ಆಯಿತು. ಅಲ್ದೆ ಮಥುರ, ದ್ವಾರಕಿ, ಹರಿದ್ವಾರ, ಗಯ ಈ ಬಾಬ್ತುಗಳೂ ಆಯ್ತು. ಇನ್ನಿದೆಲ್ಲಾ ಹೊತ್ತಿ ಚಿನ್ನದಲ್ಲಿ ನಾಗಸರ್ಪ ಮಾಡಿ ಬ್ರಾಹ್ಮಣನಿಗೆ ದಾನ ಮಾಡಿದ್ದಾಯಿತು. ನಾನು ಹೇಳಿದಹಾಗೆ, ನಾನೂ ನಮ್ಮಮ್ಮ ನಮ್ಮ ತಂಗೀನ ಪ್ರಸವಕ್ಕೆ ಕರೆತರೋಕೆ ಹೋದದ್ದು. ಏತನ್ಮಧ್ಯೆ ಇನ್ನೊಂದು ಉಪಕಥೆ. ನನ್ನ ಹೆಸರು ಶಾಮಣ್ಣ. ಮೆಟ್ರಿಕ್‌ಲೇಷನ್‌ವರೆಗೂ ಹೈಸ್ಕೂಲ್ನಲ್ಲಿ ಓದುತ್ತಿದ್ದ ನಾನು ತಂದೆ ಕಣ್ಣು ಮುಚ್ಕೊಳ್ತಲೇ ಸ್ಕೂಲುಬಿಟ್ಟು ನನ್ನ ಜೀವನೋಪಾಯಾನ ನೋಡ್ಕೊಳ್ಳೋಕೆ ಹಳ್ಳಿಗೆ ಹಿಂತಿರುಗಿ ಬಂದೆ. ಸ್ಕೂಲಿನಲ್ಲಿದ್ದಾಗ ನನ್ನ ಹೆಸರು ಟಿ. ಎ. ಶಾಮಣ್ಣ. ಟಿ. ತಾವರೆಕೆರೆ, ಎ. ನಮ್ಮ ತಂದೆ ಹೆಸ್ರು ಅಸ್ವತ್ಥ. ಸ್ಕೂಲಿನಲ್ಲಿ ನನ್ನ ಪಕ್ಕದಲ್ಲಿ ಇನ್ನೊಬ್ಬ ಶಾಮಣ್ಣ. ಅವನೂ ಟಿ. ನೆ ತರೀಕೆರೆ, ಮಲ್ನಾಡುಕಡೆ. ಭಾಗ್ಯವಂತರ ಹುಡುಗ; ಕಾಫಿ ಎಸ್ಟೇಟು ಇತ್ಯಾದಿ. ಬಿ.ಎ. ನೂ ಪ್ಯಾಸ್ ಮಾಡಿ ಅಗ್ರಿಕಲ್ಚರ್ ಅಂತಾರಲ್ಲ ವ್ಯವಸಾಯದ ಇಲಾಖೆ, ಆ ಬಾಬತ್‌ನಲ್ಲಿ ಕೆಲ್ಸ ಕಲ್ತ್ಕೊಂಡು ತಿರುಗಿ ಹಳ್ಳಿಗೆ ಒಂದು ಧಾನ್ಯ ಸಸ್ಯಾದಿಗ್ಳು ಕಾಫಿ ಉತ್ಪತ್ತಿ ಇತ್ಯಾದಿಗ್ಳು ತನಗೂ ತನ್ನ ಸುತ್ತಮುತ್ತ ಇರುವವರಿಗೂ ಒಂದಕ್ಕೆರಡು ಉತ್ಪತ್ತಿ ಮಾಡಿಸ್ತಾ ಇದಾನೆ. ಈಗ ತಪಲ್‌ವರಿಗೂ ಸ್ಕೂಲಿನಲ್ಲಿ ಇಬ್ರೂ ಶಾಮಿ, ಇಬ್ರೂ ಹತ್ತತ್ರಲೇ ಕೂತ್ಕೊಳ್ಳೋದು, ಅಲ್ದೆ ಭಾಗ್ಯವಂತನ ಬಡಾಯಿ ಅವನಿಗಿಲ್ಲ. ಒಡತನದ ಬೆದರಿಕೆ ನನಗಿಲ್ಲ ಹೀಗೋಹಾಗೋ ನಮ್ಮಿಬ್ರಿಗೂ ಅದು ಹೇಳೋಕೆ ಅಸಾಧ್ಯ.... ಅನ್ಯೋನ್ಯ, ಸ್ನೇಹ ಅಂತ

ಅಂತೇವೇ ಹೊತ್ತರ್ಗ ಇವೆಲ್ಲಾನ್ನೂ ಮೀರಿಸಿದ ಒಂದು ಬಾಂಧವ್ಯ ನಮಗೆ. ಕಥೆ ಯಾಕೆ ಬೆಳಸಬೇಕು. ಮೆಟ್ರಿಕ್‌ಲೇಷರ್ಗ ಮುಂಚೇನೇವೇ ಮನೇ ಬಂದು ಸೇರಿದೆ ನಾನು. ಶಾಮಣ್ಣನೊ ಹಾಸನದಿಂದ ಬೆಂಗಳೂರು, ಬೆಂಗಳೂರಿಂದ ಮದರಾಸು. ಅಲ್ಲಿ ಬಿ.ಎ. ಆಗುತ್ಲೂ ಯಥಾಸ್ಥಾನಂ ಪುನಃ ಬೆಂಗಳೂರು, ಹೆಬ್ಬಾಳ. ಆಮೇಲೆ ತನ್ನೂರು ತರೀಕೆರೆ. ಅವನಾಯಿತು ಅವನ ಕಾಫಿ ಎಸ್ಟೇಟು ಆಯಿತು. ಆದ್ರೂ ನೂವೇ ನೋಡಿ! ಅನ್ಯೋನ್ಯ ಸ್ನೇಹ ಇವುಗಳ್ನ ಮೀರಿಸಿಟ್ಟೇ ಬಾಂಧವ್ಯ, ನಮ್ಮ ಬಾಲ್ಯಸ್ನೇಹಕ್ಕೆ ಸೂಚನೆ ಹೇಳ್ತೀನಿ. ಆಗಿಂದ ತಿಂಗಳು ತಿಂಗಳೂ ಬಿಡದೆ ಕಾಗದಗಳು ಬದಲಾಯಿಸ್ಕೊತ್ತಾ ಈಗಿನವರಿಗೂ ಬೆಳೆಸ್ತಿದ್ದೇವೆ. ಆದ್ರೆ ಈಗ ಹೇಳೋ ಕಥೆ ಈಗಿಂದೀಚಿನದು. ಕ್ಯಾತ್ಸಂದ್ರದಲ್ಲಿ ನಾನೂ ನಮ್ಮಮ್ಮ ಆರು ತಿಂಗಳು ಗರ್ಭಿಣಿಯಾದ ನನ್ನ ತಂಗೀನ ಪ್ರಸವಕ್ಕೆ ಕರೆತರೋಕೆ ಹೋದದ್ದು ಸುಬ್ರಾಯನ ಷಷ್ಠೀ ದಿನ, ಅಂತಲ್ಲೇ ಪ್ರಾರಂಭಿಸಿದ್ದು ನನ್ನ ಕಥೆ?

ತಕ್ಕಮಟ್ಟಿಗೆ ದೊಡ್ಡ ಹಳ್ಳಿ ಕ್ಯಾತ್ಸಂದ್ರ. ಬೀಗ್ರುಮನೆ ಊರಿಗೆಲ್ಲಾ ದೊಡ್ಡದು. ಅವತ್ತಿನ ಖರ್ಚು.... ಪೂಜೆ ಪುನಸ್ಕಾರ ಗೋದಾನ ಭೂರಿ ಸಂತರ್ಪಣೆ ಅಲ್ದೆ ಈ ಗಾಂಧಿ ಮಹಾತ್ಮರ ಗಲಾಟೇಲಿ ಹೊಲಗೇರಿ ಮಾದಿಗ ಕೇರಿ ಇಲ್ಲೆಲ್ಲಾ ಊಟ, ಅಲ್ದೆ ಊರ ಗುಡೀಲಿ ಅಭಿಷೇಕ, ಸಹಸ್ರಾರ್ಚನೆ, ಏತನ್ಮಧ್ಯೆ ಮನೇ ಪುರೋಹಿತನಿಗೆ ಸುಬ್ರಾಯನ ಸ್ವರ್ಣಪ್ರತಿಮೆ ದಾನ.... ಅಲ್ದೆ ಮುತ್ತೈದೆಯರಿಗೆ ಕಿಂಗೆ ಕಣ ದಾನಗ್ಳು, ನಮ್ಮ ತಾಯಿಗೆ ನಾಕ್ಮಡಿ, ನನಗೆ ಜರ್ತಾರಿ ಅಂಚು ಧೋತ್ರ, ಶಲ್ಲೆ.... ಯಾಕೆ ಹೇಳ್ತೀನಿ ಅಂದ್ರೆ ಎ ಸಹಸ್ರ ಸ್ಪೀತಗಳಾದ್ರೂ ಪಟ್ಟಿರ್ಬೇಕು ಆ ಮುದುಕಿ ಕೈಯಿಂದ ಖರ್ಚು. ನಾನು ಹೇಳೋ ಕಥೆ ದಿನವೆಲ್ಲಾ ಆದ ಗಲಾಟೆ ವರ್ಣನೆ ಅಲ್ಲಾ; ಆ ದಿನ ರಾತ್ರಿ ಒಂಭತ್ತು ಘಂಟೆ ಸರಾಸರಿ ಪ್ರಾರಂಭವಾದದ್ದು.... ನಿಮ್ನಮ್ಮಲ್ಲಿ ಪೂಜೆಯ ತಪ್ಪು ನೆಪ್ಪು ಮಾಡದ ಮಧ್ಯ ನಾನು ನುಗ್ಗಿ ಹೇಳಿದ ತಪ್ಪೀಗಿನ ಪೂಜೆಯ ಕಥೆಯ ಪ್ರಕರಣ. ಹೇಳಿದ ಹಾಗೆ ಒಂಭತ್ತು ಘಂಟೆ ಸರಾಸರಿ. ಗಂಡಸರಿಗೆಲ್ಲಾ ಊಟ ಆಗ್ಹೋಗಿತ್ತು. ಮುಂದಿನ ಕೋಣೇಲಿ.... ಎಲೆಯೆಲ್ಲಾ ಎತ್ತಿಹಾಕಿ ಗೋಮ ಹಚ್ಚಿ ಕೈ ತೊಳಕೊಂಡು ಆಗ್ತಾನೆ ಹೆಂಗಸ್ರು.... ಪರಿಚಾರಕರಿಲ್ಲ, ಮನೆ, ಮನೇವ್ರು, ನೆಂಟ್ರು, ನೆರೆಹೊರೇವ್ರು.... ಹೆಂಗಸ್ರೇ ಕೆಲ್ಸ; ಹೇಳಿದ

ಹಾಗೆ, ಗಂಡಸ್ಫೂಟದ ಗಲಾಟೆಯೆಲ್ಲಾ ತೀರಿ ಆಗ್ತಾನೆ ತಮ್ಮ ಊಟಗಳ್ಗೆ ಏರ್ಪಾಡು ಹಿಂದಿನ ಅಂಗಳದಲ್ಲಿ ಮಾಡ್ತೀರೋ ಗಜಗುಜಿ. ಮಾವ ಅಂದ್ರೆ ನಾನು, ಅಳಿಯ, ಆತನ ಸೋದರಮಾವ, ಇನ್ನಿಬ್ಬರು ಮೂವರು ನೆಂಟ್ರು, ಜಗಲಿಗೆ ಬಂದು ಕೂತು ತಾಂಬೂಲ ಅಗೀತಿದ್ದೇವೆ. ಕಗ್ಗತ್ತ್ಲೆ. ಗುಡಿ ಶಿಖರದ ಮೇಲಿನ ಲಾಂದ್ರದ ಬೆಳಕು ಇದ್ದ ಕತ್ತ್ಲೇನ ಇನ್ನೂ ಕಪ್ಪಾಗಿ ತಿದ್ದ್ತಿದೆ. ಜಗಲಿ ಗೋಡೆ ಗೂಡ್ನಲ್ಲಿ ಇಟ್ಟಿದ್ದ ಒಂದು ಹಣತೇ ಬೆಳಕಿನಲ್ಲೇ ನಮ್ಮ ನಮ್ಮ ಸಂಭಾಷಣೆ. ಮೊದಲು ಮಾತು ಎತ್ತಿದ್ದು ಪುರೋಹಿತರು; ಸುಬ್ರಾಯ್ನ ಷಷ್ಠಿ ವ್ರತಾ ಹೇಳಿ ಬಾಗಿನದನಮೇತ ಹೊರಟುಹೋದ ಕಥೆ. ಆಮೇಲೆ ಮಾತಿನ ಮೇಲೆ ಮಾತು ಬಂದು, ಕಂಡ ಹಾವೂ, ಕಾಣದ ಹಾವೂ, ಕಡಿದ ಹಾವೂ, ಕಡಿಯದ ಹಾವೂ, ಮಲಯಾಳೀ ಮಂತ್ರ, ಬೇವಿನ ಸೊಪ್ಪು ಬೀಸಿ ವಿಷ ಇಳಿಸೋದು, ಹೀಗೆಲ್ಲ ಹಾವುಗಳ ಕಥೇಗೆ ಪ್ರಾರಂಭ. ಏತನ್ಮಧ್ಯೆ ಒಬ್ಬ ಹುಡುಗ, ಬಲು ಚಟುವಟಿಕೆ, ದೂರದ ಸಂಬಂಧ ಅಳಿಯನಿಗೆ; ಹೇಳಿದ— ಅವರ ಇಸ್ಕೂಲ್‌ನಲ್ಲಿ ಎರಡು ಮೂರು ದಿನಕ್ಕೆ ಹಿಂದೆ ಕ್ಲಾಸುಗ್ಳು ಜರಿಗ್ತಿರೊ ವಾಗ್ಲೇನೇವೇ ಒಂದು ನಾಗರ ಹಾವು ಕಂಡ್ಬಂದು ಹುಡುಗರೆಲ್ಲ ಚೆದರಿ, ಎದುರು ಬಂಗ್ಲೇಲಿದ್ದ ಮಿಷನರಿ ದೊರೆ ಬಂದೂಕ್ ಸಮೇತ ಬಂದು ಆ ಹಾವ್ನ ಕೊಂದ ಅನ್ನುತ್ಲಾವೆ.... 'ಶಾಂತಂ ಪಾಪಂ! ಶಾಂತಂ ಪಾಪಂ! ಕೃಷ್ಣ ಕೃಷ್ಣ!' ಅಂದ ನಮ್ಮ ಅಳಿಯನ ಸೋದರಮಾವ. 'ಯಾಕ್ರೀ' ಅಂದದ್ದಕ್ಕೆ.... 'ಹಾವಾಗ್ಲೀ ಹಸುಮಗುವಾಗ್ಲೀ.... ಹಿಂಸೇ ಹಿಂಸೇನೆ' ಅಂದ ಆತ. ನನಗೆ ಶಾಮಿ ಜ್ಞಾಪಕ ಬಂತು. ಪಕಪಕನೆ ನಕ್ಕೆ. 'ಇದೇನ್ನಗೂ'ಂತ ಕೇಳಿದ್ದಕ್ಕೆ ನಾನ್ಹೇಳಿದ್ದು: "ಹಿಂಸೆ ಅಂದ್ರಲ್ಲಾ, ಹಾವಿರಬೇಕಾದ್ದು ಅವರ ಹುತ್ತದಲ್ಲಿ. ತಿಳುವಳಿಕೆ ಅದಕ್ಕಿಲ್ಲದ ಪಕ್ಷಕ್ಕೆ ಹುತ್ತ ಬಿಟ್ಟು ಹೊರಕ್ಬಂದು ನತ್ತ್ಮಸೂರು ಹುಡುಗ್ರು ಓಡಾಡೋ ಸ್ಕೂಲಿಗೆ ಬಂದು ವಿಷದ ಹಲ್ಲು ಇಟ್ಕೊಂಡು ಹೆದರ್ಸೋ ಪ್ರಾಣೀನ ಕೊಲ್ಲೋದು ಹಿಂಸೆ ಅಲ್ಲ. ಆದ್ರೆ ಅವರ ಜನ್ಮಕ್ಕೂ ಮೋಕ್ಷ. ಹುಡುಗರ ಹೆದರಿಕೇಗೂ ಮೋಕ್ಷ ಪಾಪ ಎಲ್ಲೀದೂ?" ಅಂದದ್ದಲ್ದೆ "ಆ ಮಿಷನರಿ ದೊರೆಯೇನೊ ಬಂದೂಕಿನಿಂದ ನೋವಿಲ್ದೆ ಒಂದೇ ಗುಂಡಿನಲ್ಲಿ ಕೊಂದ ಆ ಹಾವ್ನ! ನಮ್ಮ ಶಾಮಿಯಾಗಾನ ಇದ್ದಿದ್ದಿದ್ರೆ ಆ ಹಾವ್ನ ಹೇಗಾದ್ರು ಜೀವಸಮೇತ ಹಿಡ್ದು ನರನರ ಕಿತ್ತು ಕೊನೇಗೂ ಕೊಲ್ಲೋಕೆ ಹಿಂಜರಿದು

ಕೊಳ್ತಿದ್ದ. ಮುಖ್ಯ ನಮ್ಮ ಶಾಮೀಗೆ ನಾಗರಹಾವಿನ ಮೇಲಿರೋ ಸೇಡು ಈ ಮಿಷನೆರಿ ಸಾಬ್‌ಗೆ ಇಲ್ಲದಿದ್ದದ್ದು ಆ ಹಾವಿನ ಪುಣ್ಯ"ಂತ ಹೇಳಿ ನಮ್ಮ ಶಾಮಿ ಚರಿತ್ರೆ ಹೇಳೋಕೆ ಪ್ರಾರಂಭಿಸ್ತಿದ್ದೆ. ಅಷ್ಟರಲ್ಲೆ ಆಳಿಯ ದಿನವೆಲ್ಲಾ ಓಡಾಡಿ ದಣಿದು ಹೊಟ್ಟೆ ತುಂಬಾನು ತಿಂದು.... ಆಕಳಿಸೋ ಬಾಯಿಗೆ "ರಾಘವಾ! ರಾಘವಾ!"ಂತ ಚಿಟಿಕೆಗಳು ಒಪ್ಪಿಸ್ತ.... ನೀವೆಲ್ಲ ಮಾತಾಡ್ಕೊಳ್ತಿರಿ, ನನಗೆ ನಿದ್ದೆ ಬರುತ್ತೆ, ಹೋಗಿ ಬಿದ್ಕೋತೇನೆ" ಅನ್ಕೊಂಡು ಒಳಕ್ಕೆ ಹೋದ. ನಾನೂ ಹಾವಿನ್ಮೇಲೆ ಸೇಡಿಟ್ಟಿರೋ ನಮ್ಮ ಶಾಮಿ ಯಾರು, ಏನು, ಎತ್ತ, ಅಂಬೋದ್ನೆಲ್ಲಾ ವಿವರಿಸ್ತಿಧೇನೆ. ನಿಶ್ಶಬ್ದವಾಗಿ ತಿರಿಗಿ ತೆರಿಯ್ತು ಅಳಿಯ ಆಗ್ತಾನೆ ಮುಚ್ಕೊಂಡ್ಹೋಗಿದ್ದ ಬೀದೀ ಬಾಗಿಲು! ತಿರುಗ್ತೇನೆ! ನನ್ನ ತಂಗಿ ಬಾಯ್ಬಿಡ್ದೇನೆ ಬಲಗೈಯ್ಯಿಂದ ಬಾ, ಬಾಂತ ಸೌಂಜ್ಞೆ ಮಾಡ್ತಿದಾಳೆ. ಅರ್ಥವಾಗದೆ ಜಗಲೀಲಿದ್ದೋರಿಗೆ "ಬಂದೆ"ಂತ ಹೇಳಿ ಜಗಲಿ ಇಳಿದು ತೆಗೆದ ಬಾಗಿಲು ಹಾಸಿ ಒಳಗೆ ಹೋದ್ನೋ ಇಲ್ವೋ.... ನನ್ತಂಗಿ ಕುತ್ಗೇನ ಎರಡು ತೋಳುಗಳಿಂದ ಬಿಗಿದು, ಮುಖಾನ ನನ್ನೆದೇಮೇಲಿಟ್ಟು "ಅಣ್ಣಾ! ಬಂತಲ್ಲಾ ಕೇಡು ನನ್ನ ತಾಳೀಗೆ ಇನ್ನೇನ್ಗತಿ!" ಅನ್ನುತ್ತ ತನ್ನ ಭಾರಾನೆಲ್ಲಾ ನನ್ನಮೇಲೆ ಹಾಕಿ ಗೋಳಾಡ್ತಿದಾಳೆ! ಒಂದೂ ಅರ್ಥವಾಗಲಿಲ್ಲ ನನಗೆ ಪ್ಸೈಗೇನಾದ್ರು ಬಂದ್ರೆ.... ತಾಳೀಗಪಾಯ ಎಲ್ಲೀದು? ಒಂದೂ ತೋಚಲಿಲ್ಲ. ಮೆಲ್ಲಗೆ ಅವಳ ತಲೆ ಸವರ್ತ "ಇದೇನ್ಕಂಚು".... ಅನ್ನತ್ಲ "ಮೆಲ್ಲಗಣ್ಣ ಮೆಲ್ಲಗೆ ಮಾತಾಡು ನಿನ್ನ ಧ್ವನಿಗಾನ ಎತ್ತಿದ್ರ್ಯೋ.... ನಾನು ಕೆಟ್ಟಹಾಗೆ!" ಎಂದು ಅಂದು ನನ್ನ ಎಳಕೊಂಡುಹೋಗಿ.... ಮೊದ್ಲೇ ಹೇಳಿದ್ನಲ್ಲಾ ಮುಂದಿ

ನ್ಕೋಣೆ ಗಂಡಸ್ರು ಊಟಮಾಡಿದ್ದು.... ಅಂತ ಅದ್ರಪಕ್ಕದಲ್ಲಿ ಒಂದು ಕೋಣೆ: ಅಲ್ಲಿಯೇ ನನ್ನ ತಂಗಿ ಮೆಲ್ಲಗೆ ಎಳಕೊಂಡು ಹೋಗಿ ಹೊಸಲಿಂದ ಹತ್ತೆಂಜ್ಜೆ ಈಚೇನೆ ನಿಲ್ಲಿಸಿ "ಅಲ್ನೋಡಣ್ಣಾ! ಇನ್ನೇನ್ಗತಿ! ನನ್ನ ಗತಿ! ನನ್ನ ತಾಳಿ ಗತಿ! ನನ್ನ ಹೊಟ್ಟೇಲಿರೊ ಮಗುವಿನ ಗತಿ!" ಅಂತ ಬಿಕ್ಕಿ ಬಿಕ್ಕಿ ಬರುವ ಅಳುವನ್ನು ನುಂಗುತ್ತಾ ಎರಡು ತೋಳಿಂದ್ಲೂ ನನ್ನ ಕುತ್ಗೇನ ಬಿಮ್ಮನೆ ಬಿಗಿದು ನನ್ಮೇಲೆ ಬಿದ್ಕೊಂಡ ನನ್ತಂಗೀನ ಎಡಗೈಯಿಂದ ಹಿಡಕೊಂಡು ತಿರುಗ್ತೇನೆ ಅವಳು ತೋರಿಸಿದಕಡೆ ನೋಡೋಕೆ, ನನಗೀಗ್ಲೂ ಆಶ್ಚರ್ಯ! ನಾನು ಆಗ ನೋಡಿದ್ನ ನೋಡುತ್ಲೂವೆ ನನ್ನ ಮೇಲೆ ಒರಕ್ಕೊಂಡಿದ್ದ ತಂಗಿ

ಸಮೇತ ನಾನು ಹೇಗೆ ಮೂರ್ಛೆ ಬೀಳ್ದೆ ನೆಟ್ಕೊಂಡು ನಿಂತಿದ್ದೇಂಬೋದು ಈಗ಼್ಲೂ ನನಗಾಶ್ಚರ್ಯ! ಕೋಣೆ ಕತ್ಲೇಂತ್ಲೇ ಹೇಳ್ಬೇಕು! ಇರೋ ಬೆಳ್ಕು ಪುಟ್ಟದೊಂದು ನೀರಾಂಜನ. ಎದರು ಗೋಡೇಲಿ ಚಿನ್ನದ ಚಿಕ್ಕದೊಂದು ಚಾಮುಂಡಿ ಅಕ್ಕಪಕ್ಕದಲ್ಲಿ ರಾಮ, ಕೃಷ್ಣ, ಪಾರ್ವತಿ ಪರಮೇಶ್ವರರು, ಕೆಳಗೆ ಸರಸ್ವತಿ ಲಕ್ಷ್ಮಿ, ಎಲ್ಲಾ ಬೆಳ್ಳಿ! ಫಳಫಳಾಂತ ಪ್ರಜ್ವಲಿಸ್ತಿವೆ! ಇವುಗಳ ಕಡೆ ಅರ್ಧ ಕತ್ಲೇಲಿ ಬಿದ್ಕೊಂಡಿದಾನೆ, ಅಳಿಯ. ನಿದ್ದೆ, ಸ್ವಲ್ಪ ಗೊರಕೆ. ಇವನ್ತ ಲೇಗೂ ಪ್ರತಿಮೆಗಳು ಹಾಕಿರೋ ಗೋಡೆಗೂ ಒಂದಡಿ ಕೂಡ ಇಲ್ಲ. ಆ ಒಂದಡೀಲೆಯಾದ್ರು ಎತ್ಕೊಂಡು ಹೆಡೇನ ಒಂದ್ಸರೀ ನಾಗ್ರಹಾವು ಹಿಂದಿರೊ ಗೋಡೇಗೂ ಮುಂದಿರೊ ಅಳಿಯನ ಮುಖಕ್ಕೂ ಆಡಿಸ್ತಿದೆ. ಅದ್ರ ಕಣ್ಣುಗ್ಳು ಆ ಒಂದು ನೀರಾಂಜನದ ಬೆಳಕ್ನಲ್ಲಿ.... ಚಾಮುಂಡಿ ಚಿನ್ನದ ಪ್ರತಿಮೇಗಿನ್ನ ಜಾಸ್ತಿ ಜ್ವಾಲೆ ಕಾರ್ತಿದೆ! ನನ್ಗತಿಯೇನು! ಹೆಣದ್ಹಾಗೆ ನನ್ಮೇಲೆ ಒರಗ್ಕೊಂಡಿರೋ ನನ್ನ ತಂಗಿ ಗತಿಯೇನು! ಹೆಡೆ ತೂಗ್ತ ಇರೋ ಆ ನಾಗರಹಾವ್ಗೆ ಮುಖ ಬಿಚ್ಕೊಂಡು ಒಂದೂ ತಿಳಿಯದೆ ಮಗುವಿನ ಹಾಗೆ ನಿದ್ದೆ ಮಾಡ್ತಿದ್ದ ಅಳಿಯನ ಗತಿಯೇನು? ಯಾವ ದೇವರ್ನ ಕೂಗೋದು? ದೇವ್ರುಗ್ಳೆಲ್ಲಾ ಚಿನ್ನದಲ್ಲೂ ಬೆಳ್ಳೀಲೂ ಅಲ್ಲೇ ಇದಾರೆ.... ಆ ಹಾವಿನ ಪಕ್ಕದಲ್ಲೇ! ಜಗಲೀಲೋ ಮಾತುಗಳ ಗಲಾಟೆ. ಹಿಂದಿನ ಹಜಾರ ಹೆಂಗಸ್ರ ಗಜಗುಜಿ. ಇಲ್ಲೋ ನಾನು ನನ್ತಂಗಿ. ನಮ್ಮೆದ್ರುಗೆ ಕೋಣೇಲಿ ಹೆಡೆಬೀಸ್ತಿರೋ ನಾಗ ಸರ್ಪ, ಅಳಿಯ. ಒಂದೂ ತೋಚ್ದೆ ನನ್ನ ಬೆದರ್ಕೇಲಿ.... ಆ ಹಾಳು ನೋಟಾನೂ ನೋಡ್ಲಾರ್ದೆ ಕಣ್ಣು ಮುಚ್ಕೊಂಡು ನನ್ನ ತಂಗೀನ ತಬ್ಕೊಂಡೆ. ಎಷ್ಟು ನಿಮಿಷಗಳು, ಎಷ್ಟು ಘಳಿಗೆಗಳು, ಇಲ್ಲ ಎಷ್ಟು ವರುಷಗಳು ಹಾಗೆ ನಿಂತಿದ್ದೆವೋ ನಾನೂ ನನ್ನ ತಂಗೀನೂ, ಈಗ಼್ಲೂ ನನಗ್ಗೊತ್ತಿಲ್ಲ. ಒಂದು ಜಿಲ್ಲು ಅಲ್ದೆ "ಶಾಮಾ" ಶಾಮಾಂತ ನನ್ಹೆಸ್ರು ಬೀದಿಯಿಂದ ಯಾರ್ದೋ ಕೂಗು ಕೇಳ್ಸಿಂದು ಬಿಚ್ತೇನೆ ನನ್ಕಣ್ಣು, ಅದೇ ಸೀನು ಎದ್ರುಗೆ! ಅದೇ ಕೋಣೆ. ಅದೇ ನೀರಾಂಜನದ ಬೆಳಕ್ನಲ್ಲಿ. ಅದೇ ಚಿನ್ನ ಬೆಳ್ಳಿ ಪ್ರತಿಮೆಗಳು, ಅದೇ ಹೆಡೆಯೆತ್ತಿದ ಸರ್ಪ, ಅದೇ ಅಳಿಯನ್ಮುಖ. ಆದ್ರೊಂದು ವ್ಯತ್ಯಾಸ. ಬೀದಿಯಿಂದ ಬೈಸ್ಕಲ್ ಘಂಟೆ ಬಾರಿಸ್ತ "ಶಾಮಾ ಶಾಮಾಂತ ಕಿರುಲ್ತಿರೋ ಧ್ವನಿ ಸಮ್ಮಾಮಾದು".... ಅಂತ ತಿಳಿಯುತ್ಲೂವೆ.... ಈ ಎದ್ರು ಕೋಣೇನೇ

ಮತ್ತೂ ಕೆಂಚೂನ ಅರ್ಧ ಎಳ್ಕೊಂಡು ಅರ್ಧ ಎತ್ಕೊಂಡು ಬೀದಿ ಬಾಕಿಲು ಹೊಸಲು ನೇರಿ "ಶಾಮಿಾ! ಶಾಮಿಾ! ಇಲ್ಲೇ ಇಧೇನೆ ಮೆಲ್ಲಗೆ ಬಾ! ಬೇಗ ಬಾ!" ಅಂದ ಜ್ಞಾಪಕ. ಅವನು ಈ ಕತ್ಲೇಲಿ ಒಂದು ಎಲೆಕ್ಟ್ರಿಕ್ ಟಾರ್ಚಿನ ಬೆಳಕನ್ನು ಬಾಕಲಿಗೆ ತಿರುಗಿಸಿ ನನ್ನ ಮುಖದಲ್ಲಿ ಕಂಡ ಹೆದರಿಕೇನೂ ನನ್ನ ಮೇಲೆ ಮೂರ್ಛೆ ಬಿದ್ದು ಒರಗಿದ್ದ ನನ್ನ ತಂಗೀನ್ನೂ ನೋಡಿ ನೆಟ್ಟಗೆ ಬಂದು "ಏನು ಶಾಮಿಾ ಇದು?" ಅಂದದ್ದು ಜ್ಞಾಪಕ. "ನಿಶ್ಶಬ್ದವಾಗಿ ಒಳಗ್ಬಾ" ಅಂದು ಅವನ ಕೈಹಿಡ್ಕೊಂಡು ಒಳಗೆ ಕರೆದೆ. ಕೋಣೇಲಿ ಇರೋ ಸ್ಥಿತಿ ತೋರಿಸಿ....'ನಮ್ಮಳಿಯ ಶಾಮಿ!' ಅನ್ನುತ್ಲೂವೆ.... ಅದೇನು ಗಂಡ್ಸ! ಒಂದು ಕ್ಷಣದಲ್ಲಿ ತಿಳುಕೊಂಡ ಸನ್ನಿವೇಶದ ಜೀವಾಳಾನ. ಟಾರ್ಚ್ನ ಆರಿಸ್ದ. ಹಿಂದಿನ ಬಾಕಿಲು ತೆಗೆದು "ನಿನ್ನ ತಂಗೀನ ಹೆಂಗಸ್ರು ಹತ್ತಿರ ಒಪ್ಸಿ.... ಹೇಳೀ ಬಿಡು. 'ಹಾವು'! ನೀವೇನಾದ್ರು ಗಲಾಟೆ ಮಾಡ್ದೆ ಇದ್ರೋ ಅಪಾಯವೇನೂ ಇಲ್ಲ. ನಿಮ್ಮಗಳ ಕಿರ್ಲಾಟ ಕೇಳಿ ಹಾವು ರೇಗಿತೋ ಗಂಡಸ ರಿಗೆ ಹಾನಿ, ಅಂಬೋದ್ನ ಹೇಳ್ಬಿಟ್ಟು ಬೇಗ ಬಾ!" ಅಂದ. ಇವನು ಹೇಳ್ದ್ನ ಬೇಗ್ತಿಗೆ ಹೇಳಿ ತಂಗೀನೊಪ್ಸಿ ಬಂದೆ. 'ಹಿಂದಿನ ಬಾಕಿಲು ಹಾಕು' ಅಂದ ಶಾಮಿ. 'ಬೀದೀ ಬಾಕಿಲು ಹಾಕು' ಅಂದ ಎರಡೂಬಿಗಿದೆ. ನಾವು ಊಟ ಮಾಡಿ ಗೋಡೇಗೇ ವಾಲಿಸಿದ ಮಣೆಗ್ಳಲ್ಲಿ ಒಂದನ್ನೆತ್ಕೊಂಡು, ರಬ್ಬರ್ ಬೂಡ್ಸುಹಾಕ್ಕೊಂಡಿದ್ದದ್ದು,—.ನಿಶ್ಶಬ್ದವಾಗಿ ಕೋಣೇನ ಸಮಿಾಪ್ಸಿ—ಈಗ ನನ್ನೆದ್ರುಗೆ ಆಗ್ತ ಇರೋ ಹಾಗೆ ಇದೇ ಥಟ್ಟನೆ ಟಾರ್ಚ್ನ ಸ್ವಿಚ್ ಮಾಡಿ ಮಣೇನ ಗುರಾಣಿ ಹಾಗೆ ಮುಂದಕ್ಕೆ ಹಿಡುಕೊಂಡು ಟಾರ್ಚಿನ ಬೆಳಕ್ನ ಹಾವಿನ ಮುಖಕ್ಕೆ ಹಿಡೀತ "ಹುಸ್ ಹುಶ್" ಅನ್ನುತ್ಲೂವೆ ಶಾಮಿ, ನಿಂತಿದಾನೆ ಇವನು, ಸರಾಸರಿ ಇವನೆತ್ರ ಎದ್ದಾಗಿತ್ತು ಆ ಹಾವು! "ಫಟ್" ಅಂತ ಶಾಮಿಾ ಕಡೆ ಹೊಡೆದ ಜ್ಞಾಪಕ. ಆ ಪೆಟ್ಟು ಶಾಮಿಾ ಕೈಲಿದ್ದ ಮಣೆಗೆ ತಗುಲಿದ್ದು ಜ್ಞಾಪಕ! ಮತ್ತಿರುಗಿ ಹೊಡೆಯೋಕೆ ಆ ಹಾವು ಹೆಡೇನ ಹಿಂದಕ್ಕೆ ಬೀಸೋವಾಗ ತಾಕಿದ ಗೋಡೆ ಬಿಡೋಷ್ಟ್ರಲ್ಲೇ ಒಂದೇ ಹಾರು ಶಾಮಿಾ ಹಾರಿ ಆ ಗೋಡೆ ಸಮೇತ ಆ ಹಾವ್ನ ಮಣೆಯಿಂದ ಅದುಮ್ಕೊಂಡ. ಅರ್ಧಡಿ ಕೂಡ ಇಲ್ಲ ಮಣೇ ಮೇಲೆ ಹಾವಿನ ಹೆಡೆ. ಮಿಕ್ಕದ್ದೆಲ್ಲಾ ಅಮುಕ್ಕೊಂಡಿಧಾನೆ ಗೋಡೇಗೆ ಮಣೆಯಿಂದ ಶಾಮಿ. ಕೆಳಗೆ ಬಾಕಿ ಒದ್ದಾಡ್ತಿದೆ ಹಾವಿನ ಬಾಲ.

ಮಲಗಿದ್ದ ಅಳಿಯನ್ನ ಒಂದೇ ಒದೆ ಒದ್ದು ಎಬ್ಸಿ, ತಲೆ ತಿರುಗಿಸ್ದ, "ಶಾಮಿ, ಎಳಕೊಂಡು ಹೋಗು ಇವನ್ನ! ಹೊರಗ್ಬಿಟ್ಬಿಟ್ಬು ಮನೇಲಿರೋ ದೀಪಾನೆಲ್ಲಾ ತಂದ್ಬಿಡು, ಅಳಿಯಂದಿರ ಪ್ರಾಣಗಳ ಮೇಲೆ ಆಸೆ ಬಿದ್ದಿರೋ ಈ ಹಾವ್ಜಾತೀನ ಜೀವ ಸಹಿತ ಬಿಡಬಾರ್ದು. ಒಂದು ಗಳು ಒಂದ್ಹತ್ತಡಿ ನೂಲುಹಗ್ಗ" ಅಂದ. ಬೆಚ್ಬಿದ್ದು ಎದ್ದ ಅಳಿಯ ಸುತ್ತಮುತ್ತ ನೋಡೋಕೆ ಮುಂಚೆ ಹೊರಗೆಳ ಕೊಂಡು ಹೋಗಿ ಜೀವ ಸಹಿತ ನನ್ನ ತಂಗೀ ಕಾಲಿಗೆ ಕೆಡವಿ, ಶಾಮಿ ಹೇಳಿದ ಹಾಗೆ ಎರಡು ಸೀಮೆಯೆಣ್ಣೆ ದೀಪಗ್ಳು, ನೂಲು ಹಗ್ಗ, ಒಂದು ಗಳು ತಂದಿಟ್ಟೆ. ಇನ್ನು ಆ ಹಾವ್ನ .... ಸುಮಾರು ಆರಡಿಯಾದ್ರೂ .... ಇದ್ದಿರ ಬೇಕು. ಗೋಡೇಗೆ ಮಣೇ ಸಮೇತ ಅದುಮಿಕೊಂಡಿದ್ದಾನೆ ಶಾಮಿ. ಈ ಗಳೂನ ಮಣೇಗೆ ಸರಿಯಾಗಿ ಮಧ್ಯದಲ್ಲಿಟ್ಟು ಆ ಹಾವ್ನೂ ಮಣೇನೂ ಗಳೂನ ಗೋಡೆಗೆ ಕಾಲಿಂದ ಅದುಮಿಕೊಂಡು ಎರಡುಕೈಯಿಂದ ನೂಲೇಣೀನ ಸುತ್ತ್ಯಾಕಿ ಸುತ್ತ್ಯಾಕೀ ಅದ್ಹೇಗೆ ಬಿಗಿದ್ನೋ .... ಎದ್ರುಗೇ ನಿಂತಿದ್ದ ನನಗೆ ಅರ್ಥವೇ ಆಗ್ಲಿಲ್ಲ. 'ಆ ಕೊನೇ ಹಿಡುಕೋ ಹುಷಾರೂ' ಂತ ಗಳುವಿನ ಒಂದು ಕೊನೆ ನನ್ನ ಕೈಲಿ ಕೊಟ್ಟದ್ದು ಜ್ಞಾಪಕ, ಇನ್ನೊಂದ್ ಕೊನೆ ಅವನೆತ್ಕೊಂಡದ್ದು ಜ್ಞಾಪಕ. ಮಣೇಗೂ ಗಳುಗೂ ನೂಲೇಣಿ ಹಾಗೆ ಬಿಗಿದು ಒದ್ದಾಡ್ತಿರೋ ನಾಗರಹಾವ್ನ ಅವನಿಷ್ಟದ ಪ್ರಕಾರ ಹೊತ್ಕೊಂಡ್ಹೋದ್ವಿ, ಹಿತ್ತಲ ತೋಟಕ್ಕೆ ಇಳಿಸಿದ್ವಿ. ಆಗ್ಲಾದ್ರೂ ಕಲ್ಲೋ ಮಣ್ಣೋನೋ ತಗೊಂಡು ಚಚ್ಚಿ ಕೊಲ್ಬಾರ್ದಾಗಿತ್ತೇ ಆ ಹಾವ್ನ! ಉಹುಂ! ಶಾಮಿಯ ಸೇಡು ತೀರ್ಬೇಕಲ್ಲ. ಜೋಬಿಂದ ಒಂದು ಪೆನ್ನೈಫ್ ತೆಗೆದು ಅಲ್ಲೇ ಇದ್ದ ಹುಣಸೇ ಮರದಲ್ಲಿ ನಾಲ್ಕಾರು ಛಡಿಗಳು ಕತ್ತರಿಸಿಕೊಂಡು ಮಣೇನ ನೆಲದ್ಕಡೆ ಕಟ್ಟಿದ. ಹಾವು ಮೇಲ್ಗಡೆ .... ಹೊಡೆದಾ ಹೊಡೆದಾ ಹೊಡೆದಾ ನೋಡೀ ಆ ಹಾವ್ನ! ಆ ನಾಲ್ಕು ಛಡಿಗ್ಳು ಕಿತ್ತು ಕಡ್ಡಿಯಾಗೊವರ್ಗೂ ಹೊಡೆದಾ ................ "ಸಾಯಿ ಸಾಯಿ .... ಆದ್ರೆ ನಮ್ಮಸೇಲಿ ಈಗ್ಯ್ಯಾ ನರುಳೋ ಹಾಗೆ ನೊಂದೂ ನೊಂದೂ ಸಾಯಿ! ನೀನಲ್ವೇ ಕಡಿದಿದ್ದು? ನೀನಲ್ದಿದ್ರೇನೂ ನಿಮ್ಮಪ್ಪ, ನಿಮ್ಮಣ್ಣ ನಿಮ್ಮಮ್ಮ ಕಡಿದಿರಬಹುದು. ನಿನ್ನೀ ಹಾಳು ಹಾವಿನ ಜಾತೀ ಜಾತೀನೆ ನಿರ್ಮೂಲವಾಗೋವರಿಗೂ ನನ್ನ ಮುಯ್ಯಿ ತೀರೋದಿಲ್ಲ" ಅಂತ ಆ ಹಾವ್ನ ಹೊಡೆದೂ ಹೊಡೆದೂ, "ಒಂದೆಂಟ್ಹತ್ತು ಸೌದೆ ಒಂದು ಸೀಸೆ

ಸೀಮೆಯೆಣ್ಣೆ ತಾ " ಅಂದ. ಒಂದೂ ತೋಚ್ದೆ, ಅವನು ಕೇಳಿದ್ನ ತಂದಿಡುತ್ಲೆ ಮಣೇಗೆ ಕಟ್ಟೆ ಇವನ ಹೊಡೆತದಲ್ಲಿ ಒಂದೊಂದು ನರಾನು ಕಿತ್ತು ರಕ್ತದಲ್ಲಿ ತೊಯ್ದೋಗ್ಯೊ ಇನ್ನೂ ಬುಸುಗುಟ್ತಿರೋ ಹಾವಿನ್ಮೇಲೆ ಸೌದೇನ ಪೇರ್ಸಿ ಸೀಮೆ ಯೆಣ್ಣೇನೂ ಸುರ್ದು ಜೋಬಿಂದ ಬೆಂಕಿಪೆಟ್ಟಿಗೆ ತೆಗೆದು ಕಡ್ಡಿಗೀಚಿ, ಸೌದೇ ಗಿಟ್ಟು, ಅದೇ ಉರೀಲಿ ಒಂದು ಸಿಗರೇಟ್ನ ಹತ್ತಿಸ್ಕೊಂಡು ಸೇದ್ತಾ ನಿಂತಿದಾನೆ ಶಾಮಿ. ಹಿಂದೆಲ್ಲ ಮನೆವ್ರು. ಒಂದ್ಕಡೆ ಅಳಿಯ್ನ ಅಪಾಯದಿಂದ ಹತ್ತಿದ ಬೆದರ್ಕೆ ಇನ್ನೂ ಹೋಗ್ಲಿಲ್ಲ. ಅವನು ಬದುಕಿಬಂದ ಸಂತೋಷ ಇನ್ನೂ ಹತ್ತಿಲ್ಲ ಮನಸ್ಗೆ. ಇನ್ನೊಂದು ಕಡೆ ಅಳಿಯನ್ನ ಬದುಕಿಸ್ದ ಶಾಮಿಮೇಲಿನ ಮಮತೆ—ಅವನು ಕೈಗೆ ಸಿಕ್ಕಿದ ಹಾವ್ಗೆ ಮಾಡ್ತಿರೋ ಚಿತ್ರಹಿಂಸೆಯ ಅಸಹ್ಯ ದಲ್ಲಿ ಕೊಚ್ಕೊಂಡೇ ಹೋಯ್ತು! ಎಲ್ರೂ ನೋಡ್ತಿದಾರೆ. ಬೀಗಿತಿ ಮಟ್ಟೋಗಿ ಮುಂದಕ್ಕೆ ಬಂದು " ಇದೇನ್ಮಗು? ನಾವು ಇವತ್ತು ಇದ್ದ ವಿಪತ್ತಿನ ಪರಿಹರಿ ಸೋಕೆ ಪರಮಾತ್ಮನೇ ಕಳುಹಿಸಿದ್ದಿರಬೇಕು ನಿನ್ನ. ನಮ್ಮ ಪಿತೃಗಳಿಗೆ ಪಿಂಡಕ್ಕೆ ದಾರಿ ನನಗೊಬ್ನೇ ಮಗ. ಅವನ್ನೂ ಅಪಮೃತ್ಯು ಬಾಯಿಂದ ತಪ್ಪಿಸ್ದೆ. ನನ್ನ ಸೊಸೆ ಮಗಳಿಗಿಂತ ಜಾಸ್ತಿ ನನಗೆ. ನಿನ್ನ ಸ್ನೇಹಿತನ ತಂಗಿ! ಅವಳ ಮಾಂಗಲ್ಯಾನೂ ರಕ್ಷಿಸ್ದೆ. ಆದರೂ ಇದಕ್ಕೆಲ್ಲಾ ಕಾರಣ ಆ ಹಾವು: ಅರಿಯದ ಜಂತು. ಏನೋ ನಮ್ಮ ಭಕ್ತಿ ಸುಬ್ರಾಯನ ಷಷ್ಠೀ ದಿನ ಪರೀಕ್ಷಿ ಸೋಕೇ ಆ ಹಾವ್ನ ಕಳಿಸಿ, ರಕ್ಷಿಸೋಕೆ ನಿನ್ನೂ ಕಳುಹಿಸಿದ ದೇವ್ರು- ಈ ಅನ್ಯಾಯ ಹಿಂಸೇನ ಒಪ್ಪ್ಯಾನೇ? ಹಾವಾಗ್ಲಿ ಹುಲಿಯಾಗ್ಲಿ .... ದುಷ್ಟಮೃಗ ಗಳ್ನ ಕೊಲ್ಲೋದು ಪಾಪವಲ್ಲ. ಜೀವಸಹಿತ ಹೀಗೆ ದಹಿಸೋದ್ನ ದೇವ್ರೂ ಪ್ಪ್ಯಾನೇ ಮಗು? ಅನ್ನುತ್ಲೂ ನಮ್ಮ ಶಾಮಿ ಕಣ್ಣುಗ್ಳು ಕಿಡಿ ಹಾರಿಸ್ತಾ " ಈ ಹಿಂಸೆ ಒಪ್ಪ್ಯಾನೇ ಅಂತೀರಾ ದೇವ್ರು? ಹಮ್ಮಯ್ಯ! ಇದಕ್ಕಿಂತ ಅನ್ಯಾಯ ಹಿಂಸೆ ನನಗೂ ನನ್ನ ತಂಗೀಗೂ ನಮ್ಮನೇಗೆಲ್ಲಾ ತಂದಿಟ್ಟ ನಗ್ತಿದ್ದ ದೇವ್ರು ಈ ಹಿಂಸೆಗೇನೂ ಹೇಸ್ಗೆ ಪಡೋಹಾಗಿಲ್ಲ!" ಅಂತಾ ಶಾಮಿ ಎರಡು ಕೈಯಿಂದಲೂ ಮುಖವನ್ನು ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅಳ್ತ ಕೂತ್ಕೊಂಬಿಟ್ಟ. ಬೀಗ್ತಿ ಚಿನ್ನದಂಥ ಹೆಂಗ್ಸು. ಚಿನ್ನದಂಥ ಹೃದಯ, ಹೇಗಿದ್ರೂ ಹೊತ್ತೋಯ್ತೆ ಹೆತ್ತೋಯ್ತೆ. ಧಾಂಡಿಗನಾದ ಗಂಡ್ಸು ನನಗೆ ತಿಳಿಯದ ವಿಷಯ ಎಷ್ಟು ಮಂದಟ್ಟಾಯಿತೋ ಕಾಣೆ ಆಕೆಯ ಮನಸ್ಸಿಗ;

ಶಾಮಿ ಹತ್ತಿರ ತಾನೂ ಕುಳಿತು, "ಮಗೂ, ನೀನೇನು ಮಾಡಿದ್ರೂ ನಾವು ಬೇಡ ಅನ್ನೋ ಹಾಗಿಲ್ಲ. ನೀನು ಯಾರೂಂಬೋದು ನನಗಿನ್ನೂ ಗೊತ್ತಿಲ್ಲ. ಆದ್ರೂ ಹೋಗೇಬಿಟ್ಟಿದ್ದ ನಮ್ಮ ಹುಡಗ ನಿನ್ನಿಂದ ಬದುಕಿದ. ನೀನು ಯಾರಾದ್ರೂ, ನಮ್ಮನೇಗೆ, ನನ್ನ ಭಾಗಕ್ಕೆ ದೇವ್ರು. ಆದರೂ ಈ ಹಾವಿನ ಮೇಲೆ ನಿನಗಿರೋ ಛಲಾನ ಗಮನಿಸಿದ್ರೆ .... ನಿಮ್ಮನೇಲಿ ಏನೋ ಅನಾಹುತ .... ಶಾಮಿ ಮುಖಾನ ಸವರ್ತ "ಹೇಳು ಮಗು .... ದುಃಖಾಂಬೋದು ಮನಸ್ನಲ್ಲೇ ಇಟ್ಕೊಂಡ್ರೆ ಹೃದಯಾನ ತಿಂದುಬಿಡುತ್ತೆ. ಇಷ್ಟ್ರಿಗೆ ಹೇಳ್ಕೊಂಡ್ರೆ .... ಕಮ್ಮಿ ಆಗುತ್ತೆ ದುಃಖ! ಹೇಳು ಮಗು!" ಅನ್ನುತ್ಲೂ ಶಾಮಿ "ಹೇಳೋದೇನಿದೆಯಮ್ಮಾ! ನಾನೂ ನನ್ತಂಗಿ ಅವಳಿಜವ್ಳಿ. ನಮ್ಮ ಚಿಕ್ಕ ವಯಸ್ಸಿನಲ್ಲೇ ತಂದೇತಾಯೀನ ಕಳಕೊಂಡ್ವಿ. ನಮ್ಮಿಬ್ಬರ್ನ ತಮ್ಮಕ್ಕಳಹಾಗೆ ಎತ್ತಿ ಆಡ್ಸಿ ಬೆಳಸಿ ಮುಂದಕ್ಕೆ ತಂದೋವ್ರು ನಮ್ಮ ಸೋದರತ್ತೇನೂ ಆಕೆ ಗಂಡ್ನೂವೆ. ನಮ್ತಂದೆ ಬಿಟ್ಟಿಟ್ಟುಹೋದ ಭೂಮಿ ಕಾಣೇನೂ ತಮ್ಮಾಸ್ತೀಗಿಂತ ಹುಷಾರಾಗಿ ನೋಡ್ಕೊಳ್ತ ತಮಗೆ ಮಕ್ಕಳಿಲ್ದಿದ್ರೂವೆ ನನ್ನೂ ನನ್ತಂಗೀನ್ನೂ ತಮ್ಮಕ್ಕಳ ಹಾಗೆ ಬೆಳಸಿದ್ರೂವಮ್ಮಾ. ನಾನು ನಿಮ್ಮ ಶಾಮಿ ಜೊತೇಲಿ ಓದ್ತಿದ್ದೆ ಹೈಸ್ಕೂಲ್ನಲ್ಲಿ. ಆಗ ವರ ನಿಶ್ಚಯ ಆದ್ದು ನನ್ತಂಗೀಗೆ. ಜಹಗೀರ್ದಾರ್ರ ಮಗ. ಮೈಯಿ ಮುಖ, ಬುದ್ಧಿ, ಗುಣ ಚಿನ್ನದಹಾಗೆ. ನಮ್ಮತ್ತೆ ಮಾವನ ಸಂತೋಷಕ್ಕೆ ಎಣೆಯೇ ಇಲ್ಲ. ಸಾವಿರಾರು ರೂಪಾಯಿ ಖರ್ಚು ಮದುವೇಗೆ. ಬೀಗರಿಗೂ ಬೀಗರಿಗೂ ಪೋಟಾಪೋಟಿ ಖರ್ಚು. ಮದುವೇನೂ ಆಯ್ತು. ನಾಗೋಲೀದಿನಾವಮ್ಮಾ; ನಮ್ಮ ಬಂಗಲೇ ಎದುರು ಬಂಗಲೇಲಿ ವರ ಇಳಿದಿದ್ದದ್ದು. ಕೊನೇ ಉರಟಣೆ ಒಂದಾಗಬೇಕು ನಮ್ಮನೇಲೀಂತ ಆಸೆ ನಮ್ಮ ಸೋದರತ್ತೆಗೆ. ಸಾಯಂಕಾಲ ನಮ್ಮನೇ ಹೆಂಗಸ್ರೆಲ್ಲಾ ವಾದ್ಯದ್ಸಮೇತ ಕರೆತಂದ್ರು ಅಳಿಯನ್ನ. ನಮ್ಮ ಬಂಗ್ಲೆ ಸೇರಿ ಮೆಟ್ಲು ಮೇಲೆ ಕಾಲಿಡ್ತಿದಾನೆ ಅಳಿಯ "ಹಯ್ಯೋ, ಎಡಗಾಲು ಮೊದಲು ಇಡಬೇಡಿ"ಂತ ಒಬ್ಬ ಮುದಿ ಮುತ್ತೈದೆ ಹೇಳುತ್ತಿದ್ದಹಾಗೇನೇವೇ ಆ ಮೆಟ್ಲಂಚಿನ ಮೇಲೆ ಎಡಗಾಲಿಟ್ಟುಬಿಟ್ಟ—ನಮ್ಮ ಭಾವ ಮೆಟ್ಲಂಚಿನ ಪಕ್ಕ ಗುಲಾಬೀ ಗಿಡಗಳ ಪೊದರು. ಅಳಿಯ ಕಾಲಿಟ್ಟದ್ದು ನೋಡಿದೆ. ಇಟ್ಟಕಾಲ್ನ ರೋಜಾ ಪೊದರಿಂದ ಒಂದು ಹಾವಿನ ಹೆಡೆ ಕುಕ್ಕಿ ಕಣ್ಮರೆಯಾದ್ದು ನೋಡ್ದೆ. ಹಯ್ಯೋಂತ ಬೀಳ್ತಿದ್ದ

ಭಾವನ್ನ ಹಿಡುಕೊಂಡ್ವೀ. ಇನ್ನೇನು ಡಾಕ್ಟ್ರು ಬಂದದ್ದಾಯಿತು, ಮಂತ್ರವಾದಿಗಳಾಯ್ತು, ಏನಾದ್ರೆ ಏನು? ಬೆಳಕು ಹರಿಯೋಕೆ ಮುಂಚೆ ತಾಲಿ ಕಟ್ಟೋವ್ನು ನನ್ತಂಗಿ. ಐದು ದಿನದ ಹೆಂಡ್ತಿ. ಹುಡ್ಕಿದೀನಿ ಹುಡ್ಕಿದೀನಿ ನೋಡೀಮ್ಮಾ ಆ ತೋಟವೆಲ್ಲಾ; ನನ್ನ ಅವಳಿಜವಳಿ ತಂಗಿ ಜನ್ಮಾನ್ನೇ ನುಂಗಿದ ಆ ಹಾವ್ನ; ಸಿಕ್ಲಿಲ್ಲ; ಈ ದುಃಖದಲ್ಲೇ ಕೊರಗೀ ಕೊರಗೀ ಸತ್ರು ನಮ್ಮ ಸೋದರತ್ತೇನೂ ಮಾವ್ನೂ! ನಮಗಿನ್ಯಾರೂ ದಿಕ್ಕಿಲ್ಲ. ಧನ ಧಾನ್ಯ ಎಷ್ಟಿದ್ರೂನೂವೆ ನನಗೆ ನನ್ತಂಗಿ, ನನ್ತಂಗೀಗೆ ನಾನು; ಅದೇಮ್ಮಾ ನಮ್ಮ ಭಾವನ್ನ ಕೊಂದ ಹಾವಿಗೆ ನಾವಾಗ್ಲೀ ನಮ್ಮ ಭಾವನಾಗ್ಲೀ ಒಂದು ಪಾಪವೂ ಮಾಡಲಿಲ್ಲವಲ್ಲಮ್ಮಾ? ಆದ್ರು.... ಏನೋಮ್ಮಾ ಆ ಹಾವು ಜಾತೀಂದ್ರೆ.... ಪ್ರಾಣಸಹಿತ ಬಿಡೋಕೆ ನನ್ನಿಂದ ಆಗದು...."!

**ಯಾ**ಕೆ ಹೇಳ್ತೀನೆ ಗುಡಿಕಟ್ಟಿ, ವಿಗ್ರಹಾನ್ನ ಬ್ರಾಹ್ಮಣರು ಪ್ರತಿಷ್ಠಿಸಿ, ವರ್ಷ ವರ್ಷಾನೂ ಪೂಜೇ ಆಗ್ತಿರೋ ಕಲ್ಲುಗೊಂಬೇನ ಪೂಜೇ ಮಾಡೋದು ಸರಿಯೋ ತಪ್ಪೋಂತ ವಾದಿಸ್ತಿದೀರಲ್ಲ ನೀವೆಲ್ಲಾ! ಇಂಗ್ಲೀಷ್ ಮೋಜ ಹಾಕ್ಕೊಂಡು ಬಣ್ಣದ ಕಾಲ್ಚೀಲ, ಬಣ್ಣದ ಷರಟು, ಕ್ರಾಪ್ ತಲೆ, ಬಾಯಲ್ಲಿ ಸಿಗರೇಟು,-- ನಮ್ಮ ಶಾಮಿ ಮದರಾಸ್‌ನಲ್ಲಿ ಫುಟ್‌ಬಾಲ್ ಆಡ್ತಿದ್ದಾಗ ತೆಗೆದು ನನಗೊಂದು ಕಾಪಿ ಕಳಿಸಿದ ಫೋಟೋ,—ಅದ್ನ ಕಟ್ಹಾಕ್ಸಿ ಅದೇ ಕೋಣೇಲಿ ಅದೇ ಚಿನ್ನ ಬೆಳ್ಳಿ ಚಾಮುಂಡಿ ಪ್ರಭೃತಿಗಳ ತಲೇ ಮೇಲೆ ತಗುಲ ಹಾಕಿದ ತಸ್ಬೀರ್ನ ನನ್ನ ತಂಗೀನೂ ಭಾವ್ನೂ ಪೂಜೆ ಮಾಡೋದು ತಪ್ಪೇ ನೆಪ್ಪೇಂಬೋದ್ನ ನಾನ್ನಿಷ್ಕರ್ಷಿಸಲಾರೆ. ಒಂದು ವೇಳೆ ನೀವುಗಳು ...............!

ಶೆಟ್ಟ್ರು—ಮಂಚಿ ಮಾಟಾಂಟಿ! ತಪ್ಪೆಕ್ಕಡವಚ್ಚೆ? ರಾಮುಡೇಮಿ, ಕೃಷ್ಣುಡೇಮಿ, ಪೆದ್ದ ಪೆದ್ದ ಯುಗಮುಲೋ ವಚ್ಚಿನ ಪೆದ್ದಾತಾರಮುಲು ಪೇದವಾಳ್ಳ ರಕ್ಷಣಾನಿಕಿ ಪರಮಾತ್ಮುಡು ಪೆದ್ದಾತಾರಮು ಎತ್ತಿನ ಐಕಟ್ಟು. ಈ ಚಿನ್ನ ಯುಗಮುಲೋ ಕಲಿಯುಗಮುಲೋ ಚಿನ್ನ ಚಿನ್ನ ಔತಾರಮುಲು ಎನ್ನಿಯೋ ಎತ್ತುತಾಡು. ಮೋಜ ವೇಸ್ಕೊಂಟೆ ಯೇಮಿ, ಸಿಗರೇಟು ತಾಗ್ತೆ ಯೇಮಿ? ಪದಿ ಜನಾಲ್ನಿ ಬದುಕಿಂಚ್ತೆ....ಪರಮಾತ್ಮುಡುನಿ ಔತಾರಮು ರೂಪು ಎಟ್ಲುಂಟೆ ಯೇಮಿ; ಪರಮಾತ್ಮುಡು ಎತ್ತಿನ ಪಂದಿರೂಪಮು ಎಟ್ಲುಂಡಿನ ಯೇಮಿ

ಭೂದೇವಿನಿ ಬದುಕಿಂಚ ಲೇದಾ? ಈ ಕಲಿಯುಗಂಲೋ ಚಿನ್ನ ಚಿನ್ನ ಔತಾರಮ್ಲು ಎನ್ನಿಯೋ ಎತ್ತುತಾನೇ ಉಂಟಾಡು ದೇವುಡು—ಲೇಕಪ್ತೋತೆ ವಾನ್ನಿಕೂರ್ಚೇದೇನ್ಕಿ? ಎನಮು ಪ್ರೋತ ಸಲ್ಲಗ ಉಂಡೇದಾನ್ಕ? ಕಾದು. ನ್ಯಾಲ ತಡ್ಚಿ ಪೈರು ಪಂಡಿ ಪದಿಜನಾಲ ಕಡುಪು ನಿಂಡೇದಾನ್ಕಿ. ಪೆದ್ದಾವ್ಳ್ಳು .... ಮೀರು ಚೆಪ್ಪಿತ್ರೇ ಶಾಮಣ್ಣವಾಳ್ಳುಕಥ.... ಅಟುವಂಟಿ ಪದಿ ಔತಾರಮುಲು ಇಪ್ಪುಡು ಕೂಡಾ ಉಂಡುಟ್ಣೇ ವಾನ ಕೂರ್ಚೇದಿ. ಗುಡ್ಲೋ ರಾಯ್ತೋ ಚೇಸ್ತೇ ಯೇಮಿಾ ಇಂಡ್ಲುಲೋ ತಪ್ಪೀರು ಪೆಟ್ಬ್ರೇಯೇಮಿ .... ! ?

ಶಾಮಣ್ಣ—(ಗುಡಿಯ ಬಾಕಿಲನ್ನು ಇಣಿಕಿ ಹೊರಗೆ ನೋಡಿ) ಇಕೋ ಶಾಮಿ ಬಂದ....

ಶೆಟ್ರು—ಇದೇಮಿದಿ! ಈ ಪಿಲ್ಲಕಾಯಾ ....? ಬೀ. ಯೆ. ಪ್ಯಾಸ್ಚೇಸಿ ಪಾಮುಸಿ ಚಂಪಿಂದಿ .... ! ?

ಶಾಮಣ್ಣ—ಬೆಚ್ಚು ಬೀಳ್ಬೇಡಿ! ಇವನವನಲ್ಲ .... [ಘಟ್ಟಿಯಾಗಿ] ಮೆಲ್ಲಗೋ ಶಾಮಿ, ಮುರಿದ ಮೆಟ್ಲು .... ಜಾರಿಬಿದ್ದು ಮೊಣಕಾಲು ಮುರ ಕೊಂಡೀಯ! ಮೆಲ್ಲಗೆ ಬಾ (ಎದ್ದು ನಿಂತು) ಈ ಶಾಮಿಾ ಆ ಶಾಮಿಾ ಅಲ್ಲ. ನನ್ನ ಸೋದರಳಿಯ. ನನ್ನ ತಂಗಿಯ ಮಗ! ಆಗ ಗರ್ಭದಲ್ಲಿದ್ದ! ಆ ಶಾಮಿಾ ಹಾಗೇ ಆಗ್ಬೇಕೂಂತ ಆಶೆ ಇಟ್ಕೊಂಡು ಶಾಮಿ ಹೆಸರ್ನ ನಮ್ಮ ಭಾವ್ನೂ ನನ್ತಂಗೀನೂ ಇವನಿಗಿಟ್ಟಿದ್ದು. ನಮ್ಮೂರಿಗೆ ಬಂದಿಧಾರೆ ಇಬ್ರೂ! ಎಳೀಬೇಡ್ರೋ! ಎಳೀಬೇಡ್ರೋ! ಬಂದೆ! ಬರ್ತೀರಾ? ಎಲ್ಲೂ ಹೋಗೋಣವೇ?

ಆರ್. ಕೃಷ್ಣಶೆಟ್ಟಿ, ಪ್ರಿಂಟರ್, ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.